KHPT
Karnataka Health Promotion Trust
KSAPS
13ನೇ ಸಂಚಿಕೆ,
ಡಿಸೆಂಬರ್ 2009

# ವಿಚಾರ

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ ಮತ್ತು ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್‌ನ ಜಂಟಿ ಪ್ರಕಟಣೆ



## ವಿಶ್ವ ಏಡ್ಸ್ ದಿನ

### ಹೊಸ ಭರವಸೆಗಳ ಬೆಳಕು

ವಿಶೇಷ ವರದಿ

ಮುದ್ರಣ ಮತ್ತು ಪ್ರಕಟಣೆ: ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್, ರಾಜಾಜಿನಗರ ಐಟಿ/ಬಿಟಿ ಪಾರ್ಕ್, ನಂ. 1–4, ರಾಜಾಜಿನಗರ ಕೈಗಾರಿಕಾ ಪ್ರದೇಶ, ಕೆಎಸ್‌ಎಸ್‌ಐಡಿಸಿ ಆಡಳಿತ ಕಚೇರಿ ಹಿಂಭಾಗ, ರಾಜಾಜಿನಗರ, ಬೆಂಗಳೂರು–560 044, ಪ್ರತಿಕ್ರಿಯೆಗಳನ್ನು ಅಂಚೆ ಮೂಲಕ ಕಳುಹಿಸಿ ಅಥವಾ ಈ ಮೇಲ್ (mallikab@khpt.org) ಮಾಡಿ. ಈ ಹಿಂದಿನ ವಿಚಾರ ಸಂಚಿಕೆಗಳಿಗಾಗಿ www.khpt.org ಗೆ ಭೇಟಿ ಕೊಡಿ. ಉಚಿತ ವಿತರಣೆ. ಪ್ರಕಾಶಕರ ಅನುಮತಿ ಪಡೆದು ವಾಣಿಜ್ಯೇತರ ಉದ್ದೇಶಗಳಿಗೆ ಮರುಮುದ್ರಿಸಬಹುದು.

# ಸಂಪಾದಕೀಯ

# ವಿಚಾರ

ಎಚ್‌ಐವಿ ಮತ್ತು ಏಡ್ಸ್ ಬಗೆಗಿನ ತ್ರೈಮಾಸಿಕ ವಾರ್ತಾಪತ್ರ. ಖಾಸಗಿ ಪ್ರಸಾರಕ್ಕೆ ಮಾತ್ರ


**ಸಂಪಾದಕರು**

ಆರ್ ಆರ್ ಜನ್ನು, ಯೋಜನಾ ನಿರ್ದೇಶಕರು, ಕೆಸಾಪ್ಸ್

**ಸಲಹಾ ಮಂಡಳಿ**

ಮುರಳೀಧರ್, ಜೆಡಿ, ಐಇಸಿ, ಕೆಸಾಪ್ಸ್
ಸ್ಟೀಫನ್ ಮೋಸೆಸ್, ಕೆಎಚ್‌ಪಿಟಿ
ಮೋಹನ್ ಎಚ್ ಎಲ್, ಕೆಎಚ್‌ಪಿಟಿ
ಸರೋಜ, ಕೆಎನ್‌ಪಿ+
ರೇಖಾ, ಚೈತನ್ಯ ಮಹಿಳಾ ಸಂಘ
ಸವೂರ್, ಟಿಎಸ್‌ಯು
ಡಾ. ರೆಹನಾ ಬೇಗಂ, ಯುನಿಸೆಫ್ ಸಲಹೆಗಾರರು

**ಕಾಪಿ ಎಡಿಟರ್**

ಮಲ್ಲಿಕಾ ಬಿದ್ದಪ್ಪ ಕೆ

**ಅನುವಾದ ಮತ್ತು ವಿನ್ಯಾಸ**

ಹಮೀದ್ ಕೆ

**ಬರಹಗಾರರು**

ಶ್ವೇತಾ ಶೆಟ್ಟಿ, ಟಿಎಸ್‌ಯು, ಕೆಸಾಪ್ಸ್
ಶಾಲಿನಿ ಭಟ್ಟಾಚಾರ್ಯ, ಕೆಎಚ್‌ಪಿಟಿ
ಮೇರಿ ಜೋನ್ಸ್, ಕೆಎಚ್‌ಪಿಟಿ
ಲಕ್ಷ್ಮಿ ವಿಶ್ವನಾಥ, ಕೆಎಚ್‌ಪಿಟಿ
ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್
ಚೈತನ್ಯ ಮಹಿಳಾ ಸಂಘ
ನಂಜೇಗೌಡ ಜಿ ಯು, ಕೆಸಾಪ್ಸ್
ಶಾರದಾ ನಾಯ್ಕ್, ಕೆಸಾಪ್ಸ್
ಪಿ ಹೆಗಡೆ, ಆ್ಯಕ್ಷನ್ ಏಡ್
ಪ್ರವೀಣ್ ಜಿ ಎಸ್, ಐಹ್ಯಾಟ್
ಸಿಫಾರ್ ತಂಡ
ಕುಲಂದೈ ರಾಜ್, ಐಹ್ಯಾಟ್
ಸಿದ್ಧಾರೂಢ, ಕೆಎಚ್‌ಪಿಟಿ
ರೆಹನಾ ಬೇಗಂ, ಯುನಿಸೆಫ್ ಸಲಹೆಗಾರರು
ಡಾ. ಸುರೇಶ್ ಶಾಸ್ತ್ರಿ, ಎಆರ್‌ಟಿ ಕಾರ್ಯಕ್ರಮ ಅಧಿಕಾರಿ
ರಾಜು ನರಸಯ್ಯ, ಐಸಿಟಿಸಿ
ಪವನ್‌ಕುಮಾರ್ ಶೆಟ್ಟಿ, ಕಾರಿಡಾರ್ಸ್


**ವಿಚಾರ** ಹೊಸ ಸಂಚಿಕೆಗೆ ಸ್ವಾಗತ. ಕಳೆದ ತ್ರೈಮಾಸಿಕ ಅತ್ಯಂತ ವೈವಿಧ್ಯಮಯವಾಗಿತ್ತು. ಈ ಸಂಚಿಕೆಯಲ್ಲಿ ಕಾರ್ಯಕ್ರಮಗಳು ಮತ್ತು ಸಾಮಾನ್ಯ ಮಾಹಿತಿಯ ಬಗೆಗಿನ ವರದಿಗಳ ಜೊತೆಗೆ ಯೋಜನೆಯ ಮಹತ್ವದ ಅಂಶಗಳ ಬಗೆಗಿನ ಲೇಖನಗಳೂ ಸೇರಿವೆ. ವಿಶ್ವ ಆರೋಗ್ಯ ದಿನ ಕಾರ್ಯಕ್ರಮ ಈಗಷ್ಟೇ ಮುಗಿದಿದೆ. ಇದು ರಾಜ್ಯದಲ್ಲಿ ಎಚ್‌ಐವಿ ತಡೆ, ಆರೈಕೆ ಮತ್ತು ಬೆಂಬಲಕ್ಕೆ ಇನ್ನೂ ಹೆಚ್ಚಿನ ಸಹಭಾಗಿತ್ವ ಮತ್ತು ಬದ್ಧತೆಗೆ ಸ್ಫೂರ್ತಿ ನೀಡಿದೆ. ಕೆಸಾಪ್ಸ್ ಮತ್ತು ಕೆಎಚ್‌ಪಿಟಿ ಸಹಭಾಗಿತ್ವದಲ್ಲಿ ಕೆಎನ್‌ಪಿ+ ಎರಡು ದಿನಗಳ ಉಪಗ್ರಹ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದೆ. ರಾಜ್ಯದ ಹಲವು ಕಾಲೇಜುಗಳಲ್ಲಿ ರೆಡ್ ರಿಬ್ಬನ್ ಕ್ಲಬ್‌ಗಳಿಗೆ ಚಾಲನೆ ನೀಡಲಾಗಿದೆ. ಯುವ ಜನತೆಯನ್ನು ಎಚ್‌ಐವಿ ಜಾಗೃತಿ ಕಾರ್ಯಕ್ರಮಗಳ ಕೇಂದ್ರ ಸ್ಥಾನಕ್ಕೆ ಕರೆ ತರುವ ನಿಟ್ಟಿನಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ. ವಿಚಾರದಲ್ಲಿ ಸಹಭಾಗಿ ಎನ್‌ಜಿಒಗಳ ಚಿತ್ರಣವನ್ನು ನೀಡಲು ನಿರ್ಧರಿಸಲಾಗಿದ್ದು ಈ ಬಾರಿಯ ಸಂಚಿಕೆಯಲ್ಲಿ ವಿವೇಕಾನಂದ ಯೂಥ್ ಮೂವ್‌ಮೆಂಟ್ ಈ ಗೌರವವನ್ನು ಪಡೆದುಕೊಂಡಿದೆ. ಸಂಸ್ಥೆಯ ಯಶಸ್ವಿನ ಯಾತ್ರೆಯ ಚಿತ್ರಣ ಈ ಸಂಚಿಕೆಯಲ್ಲಿದೆ.

ಕಳೆದ ಮೂರು ತಿಂಗಳ ಅವಧಿಯಲ್ಲಿ ಜಿಲ್ಲೆಗಳಲ್ಲಿ ಹಲವು ಕಾರ್ಯಕ್ರಮಗಳು ನಡೆದಿವೆ. ವಿಚಾರ ಅವುಗಳಲ್ಲಿ ಪ್ರಮುಖವಾದುದನ್ನು ದಾಖಲಿಸುವ ಪ್ರಯತ್ನ ಮಾಡಿದೆ. ಜಿಲ್ಲಾ ಸಮಾವೇಶಗಳು, ಸಮುದಾಯ ಆಧರಿತ ಸಂಘಟನೆಗಳ ಮೇಳಗಳು, ಸಮುದಾಯ ಸಂದರ್ಶನ, ಕಲಿಕಾ ಭೇಟಿಯೊಂದಿಗೆ ಇನ್ನೂ ಹಲವು ಮಾಹಿತಿಯನ್ನು ಈ ಸಂಚಿಕೆ ಹೊಂದಿದೆ. ಕ್ಷೇತ್ರದಲ್ಲಿ ಮಾಡುತ್ತಿರುವ ಉತ್ಕೃಷ್ಟ ಕೆಲಸ ಮತ್ತು ವಿಚಾರ ಸಂಚಿಕೆಗಳನ್ನು ಅರ್ಥಪೂರ್ಣವಾಗಿ ಹೊರತರಲು ನೀವು ನೀಡುತ್ತಿರುವ ಬೆಂಬಲಕ್ಕೆ ಅಭಿನಂದನೆಗಳು.

ಕೃತಜ್ಞತೆಗಳೊಂದಿಗೆ,

**ಸಂಪಾದಕರು**

## ಒಳಪುಟಗಳಲ್ಲಿ


### ವಿಶೇಷ ವರದಿ

- ವಿಶ್ವ ಏಡ್ಸ್ ದಿನ: ಹೊಸ ಭರವಸೆಗಳ ಬೆಳಕು – 2
- ಉಪಗ್ರಹ ತಂದ ಏಕತೆ: 29 ಜಿಲ್ಲೆಗಳಲ್ಲಿ ಪಿಎಲ್‌ಎಚ್‌ಐವಿಗಳಿಗೆ ಕಾರ್ಯಕ್ರಮ - 4
- ಅಕ್ಷರ ತಂದ ಆತ್ಮವಿಶ್ವಾಸ - 7
- ಎಸ್‌ವಿವೈಎಂ ನಡೆದು ಬಂದ ಹಾದಿ - 9
- ಎಚ್‌ಐವಿ ಆರೈಕೆಗೆ ಸಮನ್ವಯ: ರಾಷ್ಟ್ರೀಯ ಉತ್ತಮ ಪದ್ಧತಿ ಕಾರ್ಯಾಗಾರ - 13
- ರೆಡ್ ರಿಬ್ಬನ್ ಕ್ಲಬ್ – 15
- ಶಿಶು ತಪಾಸಣೆ – 16
- ಹೆತ್ತವರಿಂದ ಮಕ್ಕಳಿಗೆ ಸೋಂಕು ತಡೆ ಸೇವೆ: ಪಿಪಿಟಿಸಿಟಿ ಮತ್ತಷ್ಟು ಮಾಹಿತಿ – 18

### ಕಾರ್ಯಕ್ರಮಗಳು

- ಸೇರ್ಪಡೆ ತರಬೇತಿ: ಸಂಪರ್ಕ ಕಾರ್ಯಕರ್ತ ಯೋಜನೆ - 20
- ಉಡುಪಿ ಎಂಎಸ್‌ಎಂ ಸಮುದಾಯದ ಜಿಲ್ಲಾ ಸಮಾವೇಶ – 21
- ನಿರಂತರ: ಜಿಲ್ಲಾ ಎಚ್‌ಐವಿ/ಏಡ್ಸ್ ನಿಯಂತ್ರಣ ಮತ್ತು ಬೆಂಬಲ ಉಪಕ್ರಮ – 22
- ಆ್ಯಕ್ಷನ್ ಏಡ್: ಹೆಜ್ಜೆಗಲ್ಲುಗಳು ತರಬೇತಿ – 22

### ಸುದ್ದಿ ಸಮಾಚಾರ

- ಎಪಿಎಸಿ ಕಲಿಕಾ ಪ್ರವಾಸ – 23
- ಸೋಲಾಪುರದಲ್ಲಿ ಮೇಳವ – 24

### ನಿಮ್ಮ ಪುಟ

- ಜನಪದ ತಂಡಗಳಿಗೆ ಏಡ್ಸ್ ಜಾಗೃತಿ ಕಾರ್ಯಾಗಾರ – 23
- ಹಾಸನ ಒವಿಸಿ ಕೇಸ್‌ಸ್ಟಡಿ – 26
- ಸಾಂಕ್ರಾಮಿಕ ವಿರುದ್ಧ ಹೋರಾಟಕ್ಕೆ ತಂತ್ರಜ್ಞಾನದ ಸಲಕರಣೆ – 27
- ಚಾಂದಿನಿ– ಒಂದು ಮಾದರಿ – 28
- ಪೋಸ್ಟರ್ ಕಾಂಪಿಟೀಶನ್ – 31




# ವಿಶ್ವ ಏಡ್ಸ್ ದಿನ

## ಹೊಸ ಭರವಸೆಗಳ ಬೆಳಕು

**ಕೆಸಾಪ್ಸ್** ನೇತೃತ್ವದಲ್ಲಿ ಎನ್‌ಜಿಒಗಳು, ಸಮುದಾಯ ಆಧರಿತ ಸಂಘಟನೆಗಳು, ಶಾಲೆಗಳು ಮತ್ತು ಕಾಲೇಜುಗಳಿಂದ ಬಂದು ಸೇರಿದ್ದ ಸಾವಿರಾರು ಜನರ ಸಮ್ಮುಖದಲ್ಲಿ ವಿಶ್ವ ಏಡ್ಸ್ ದಿನ ಆಚರಿಸಲಾಯಿತು. ರಾಜ್ಯದ ಮಕ್ಕಳಿಗೆ ನೀಡಿದ ಭರವಸೆಗಳ ದೀರ್ಘ ಪಟ್ಟಿಗೆ ಎಚ್‌ಐವಿ ಪಾಸಿಟಿವ್ ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಭಾರಿ ಭರವಸೆಯನ್ನೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಶ್ರೀ ಬಿ ಶ್ರೀರಾಮುಲು ಸೇರಿಸಿದರು.

“ಎಚ್‌ಐವಿ ಪಾಸಿಟಿವ್ ಮಕ್ಕಳು ಮತ್ತು ಎಚ್‌ಐವಿ ಸೋಂಕಿನಿಂದ ಮೃತರಾದ ಹೆತ್ತವರ ಅನಾಥ ಮಕ್ಕಳನ್ನು ಒಂದು ವರ್ಷದೊಳಗೆ ದತ್ತು ಪಡೆದು ಅವರಿಗೆ ಉಚಿತ ಶಿಕ್ಷಣ ಒದಗಿಸುತ್ತೇನೆ” ಎಂದು ಶ್ರೀರಾಮುಲು ವಿಶ್ವ ಏಡ್ಸ್ ದಿನದ ಅಂಗವಾಗಿ ಸರಕಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಹೇಳಿದರು.

ಸಚಿವರು ನೀಡಿರುವ ಹಲವು ಭರವಸೆಗಳಲ್ಲಿ ಒಂದಾಗಿರುವ ಇದು ರಾಜ್ಯದಲ್ಲಿ ಎಆರ್‌ಟಿ ಪಡೆದುಕೊಳ್ಳುತ್ತಿರುವ 2700ಕ್ಕೂ ಹೆಚ್ಚು ಮಕ್ಕಳಿಗೆ ದೊಡ್ಡ ವರವಾಗಿದೆ.

ರಾಜ್ಯದ ಶಾಲೆಗಳಲ್ಲಿ ಕಲಿಯುತ್ತಿರುವ ಸೋಂಕು ಹೊಂದಿರುವ ಮಕ್ಕಳ ಪಡಿತರವನ್ನು ದ್ವಿಗುಣಗೊಳಿಸುವ ಬಗ್ಗೆ ಸರಕಾರ ಚಿಂತನೆ ನಡೆಸುತ್ತಿದೆ ಎಂದು ಅವರು ತಿಳಿಸಿದರು. ರಾಜ್ಯದಲ್ಲಿ ಮಕ್ಕಳನ್ನು ದತ್ತು ತೆಗೆದುಕೊಳ್ಳುವುದಾಗಿ ಸಚಿವರು ಹಿಂದೆಯೂ ಭರವಸೆ ನೀಡಿದ್ದರು.

ಆರೋಗ್ಯ ಸಚಿವರು ಜನಪದ ಕಲಾ ಜಾಥಾಕ್ಕೆ ಚಾಲನೆ ನೀಡಿದರು. ಜೊತೆಗೆ ಎಚ್‌ಐವಿಯೊಂದಿಗೆ ಜೀವಿಸುವ ಜನರ ಹಕ್ಕುಗಳ ಸನ್ನದನ್ನು ಬಿಡುಗಡೆಗೊಳಿಸಿದರು. “ಎಚ್‌ಐವಿಯೊಂದಿಗೆ ಜೀವಿಸುವ ಜನರ ಹಕ್ಕುಗಳ ಅಭಿವ್ಯಕ್ತಿಯಾಗಿ ಈ ಸನ್ನದನ್ನು ನಾವು ನೋಡುತ್ತೇವೆ. ಅತ್ಯಂತ ಕಷ್ಟಕರ ಪರಿಸ್ಥಿತಿಯಲ್ಲಿ ಜೀವಿಸುತ್ತಿರುವವರು, ಸಣ್ಣ ಪಟ್ಟಣಗಳು ಮತ್ತು ಕುಗ್ರಾಮಗಳಲ್ಲಿ ಜೀವಿಸುತ್ತಿರುವವರು ಸೇರಿದಂತೆ ಎಚ್‌ಐವಿಯೊಂದಿಗೆ ಬದುಕುವ ಎಲ್ಲ ಜನರನ್ನು ತಲುಪುವುದು ನಮ್ಮ ಸಾಮೂಹಿಕ ಬದ್ಧತೆ ಮತ್ತು ಹೊಣೆಗಾರಿಕೆ” ಎಂದು ಕರ್ನಾಟಕದಲ್ಲಿ ಎಚ್‌ಐವಿಯೊಂದಿಗೆ ಜೀವಿಸುತ್ತಿರುವ ಜನರ ಜಾಲ ಕೆಎನ್‌ಪಿ+ನ ಅಧ್ಯಕ್ಷೆ ಸರೋಜಾ ಪುತ್ರನ್ ಹೇಳಿದರು. ಕಾರ್ಯಕ್ರಮದಲ್ಲಿ ಸನ್ನದಿನ ಜೊತೆಗೆ ಎಚ್‌ಐವಿ ತಡೆಗೆ ಸಂಬಧಿಸಿದ ಕರಪತ್ರ, ಪೋಸ್ಟರ್ ಮತ್ತು ಬ್ರೋಷರ್‌ಗಳಂತಹ ಮಾಹಿತಿ–ಸಂವಹನ ಸಾಮಗ್ರಿಗಳನ್ನು ಬಿಡುಗಡೆಗೊಳಿಸಲಾಯಿತು.

# ವಿಶೇಷ ವರದಿ

ಜನಪ್ರಿಯ ಸಿನಿಮಾ ನಟ ಕರಿಬಸವಯ್ಯ ಎಚ್‌ಐವಿ ಹರಡುವಿಕೆ ತಡೆಗೆ ತಮ್ಮ ಬೆಂಬಲ ಸೂಚಿಸಿದರು. ಎಚ್‌ಐವಿಯೊಂದಿಗೆ ಜೀವಿಸುತ್ತಿರುವ ಜನರ ವಿರುದ್ಧದ ಕಳಂಕ ಮತ್ತು ತಾರತಮ್ಯ ಕಡಿಮೆಗೊಳಿಸುವಂತೆ ಅವರು ಕರೆ ನೀಡಿದರು. ಸುಮಾರು 20 ನಿಮಿಷ ಕಾಲ ಸೇರಿದ್ದ ಅಪಾರ ಜನರನ್ನು ತಮ್ಮ ವಿನೋದಮಯ ಮಾತಿನ ಮೋಡಿಯಿಂದ ಮಂತ್ರಮುಗ್ಧಗೊಳಿಸಿದ ಅವರು, ಎಚ್‌ಐವಿ ತಡೆ ಸೂತ್ರ ಸಂಯಮ, ಏಕಸಂಗಾತಿಗೆ ನಿಷ್ಠೆ ಮತ್ತು ಕಾಂಡೋಮ್ ಬಳಕೆಯನ್ನು ಅವರು ವಿವರಿಸಿದರು.

## ಸಂಪಾದಕರ ಕಾರ್ಯಾಗಾರ

ಕೆಸಾಪ್ಸ್ ಮತ್ತು ಸಿಫಾರ್ ಜೊತೆ ಸೇರಿ ಸಂಪಾದಕರ ವಿಚಾರ ಸಂಕಿರಣವೊಂದನ್ನು ಆವಾಹನ್ ಏರ್ಪಡಿಸಿತ್ತು. ಮುಖ್ಯವಾಹಿನಿಯ ಮಾಧ್ಯಮ ಪ್ರತಿನಿಧಿಗಳು, ರಾಜ್ಯ ಸರಕಾರದ ಸಂಸ್ಥೆಗಳು ಮತ್ತು ಎನ್‌ಜಿಒಗಳನ್ನು ಜೊತೆ ಸೇರಿಸುವುದು ಇದರ ಉದ್ದೇಶವಾಗಿತ್ತು. ಕಾರ್ಯಕ್ರಮದಲ್ಲಿ ಪ್ರಮುಖ ಮಾಹಿತಿಯ ಹಂಚಿಕೆ ನಡೆಯಿತು. ಎಚ್‌ಐವಿ ಮತ್ತು ಏಡ್ಸ್ ತಡೆಯುವುದಕ್ಕೆ ಹೆಚ್ಚು ಏಕೀಕೃತ ಧೋರಣೆ ಅನುಸರಿಸಲು ಅನುಭವ ಮತ್ತು ಒಳನೋಟಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ಜನರ ಮೇಲೆ ಮತ್ತು ನೀತಿ ನಿರೂಪಕರ ಮೇಲೆ ಪ್ರಭಾವ ಬೀರುವ ಮೂಲಕ ಮುಖ್ಯವಾಹಿನಿಯ ಮಾಧ್ಯಮ ಎಚ್‌ಐವಿ ಮತ್ತು ಏಡ್ಸ್ ವಿರುದ್ಧ ಹೋರಾಟದಲ್ಲಿ ಮಹತ್ವದ ಪಾತ್ರವನ್ನೇ ವಹಿಸುತ್ತಿದೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳು ಮತ್ತು ಜನರಿಗೆ ಮಾಧ್ಯಮದ ಪ್ರಯತ್ನ ದೊಡ್ಡ ನೆರವಾಗಿದೆ. ಜನರು ಸೇವೆಗಳನ್ನು ಪಡೆದುಕೊಳ್ಳುವಲ್ಲಿಯೂ ಇದು ಮಹತ್ವದ ಪಾತ್ರ ವಹಿಸಿದೆ.

ಕಾರ್ಯಾಗಾರದಲ್ಲಿ 28 ಹಿರಿಯ ಪತ್ರಕರ್ತರು ಮತ್ತು 11 ಸಂಪಾದಕರು ಭಾಗವಹಿಸಿದ್ದರು. ಸಮುದಾಯದ ಸದಸ್ಯರು ತಮ್ಮ ಅನುಭವಗಳನ್ನು ಹಂಚಿಕೊಂಡರು. ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವಿವಿಧ ಎನ್‌ಜಿಒಗಳ ಪ್ರತಿನಿಧಿಗಳೂ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಸಮುದಾಯದ ಸಮಸ್ಯೆಗಳ ಬಗ್ಗೆ ಸಂಪಾದಕರು ಸಹಾನುಭೂತಿ ವ್ಯಕ್ತಪಡಿಸಿದರು. ವಿಶ್ವ ಆರೋಗ್ಯ ದಿನ ಕಾರ್ಯಕ್ರಮಕ್ಕೆ ಮಾಧ್ಯಮದಲ್ಲಿ ದೊರೆತ ವ್ಯಾಪಕ ಪ್ರಚಾರ ಇದಕ್ಕೆ ಸಾಕ್ಷಿಯಾಗಿದೆ.

ರಾಜ್ಯದಲ್ಲಿ ಏಡ್ಸ್ ತಡೆ ಮತ್ತು ಆರೈಕೆಗೆ ವಿಶೇಷ ಕೊಡುಗೆ ನೀಡಿದ ಹದಿನೈದು ಜನ ವಿಶೇಷ ವ್ಯಕ್ತಿಗಳನ್ನು ಕೆಸಾಪ್ಸ್ ಸನ್ಮಾನಿಸಿದ್ದು ಈ ಕಾರ್ಯಕ್ರಮದ ವಿಶೇಷವಾಗಿತ್ತು. ಪಾಸಿಟಿವ್ ಹೆರಿಗೆ ಮಾಡಿಸಿದ ವೈದ್ಯರು ಮತ್ತು ಆಸ್ಪತ್ರೆಗಳು, ರಾಜ್ಯದ ಎಲ್ಲ ಮೂಲೆಗಳಿಗೂ ಎಚ್‌ಐವಿ ಜಾಗೃತಿಯನ್ನು ಕೊಂಡೊಯ್ದ ಮಾಧ್ಯಮ ಪ್ರತಿನಿಧಿಗಳು ಇದರಲ್ಲಿ ಸೇರಿದ್ದರು.

**ವೈದ್ಯರು:** ಡಾ. ಜಯಶ್ರೀ ಎಮ್ಮಿ – ಬೀಳಗಿ ತಾಲೂಕು ಆಸ್ಪತ್ರೆ, ಬಾಗಲಕೋಟೆ ಜಿಲ್ಲೆ, ಡಾ. ವಿಜಯ ಬಿರಾದಾರ್ – ಜಿಲ್ಲಾ ಆಸ್ಪತ್ರೆ, ಬಿಜಾಪುರ, ಡಾ. ಜಿದ್ಯಾ ವೆಂಕಟೇಶ್ ಹುಯಿಲಗೋಳ, ಹಿರಿಯ ಶಿಶು ತಜ್ಞರು – ಜಿಲ್ಲಾ ಆಸ್ಪತ್ರೆ, ಬೆಳಗಾವಿ

**ಸರಕಾರಿ ಸಂಸ್ಥೆಗಳು:** ಡಾ. ಮಡಗಟ್ಟಿ, ನಿರ್ದೇಶಕರು, ಕಿಮ್ಸ್, ಹುಬ್ಬಳ್ಳಿ, ಡಾ. ಸಿದ್ದಪ್ಪ, ಒ ಎಸ್, ಸೂಪರಿನ್‌ಟೆಂಡೆಂಟ್, ವಾಣಿ ವಿಲಾಸ ಆಸ್ಪತ್ರೆ, ಬೆಂಗಳೂರು, ಡಾ. ಕೃಷ್ಣಮೂರ್ತಿ – ಚೆಲುವಾಂಬಾ ಆಸ್ಪತ್ರೆ, ಮೈಸೂರು, ಡಾ. ಎಂ ಎ ದೇಸಾಯಿ, ಮುಖ್ಯ ವೈದ್ಯಾಧಿಕಾರಿ, ಸರಕಾರಿ ಆಸ್ಪತ್ರೆ ಜಮಖಂಡಿ, ಬಾಗಲಕೋಟೆ, ಡಾ ಎಂ ಎ ಮುರಗೋಡ್ ಸರಕಾರಿ ಆಸ್ಪತ್ರೆ ಬಾಗಲಕೋಟೆ, ಡಾ ಸಜ್ಜನ್, ಜಿಲ್ಲಾ ಆಸ್ಪತ್ರೆ, ಬಿಜಾಪುರ,

ಖಾಸಗಿ ಸಂಸ್ಥೆಗಳು: ಡಾ. ಪದ್ಮಜಾ, ಎಸ್‌ವಿವೈಎಂ, ಸರಗೂರು, ಮೈಸೂರು ಜಿಲ್ಲೆ

**ಖಾಸಗಿ ವೈದ್ಯರು:** ಡಾ. ಸಿಸ್ಟರ್ ಅನೀಸ್ ಎಫ್‌ಆರ್‌ಸಿಒಜಿ, ಕಾರ್ಡಿನಲ್ ಗ್ರೇಸಿಯಸ್, ಬೆಳಗಾವಿ, ಡಾ. ಕೆ ಹೇಮಲತಾ ಉದ್ಭವ್ ಆಸ್ಪತ್ರೆ, ಪಿಪಿಪಿ–ಐಸಿಟಿಸಿ, ಬೆಂಗಳೂರು ನಗರ,

ದೇಶದಲ್ಲಿಯೇ ಮೊದಲ ಬಾರಿಗೆ ಎಚ್‌ಐವಿ ಮತ್ತು ಏಡ್ಸ್‌ನೊಂದಿಗೆ ಜೀವಿಸುತ್ತಿರುವ ಜನರ ಹಕ್ಕುಗಳ ಸನ್ನದನ್ನು ಸಚಿವರು ಬಿಡುಗಡೆ ಮಾಡಿದರು.

"ನಾನು ಇತ್ತೀಚೆಗಷ್ಟೇ ಈ ಇಲಾಖೆಯಲ್ಲಿ ಅಧಿಕಾರ ವಹಿಸಿಕೊಂಡಿದ್ದೇನೆ. ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮದ ಎರಡನೇ ಹಂತದ ಮಾರ್ಗಸೂಚಿ ಪ್ರಕಾರ ಎಲ್ಲ ಇಲಾಖೆಗಳ ನಡುವಿನ ಸಮನ್ವಯದೊಂದಿಗೆ ರಾಜ್ಯದ 29 ಜಿಲ್ಲೆಗಳಲ್ಲಿ ಎಚ್‌ಐವಿ ಕಾರ್ಯಕ್ರಮಗಳು ಉತ್ತಮವಾಗಿ ನಡೆಯುವುದನ್ನು ನೋಡಿದ್ದೇನೆ. ಎಚ್‌ಐವಿಯ ತೀವ್ರತೆಯಿಂದಾಗಿ 26 ಜಿಲ್ಲೆಗಳನ್ನು ಎ ವರ್ಗದ ಜಿಲ್ಲೆಗಳು ಎಂದು ವರ್ಗೀಕರಿಸಲಾಗಿದೆ. ಜಿಲ್ಲೆಗಳಲ್ಲಿ ಜಿಲ್ಲಾ ಏಡ್ಸ್ ತಡೆ ಮತ್ತು ನಿಯಂತ್ರಣ ಘಟಕಗಳು ಕಾರ್ಯನಿರ್ವಹಿಸುತ್ತಿವೆ" ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಡಾ. ರಮಣ ರೆಡ್ಡಿ ಹೇಳಿದರು. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್‌ನ ಕಾರ್ಯಕ್ರಮಗಳೊಂದಿಗೆ ಎಚ್‌ಐವಿ ಕಾರ್ಯಕ್ರಮವನ್ನೂ ಸೇರಿಸಿಕೊಂಡಿರುವುದನ್ನು ನ್ಯಾಕೊದ ರಾಷ್ಟ್ರ ಮಟ್ಟದ ಸಭೆಯಲ್ಲಿ ಶ್ಲಾಘಿಸಲಾಗಿದೆ ಎಂಬ ವಿಷಯವನ್ನು ಅವರು ತಿಳಿಸಿದರು.

ಈ ಕಾರ್ಯಕ್ರಮದ ನಂತರ ಸಂಪಂಗಿರಾಮನಗರ, ಶಿವಾಜಿನಗರ, ಬನಶಂಕರಿ, ಕೆಂಪೇಗೌಡ ಬಸ್ ನಿಲ್ದಾಣ, ಯಶವಂತಪುರ, ಬೆಂಗಳೂರು ವಿಶ್ವವಿದ್ಯಾಲಯ, ಸ್ಯಾಟಲೈಟ್ ಬಸ್ ನಿಲ್ದಾಣ ಸೇರಿದಂತೆ ನಗರದ ವಿವಿಧೆಡೆ ಎಚ್‌ಐವಿ ಜಾಗೃತಿ ಮೂಡಿಸುವ ಜನಪದ ಕಲಾ ಪ್ರದರ್ಶನ ನಡೆಯಿತು.

ಜಿಲ್ಲಾ ಮಟ್ಟದಲ್ಲಿಯೂ ವಿಶ್ವ ಏಡ್ಸ್ ದಿನ ಆಚರಿಸಲಾಗಿದೆ. ಎಚ್‌ಐವಿ ಸೋಂಕಿನ ಪ್ರಮಾಣ ಹೆಚ್ಚಾಗಿರುವ 15 ಜಿಲ್ಲೆಗಳಲ್ಲಿ ರಾಜ್ಯದ ವಿವಿಧ ಜನಪದ ಕಲಾ ಮಾಧ್ಯಮಗಳ ಮೂಲಕ ಜಾಗೃತಿ ಮೂಡಿಸುವ ತೀವ್ರ ಆಂದೋಲನವನ್ನೇ ನಡೆಸಲಾಗಿದೆ. ಜಾಗೃತಿಗಾಗಿ ವಿಡಿಯೋ ಪ್ರದರ್ಶನ ಮತ್ತು ವಸ್ತು ಪ್ರದರ್ಶನವನ್ನೂ ನಡೆಸಲಾಗಿದೆ. ನವೆಂಬರ್‌ನಿಂದ ಜನವರಿಗೆ ವರೆಗೆ ಒಟ್ಟು 1800 ಕಲಾ ಪ್ರದರ್ಶನ ನಡೆಸುವ ಗುರಿಯನ್ನೂ ಇರಿಸಿಕೊಳ್ಳಲಾಗಿದೆ.

ಕಾರ್ಯಕ್ರಮಕ್ಕೆ ಹಾಜರಾದ ಯುವಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಕಾರ್ಯಕ್ರಮದ ಜೊತೆಗೆ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ. 30ಕ್ಕೂ ಹೆಚ್ಚು ಎನ್‌ಜಿಒಗಳು ಹಾಗೂ ಸಮುದಾಯ ಆಧರಿತ ಸಂಘಟನೆಗಳು ಮತ್ತು 2000ಕ್ಕೂ ಹೆಚ್ಚು ಜನರು ರಾಜಧಾನಿಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇವರಲ್ಲಿ ರಾಜ್ಯದ ಐದು ಲೈಂಗಿಕ ವೃತ್ತಿಪರ ಮಹಿಳೆಯರ ಸಂಘಟನೆಗಳ ಪ್ರತಿನಿಧಿಗಳೂ ಇದ್ದರು.

# ಉಪಗ್ರಹ ತಂದ ಏಕತೆ

## 29 ಜಿಲ್ಲೆಗಳಲ್ಲಿ ಪಿಎಲ್ಎಚ್ಐವಿಗಳಿಗೆ ಕಾರ್ಯಕ್ರಮ



**ಸ್ಯಾಟ್‌ಕಾಂ** ಮೂಲಕ ನಡೆದ ಸಮುದಾಯ ಸಶಕ್ತತೆ ಕಾರ್ಯಕ್ರಮ ರಾಜ್ಯದ ಎಲ್ಲ 29 ಜಿಲ್ಲೆಗಳ ಎಚ್‌ಐವಿ ಪಾಸಿಟಿವ್ ಜನರ ಜಾಲಗಳ ಪ್ರತಿನಿಧಿಗಳು ತಮ್ಮ ಹಕ್ಕುಗಳು ಮತ್ತು ದೊರಕಬೇಕಿರುವ ಸೌಲಭ್ಯಗಳ ಬಗ್ಗೆ ನೀತಿ ನಿರೂಪಕರ ಜೊತೆ ಸಂವಾದ ನಡೆಸುವುದು ಸಾಧ್ಯವಾಗುವಂತೆ ಮಾಡಿತು.

ಜಾಲವು ನಮ್ಮ ಅಗತ್ಯಗಳ ಬಗ್ಗೆ ಬೇಡಿಕೆ ಮುಂದಿಡುವುದು, ದೂರುಗಳನ್ನು ಹೇಳುವ ವೇದಿಕೆ ಮಾತ್ರವಲ್ಲ; ಎಚ್‌ಐವಿ ಪಾಸಿಟಿವ್ ಜನರು ಲಭ್ಯವಿರುವ ಚಿಕಿತ್ಸೆ, ಆರೈಕೆ ಮತ್ತು ಬೆಂಬಲ ಪಡೆದುಕೊಳ್ಳುವ ವ್ಯವಸ್ಥೆಯೂ ಹೌದು ಎಂದು ಕೆಎನ್‌ಪಿ+ ಅಧ್ಯಕ್ಷೆ ಸರೋಜ ಪುತ್ರನ್ ಹೇಳಿದರು.

ಎರಡು ದಿನಗಳ ಉಪಗ್ರಹ ಆಧರಿತ ಸಂವಹನಾತ್ಮಕ ಕಾರ್ಯಕ್ರಮ ಜಾಲದ ಸಾವಿರಕ್ಕೂ ಹೆಚ್ಚು ಸದಸ್ಯರು ಸಮಾನ ದೃಷ್ಟಿಕೋನ ನಿರ್ಮಾಣ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಮಾಡಿತು. ಕೆಸಾಪ್ಸ್ ಮತ್ತು ಕೆಎಚ್‌ಪಿಟಿ ಸಹಭಾಗಿತ್ವದಲ್ಲಿ ಕೆಎನ್‌ಪಿ+ ಜಿಲ್ಲಾ ಮಟ್ಟದ ಜಾಲಗಳ ಜೊತೆ ಸೇರಿಕೊಂಡು ಈ ಕಾರ್ಯಕ್ರಮವನ್ನು ಸಂಘಟಿಸಿತು. ಇಸ್ರೊ ಬೆಂಬಲದೊಂದಿಗೆ 2002ರಲ್ಲಿ ಮೈಸೂರಿನಲ್ಲಿ ಆರಂಭಗೊಂಡ ಸ್ಯಾಟ್‌ಕಾಂ ಕೇಂದ್ರದಲ್ಲಿ ಕಾರ್ಯಕ್ರಮ ನಡೆಯಿತು. ಇಲ್ಲಿ ಏಕಮುಖ ವಿಡಿಯೋ ಮತ್ತು ದ್ವಿಮುಖ ಆಡಿಯೋ ಸಂವಹನದ ವ್ಯವಸ್ಥೆ ಇದೆ.

ಎಲ್ಲ ಜಾಲಗಳು ಸಾಮೂಹಿಕವಾಗಿ ಯೋಜನೆ ವಿಸ್ತರಣೆಯ ಹೊಣೆ ವಹಿಸಿಕೊಳ್ಳಬೇಕು ಎಂದು ಕೆಸಾಪ್ಸ್ ಯೋಜನಾ ನಿರ್ದೇಶಕ ಶ್ರೀ ಆರ್ ಆರ್ ಜನ್ನು ಕಾರ್ಯಕ್ರಮ ಉದ್ಘಾಟಿಸುತ್ತಾ ಕರೆ ನೀಡಿದರು. 'ಹಕ್ಕುಗಳ ಆಧಾರದ ಧೋರಣೆ ಅನುಸರಿಸಿಕೊಳ್ಳದಿದ್ದರೆ ರಾಜ್ಯದಲ್ಲಿ ಲಭ್ಯವಿರುವ 30 ಸಮುದಾಯ ಆರೈಕೆ ಕೇಂದ್ರಗಳು, ಡ್ರಾಪ್ ಇನ್ ಕೇಂದ್ರಗಳು ಮತ್ತು ಅವಕಾಶವಾದಿ ಸೋಂಕುಗಳ ಚಿಕಿತ್ಸೆ ಸೌಲಭ್ಯ ಸೇರಿದಂತೆ ವಿವಿಧ ಸವಲತ್ತುಗಳನ್ನು ಪಡೆದುಕೊಂಡು ಎಚ್‌ಐವಿಯೊಂದಿಗೆ ಜೀವಿಸುವ ಜನರು ಸಶಕ್ತರಾಗುವುದು ಸಾಧ್ಯವಿಲ್ಲ' ಎಂದು ಸ್ಪಷ್ಟವಾಗಿ ಅವರು ಹೇಳಿದರು.

**ಜಾಲವು ನಮ್ಮ ಅಗತ್ಯಗಳ ಬೇಡಿಕೆ ಮುಂದಿಡುವುದು, ದೂರುಗಳನ್ನು ಹೇಳುವ ವೇದಿಕೆ ಮಾತ್ರವಲ್ಲ; ಎಚ್‌ಐವಿ ಪಾಸಿಟಿವ್ ಜನರು ಲಭ್ಯವಿರುವ ಚಿಕಿತ್ಸೆ, ಆರೈಕೆ ಮತ್ತು ಬೆಂಬಲ ಪಡೆದುಕೊಳ್ಳುವ ವ್ಯವಸ್ಥೆಯೂ ಹೌದು.**

**ಸರೋಜ ಪುತ್ರನ್,**
**ಕೆಪಿಎನ್+ ಅಧ್ಯಕ್ಷೆ**

# ವಿಶೇಷ ವರದಿ




ಎಚ್‌ಐವಿಯೊಂದಿಗೆ ಜೀವಿಸುತ್ತಿರುವ ಜನರ ಹಕ್ಕುಗಳೇನು ಮತ್ತು ಈ ಹಕ್ಕುಗಳು ಮತ್ತು ಅಗತ್ಯ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಪ್ರತಿಯೊಬ್ಬ ಪಾಲುದಾರರ ಹೊಣೆಗಾರಿಕೆ ಏನು ಎಂಬುದರ ಬಗ್ಗೆ ಸಂವಹನದ ಮೂಲಕ ಒಮ್ಮತಕ್ಕೆ ಬರುವುದು ಸಾಧ್ಯವಿದೆ ಎಂಬುದನ್ನು ಅವರು ಒತ್ತಿ ಹೇಳಿದರು. ಎಚ್‌ಐವಿಯೊಂದಿಗೆ ಜೀವಿಸುವ ಮತ್ತು ಅದರಿಂದ ಬಾಧಿತರಾದ ಜನರು ಎದುರಿಸುತ್ತಿರುವ ಸವಾಲುಗಳನ್ನು ಅರ್ಥ ಮಾಡಿಕೊಳ್ಳುವುದರಿಂದ ಮತ್ತು ಅದರ ಬಗ್ಗೆ ಸೂಕ್ಷ್ಮತೆ ಮೂಡಿಸಿಕೊಳ್ಳುವುದರಿಂದ ನಾವು ಅವರಿಗೆ ಇನ್ನಷ್ಟು ಹೆಚ್ಚಿನ ಸಹಕಾರ ನೀಡುವುದು ಮತ್ತು ಸಹಭಾಗಿತ್ವ ಹೊಂದುವುದು ಸಾಧ್ಯವಾಗುತ್ತದೆ. ಅಷ್ಟು ಮಾತ್ರವಲ್ಲದೆ, ರಾಜ್ಯ ಮಟ್ಟದಲ್ಲಿ ಎಚ್‌ಐವಿಯೊಂದಿಗೆ ಜೀವಿಸುವ ಜನರ ಹಕ್ಕುಗಳ ಬಗೆಗಿನ ಪಟ್ಟಿಯೊಂದನ್ನು ಅಂಗೀಕರಿಸುವುದೂ ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ಕೆಎಚ್‌ಪಿಟಿಯ ಅಡ್ವೊಕಸಿ ವಿಭಾಗದ ನಿರ್ದೇಶಕ ಶ್ರೀ ಅಶೋಕಾನಂದ್ ಅವರೂ ಈ ಅಭಿಪ್ರಾಯದೊಂದಿಗೆ ಸಹಮತ ವ್ಯಕ್ತಪಡಿಸಿದರು. ‘ಜಾಲಗಳನ್ನು ಬಲಪಡಿಸುವುದು, ಪ್ರತಿಕ್ರಿಯೆ ನೀಡಲು ಜಾಲಗಳು ಸಮರ್ಥವಾಗುವಂತೆ ಮಾಡುವುದು ಮತ್ತು ಪ್ರತಿಯೊಬ್ಬರನ್ನು ಪ್ರಶ್ನಿಸುವ ತಮ್ಮ ಹಕ್ಕನ್ನು ಚಲಾಯಿಸುವುದು ಮತ್ತು ಸೂಕ್ತ ಉತ್ತರಗಳನ್ನು ಪಡೆದುಕೊಳ್ಳಲು ಸಾಧ್ಯವಾಗುವಂತೆ ಮಾಡುವುದು’ ಈ ಕಾರ್ಯಕ್ರಮದ ಉದ್ದೇಶ ಎಂದು ಅವರು ಹೇಳಿದರು.

ರಾಜ್ಯಾದ್ಯಂತ ಎಚ್‌ಐವಿ ಮತ್ತು ಏಡ್ಸ್‌ನೊಂದಿಗೆ ಜೀವಿಸುತ್ತಿರುವ ಜನರು ದಿನನಿತ್ಯ ಎದುರಿಸುವ ಸಮಸ್ಯೆಗಳನ್ನು ತರಬೇತಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಕಳಂಕ ಮತ್ತು ತಾರತಮ್ಯ, ಆರೋಗ್ಯ ಸೇವೆಗಳ ಲಭ್ಯತೆ, ಹಕ್ಕುಗಳು ಮತ್ತು ಸಾಮಾಜಿಕ ಸೌಲಭ್ಯಗಳು, ದುರ್ಬಲ ಮತ್ತು ಅಪಾಯದ ಅಂಚಿನಲ್ಲಿರುವ ಮಕ್ಕಳ ಕಾಳಜಿಗಳು, ವಿಧವೆಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರಂತಹ ಶೋಷಣೆಗೊಳಗಾದ ಗುಂಪುಗಳ ಸಮಸ್ಯೆಗಳು ಹಾಗೂ ಸಂಘಟನೆ ಕಟ್ಟುವುದಕ್ಕೆ ಸಂಬಂಧಪಟ್ಟ ವಿಷಯಗಳು ಇದರಲ್ಲಿ ಸೇರಿವೆ.

ಆರೋಗ್ಯ ರಕ್ಷಣೆ ವ್ಯವಸ್ಥೆಯಲ್ಲಿ ಇರುವ ಕಳಂಕದ ಬಗ್ಗೆ ಮತ್ತೆ ಮತ್ತೆ ಕೇಳಿ ಬಂದ ಪ್ರಶ್ನೆಗೆ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಶನ್‌ನ ಡಾ. ಶ್ರೀನಿವಾಸ್ ಉತ್ತರಿಸಿದ್ದು ಹೀಗೆ: ‘ ಸರಕಾರಿ ಆಸ್ಪತ್ರೆಗಳಿಗೆ ಇದಕ್ಕೆ ಸಂಬಂಧಿಸಿದಂತೆ ಸುತ್ತೋಲೆ ಹೊರಡಿಸಲಾಗಿದೆ ಮತ್ತು ತರಬೇತಿ ನೀಡಲಾಗಿದೆ. ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ವಿಭಾಗದ ಅಧಿಕಾರಿಗಳಿಗೂ ಈ ಬಗ್ಗೆ ಮಾಹಿತಿ ನೀಡಲಾಗಿದೆ ಹಾಗೂ ಜಾಗೃತಿ ಮೂಡಿಸಲಾಗಿದೆ. ಇಂತಹ

# ವಿಶೇಷ ವರದಿ

ಯಾವುದೇ ಸಮಸ್ಯೆ ಎದುರಾದರೆ ನಮ್ಮ ಗಮನಕ್ಕೆ ತನ್ನಿ'. ಬೆಂಗಳೂರಿಗೆ ಹೋದ ಕೂಡಲೇ ಮತ್ತೊಮ್ಮೆ ಸುತ್ತೋಲೆ ಹೊರಡಿಸುವುದಾಗಿಯೂ ಅವರು ಶಿಬಿರಾರ್ಥಿಗಳಿಗೆ ಭರವಸೆ ನೀಡಿದರು.

ಯಾವುದೇ ಆಸ್ಪತ್ರೆ ಅಥವಾ ಎಆರ್‌ಟಿ ಕೇಂದ್ರದ ವಿರುದ್ಧ ಕ್ರಮ ಕೈಗೊಳ್ಳಬೇಕಿದ್ದರೆ ನಿರ್ದಿಷ್ಟ ವಿವರಗಳು ಮತ್ತು ದೂರು ಬೇಕಾಗುತ್ತದೆ ಎಂದು ಕೆಸಾಪ್ಸ್‌ನ ಮೂಲಸೌಕರ್ಯ ವಿಭಾಗದ ಜಂಟಿ ನಿರ್ದೇಶಕ ರುದ್ರಪ್ಪ ಹೇಳಿದರು. 'ಕಳಂಕ ಮತ್ತು ತಾರತಮ್ಯದ ಪ್ರಕರಣಗಳು ಎದುರಾದಾಗ ದಯಮಾಡಿ ನಮಗೆ ಮಾಹಿತಿ ನೀಡಿ. ನಾವು ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳುತ್ತೇವೆ' ಎಂದು ಅವರು ವಿನಂತಿ ಮಾಡಿದರು.

ತಮ್ಮ ಗ್ರಾಮಗಳಲ್ಲಿರುವ ಎಚ್‌ಐವಿಯಿಂದಾಗಿ ಅನಾಥರಾದ ಮತ್ತು ಬಾಧಿತರಾದ ಮಕ್ಕಳ ಬಗ್ಗೆ ಶಿಬಿರಾರ್ಥಿಗಳು ಹಲವು ಪ್ರಶ್ನೆಗಳನ್ನು ಕೇಳಿದರು. ಅನಾರೋಗ್ಯದಲ್ಲಿರುವ ಹೆತ್ತವರಿಗೆ ಮಕ್ಕಳೇ ಆರೈಕೆ ಒದಗಿಸುತ್ತಿರುವುದು ಅಥವಾ ಅಜ್ಜ-ಅಜ್ಜಿಯರೇ ಮಕ್ಕಳ ಆರೈಕೆ ನೋಡಿಕೊಳ್ಳುತ್ತಿರುವ ಪ್ರಕರಣಗಳು ಹಳ್ಳಿಗಳಲ್ಲಿ ಹೆಚ್ಚು ಹೆಚ್ಚು ಸಾಮಾನ್ಯವಾಗುತ್ತಿವೆ ಎಂಬ ಆತಂಕವನ್ನೂ ಅವರು ವ್ಯಕ್ತಪಡಿಸಿದರು.

ಎಚ್‌ಐವಿಯೊಂದಿಗೆ ಬದುಕುತ್ತಿರುವ ಮಹಿಳೆಯೊಬ್ಬರು ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು. ಕುಟುಂಬದಿಂದ ಬೀದಿಗೆ ತಳ್ಳಿದ್ದಾರೆ. ಗಂಡ ಇಲ್ಲದಿರುವುದರಿಂದ ಮಕ್ಕಳನ್ನೂ ನೋಡಿಕೊಳ್ಳಬೇಕಿದೆ. ಇದಕ್ಕಾಗಿ ಆದಾಯದ ಮೂಲವೊಂದನ್ನು ಹುಡುಕಿಕೊಳ್ಳುವುದು ಹೇಗೆ ಎಂದು ಅವರು ಪ್ರಶ್ನಿಸಿದರು.

ಮೂಲಭೂತ ಮತ್ತು ಉನ್ನತ ಶಿಕ್ಷಣದ ತಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವುದು ಹೇಗೆ ಎಂದು ಎಚ್‌ಐವಿಯೊಂದಿಗೆ ಜೀವಿಸುತ್ತಿರುವ ಮಕ್ಕಳು ಸರ್ವ ಶಿಕ್ಷಣ ಅಭಿಯಾನದ ಅಧಿಕಾರಿಗಳು ಮತ್ತು ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ಪ್ರಶ್ನಿಸಿದರು.

ಸರ್ವಮಂಗಳ (ಹೆಸರು ಬದಲಾಯಿಸಲಾಗಿದೆ) ಎಂಬ ಬೆಳಗಾವಿಯ ಹುಡುಗಿ "ನಾನೊಬ್ಬ ಅನಾಥ ಹುಡುಗಿ. ಈಗ ಹಾಸ್ಟೆಲ್‌ನಲ್ಲಿ ಇದ್ದು, ಹತ್ತನೇ ತರಗತಿಯಲ್ಲಿ ಕಲಿಯುತ್ತಿದ್ದೇನೆ. ಹೈಸ್ಕೂಲ್ ಮುಗಿದ ಮೇಲೆ ನನ್ನ ವಿದ್ಯಾಭ್ಯಾಸ ಹೇಗೆ?' ಎಂದು ಪ್ರಶ್ನಿಸಿದಳು.

ಬೆಳಗಾವಿಯ ಇನ್ನೊಬ್ಬ ಹೆಣ್ಣು ಮಗಳು ಆಶಾ (ಹೆಸರು ಬದಲಿಸಲಾಗಿದೆ) ಕೂಡ ಉನ್ನತ ಶಿಕ್ಷಣದ ಕನಸನ್ನು ನನಸು ಮಾಡಿಕೊಳ್ಳುವುದು ಹೇಗೆ ಎಂಬ ಪ್ರಶ್ನೆಯನ್ನು ಮುಂದಿಟ್ಟಳು. ದಾವಣಗೆರೆಯ ಹುಡುಗನೊಬ್ಬ ಹೇಳಿದ್ದು ಹೀಗೆ: 'ನಾನು ಎಆರ್‌ಟಿ ತೆಗೆದುಕೊಳ್ಳುತ್ತಿದ್ದೇನೆ. ನನಗೆ ಪೌಷ್ಠಿಕ ಆಹಾರದ ಅಗತ್ಯ ಇದೆ. ಪೌಷ್ಠಿಕ ಆಹಾರ ಪಡೆಯಲು ಬೆಂಬಲ ನೀಡುವ ಯೋಜನೆಗಳು ಇವೆಯೇ?'

ಎಲ್ಲ ಮಕ್ಕಳಿಗೂ ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಶಾಲೆಗೆ ಹೋಗಿ ಕಲಿಯುವುದಕ್ಕೆ ಸಮಾನ ಅವಕಾಶ ಇದೆ ಎಂದು ಸರ್ವ ಶಿಕ್ಷಣ ಅಭಿಯಾನದ ಅಧಿಕಾರಿ ಕೆಂಪರಾಜ್ ಹೇಳಿದರು. ಇದನ್ನು ಈಗ ನಮ್ಮ ಸಂವಿಧಾನವೂ ಅಂಗೀಕರಿಸಿದೆ. ತಮ್ಮ ಶಾಲಾ ವ್ಯವಸ್ಥೆಯಲ್ಲಿ ಕಳಂಕ ಮತ್ತು ತಾರತಮ್ಯದ ಅನುಭವವಾದ ಮಕ್ಕಳಿಗೆ ವಿಶೇಷವಾಗಿ ಆಶಾ ಕಿರಣ ಕೇಂದ್ರಗಳನ್ನು ತೆರೆಯಲಾಗಿದೆ ಎಂಬ ಮಾಹಿತಿಯನ್ನು ಅವರು ನೀಡಿದರು. 'ಇಂತಹ ಯಾವುದೇ ಸಮಸ್ಯೆ ಇದ್ದರೆ ಅದನ್ನು ಬ್ಲಾಕ್ ಸಂಪನ್ಮೂಲ ಕೇಂದ್ರದ ಗಮನಕ್ಕೆ ತರಬಹುದು. ಅವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ. ನನ್ನ ಗಮನಕ್ಕೆ ತಂದರೆ ನಾನೂ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ' ಎಂಬ ಭರವಸೆಯನ್ನೂ ಅವರು ನೀಡಿದರು.

ಮಕ್ಕಳು 21 ವರ್ಷಕ್ಕೆ ಕಾಲಿರಿಸುವ ತನಕ ಅವರಿಗೆ ಕೌಶಲ ಅಭಿವೃದ್ಧಿ ತರಬೇತಿ ನೀಡುವುದಕ್ಕೆ ಅವಕಾಶ ಇದೆ ಎಂದು ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ನರ್ಮದಾ ತಿಳಿಸಿದರು. 'ಮಕ್ಕಳು ಸ್ವತಂತ್ರರಾಗುವ ತನಕ ಅವರ ಜವಾಬ್ದಾರಿಯನ್ನು ಇಲಾಖೆ ವಹಿಸಿಕೊಳ್ಳುತ್ತದೆ' ಎಂದು ಅವರು ಭರವಸೆ ನೀಡಿದರು. ಮಕ್ಕಳು ಕೌಶಲ ಅಭಿವೃದ್ಧಿಗೆ ಬಯಸಿದರೆ ಅಥವಾ ಉನ್ನತ ಶಿಕ್ಷಣದ ಆಕಾಂಕ್ಷೆ ಹೊಂದಿದ್ದರೆ ಅದಕ್ಕಾಗಿ ವಿಶೇಷ ಯೋಜನೆಗಳು ಇವೆ ಎಂಬ ಮಾಹಿತಿಯನ್ನೂ ಅವರು ನೀಡಿದರು. ಮೂರು ಜಿಲ್ಲೆಗಳಲ್ಲಿ ಕಡಿಮೆ ತೂಕದ ಬಡ ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯಾದ್ಯಂತ ಇರುವ ಮಕ್ಕಳ ಪೌಷ್ಠಿಕತೆ ಅಗತ್ಯವನ್ನು ಪೂರೈಸಲು ಹೊಸ ಯೋಜನೆಯೊಂದನ್ನು ರೂಪಿಸಲಾಗುತ್ತಿದೆ ಎಂಬ ಮಾಹಿತಿಯನ್ನೂ ಅವರು ನೀಡಿದರು.

ಎರಡು ದಿನಗಳ ಕಾಲ ನಡೆದ ಕಾರ್ಯಕ್ರಮದಲ್ಲಿ ಎಚ್‌ಐವಿ ಮತ್ತು ಏಡ್ಸ್‌ನೊಂದಿಗೆ ಜೀವಿಸುತ್ತಿರುವ ಜನರ ಮೂಲಭೂತ ಹಕ್ಕುಗಳ ಪಟ್ಟಿಯನ್ನು (ಸನ್ನದು) ಸಿದ್ಧಪಡಿಸಲಾಯಿತು.

ಮೂಲಭೂತ ಮತ್ತು ಉನ್ನತ ಶಿಕ್ಷಣದ ತಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವುದು ಹೇಗೆ ಎಂದು ಎಚ್‌ಐವಿಯೊಂದಿಗೆ ಜೀವಿಸುತ್ತಿರುವ ಮಕ್ಕಳು ಸರ್ವ ಶಿಕ್ಷಣ ಅಭಿಯಾನದ ಅಧಿಕಾರಿಗಳು ಹಾಗೂ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ಪ್ರಶ್ನಿಸಿದರು.

ಸರ್ವಮಂಗಳ (ಹೆಸರು ಬದಲಾಯಿಸಲಾಗಿದೆ) ಎಂಬ ಬೆಳಗಾವಿಯ ಹುಡುಗಿ "ನಾನೊಬ್ಬ ಅನಾಥೆ. ಈಗ ಹಾಸ್ಟೆಲ್‌ನಲ್ಲಿ ಇದ್ದು, ಹತ್ತನೇ ತರಗತಿಯಲ್ಲಿ ಕಲಿಯುತ್ತಿದ್ದೇನೆ. ಹೈಸ್ಕೂಲ್ ಮುಗಿದ ಮೇಲೆ ನನ್ನ ವಿದ್ಯಾಭ್ಯಾಸ ಹೇಗೆ?' ಎಂದು ಪ್ರಶ್ನಿಸಿದಳು.



# ಅಕ್ಷರ ತಂದ ಆತ್ಮವಿಶ್ವಾಸ

**ಸಂಕಲ್ಪ** ಯೋಜನೆಯ ಭಾಗವಾಗಿ ಸಂರಕ್ಷ ಸಂಸ್ಥೆಯು 2004ರಿಂದಲೇ ರಾಯಚೂರು, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಲೈಂಗಿಕ ವೃತ್ತಿಪರ ಮಹಿಳೆಯರ ಜೊತೆ ಜಿಲ್ಲಾ ಮಟ್ಟದ ಸೋಂಕು ತಡೆ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಮಹಿಳೆಯರನ್ನು ಒಂದು ಸಮುದಾಯವಾಗಿ ಒಂದುಗೂಡಿಸುವುದಕ್ಕೆ ಮೊದಲ ನಾಲ್ಕು ವರ್ಷಗಳನ್ನು ವ್ಯಯಿಸಲಾಯಿತು. ಈ ಪ್ರಯತ್ನವು ಮಹಿಳೆಯರು ತಮ್ಮನ್ನು ತಾವೇ ನೋಡಿಕೊಳ್ಳಲು ಮತ್ತು ಶೋಷಣೆಗೆ ಹಾಗೂ ಕಳಂಕಕ್ಕೊಳಗಾದ ವೃತ್ತಿಯನ್ನು ನಡೆಸುವ ಮಹಿಳೆಯರೂ ಸಮಾಜದ ಒಂದು ಭಾಗವೆಂದು ತಮ್ಮನ್ನು ಗುರುತಿಸಿಕೊಳ್ಳಲು ಅವರಿಗೆ ಸಹಕರಿಸಿತು. ಈ ಎರಡೂ ಪ್ರಕ್ರಿಯೆಗಳು ಏಕಕಾಲದಲ್ಲಿ ಎಚ್‌ಐವಿ ತಡೆ ಮತ್ತು ಮಹಿಳೆಯರಲ್ಲಿ ಏಕತೆ ಮೂಡಿಸಲು ಸಹಕರಿಸಿದವು. ಇದರ ನಡುವೆ ಸಮುದಾಯ ಒಗ್ಗಟ್ಟಾಗಿ ಮುಂದೆ ಸಾಗಬೇಕಾದ ಅಗತ್ಯವೂ ಇತ್ತು. ಸಮಾಜವು ಒಂದಿಡೀ ಜೀವನ ಕಾಲದಲ್ಲಿ ಅವರಿಗೆ ನಿರಾಕರಿಸಿದ್ದನ್ನು ಒಂದು ದಿನದಲ್ಲಿ ಮರಳಿ ಪಡೆಯುವುದೇನೂ ಸಾಧ್ಯವಿರಲಿಲ್ಲ. ನಿರಕ್ಷರತೆ ಅಥವಾ ಕಡಿಮೆ ಸಾಕ್ಷರತೆ ಮಟ್ಟ, ತಮ್ಮ ಮಕ್ಕಳಿಗೆ ಕೂಡ ಸಾಮಾಜಿಕ ಸ್ವೀಕೃತಿ ದೊರಕದಿರುವುದು ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅವರು ಅರ್ಥ ಮಾಡಿಕೊಳ್ಳಲು ನೆರವು ನೀಡಿತೆಂದೇ ಹೇಳಬಹುದು.

ನಿಮ್ಮ ಜೀವನದಲ್ಲಿ ಇರುವ ಅತ್ಯಂತ ದೊಡ್ಡ ಕೊರತೆಗಳೇನು ಎಂಬ ಬಗ್ಗೆ ಸಂರಕ್ಷ ನಡೆಸಿದ ಸಮಾಲೋಚನಾ ಸಭೆಯಲ್ಲಿ ಮೂಲಭೂತ ಹಕ್ಕುಗಳು, ಸಾಮಾಜಿಕ ಸೌಲಭ್ಯಗಳು ಎಂದು ಅವರು ಹೇಳಿದರು. ಈಗ ಸಂಘಟನೆ ಮೂಲಕ ಅವರು ಈ ನಿಟ್ಟಿನಲ್ಲಿ ಕೆಲಸ ಆರಂಭಿಸಿದ್ದಾರೆ. ಸಾಕ್ಷರರಾಗಬೇಕು ಎಂಬ ಅದಮ್ಯ ಬಯಕೆಯನ್ನೂ ಅವರು ವ್ಯಕ್ತಪಡಿಸಿದರು. ಬಹುಸಂಖ್ಯೆಯ ಮಹಿಳೆಯರು ಅನಕ್ಷರಸ್ಥರಾಗಿದ್ದು, ಶಿಕ್ಷಣ ಹೊಂದಿರುವವರ ಸಂಖ್ಯೆ ಬಹಳ ಕಡಿಮೆ. ಸಾಮಾನ್ಯವಾಗಿ ಮಹಿಳೆಯರು ಲೈಂಗಿಕ ವೃತ್ತಿಗೆ ಬರುವುದಕ್ಕೂ ಬೇರೆ ಜೀವನೋಪಾಯ ಇಲ್ಲದಿರುವುದು ಕಾರಣವಾಗಿರುತ್ತದೆ.

ಲೈಂಗಿಕ ವೃತ್ತಿಪರ ಸಮುದಾಯದಲ್ಲಿ ಸಾಕ್ಷರತೆಯ ಮಟ್ಟ:

| ಕ್ರ ಸಂ. | ಜಿಲ್ಲೆಗಳು | ಮಹಿಳಾ ಸಾಕ್ಷರತೆ ಮಟ್ಟ | ಲೈಂಗಿಕ ವೃತ್ತಿಪರರ ಸಾಕ್ಷರತೆ |
|---|---|---|---|
| 1 | ರಾಯಚೂರು | 36.8% | 24.6% |
| 2 | ಗದಗ | 64% | 26.7% |
| 3 | ಹಾವೇರಿ | 64% | 32% |
| 4 | ಉತ್ತರ ಕನ್ನಡ | 68.5% | 49.8% |

ಶಿಕ್ಷಣ ಮತ್ತು ಅಕ್ಷರ ಜ್ಞಾನದ ಕೊರತೆಯು ಆತ್ಮಗೌರವವನ್ನು ಕಡಿಮೆಯಾಗಿಸುತ್ತದೆ. ಇದು ಸಶಕ್ತತೆ ಪ್ರಕ್ರಿಯೆಯಲ್ಲಿ ದೊಡ್ಡ ತೊಡಕು. ಮಹಿಳೆಯರು ಆತ್ಮವಿಶ್ವಾಸ ಹೊಂದಿದ್ದು ತಮ್ಮ ವ್ಯವಹಾರದಲ್ಲಿ ಅತೀವ ಚುರುಕುತನ ತೋರಿಸಿದರೂ ಬಹಳಷ್ಟು ವಿಷಯಗಳನ್ನು ನಿಭಾಯಿಸುವ ಅವರ ಸಾಮರ್ಥ್ಯ ಬಹಳ ಕಡಿಮೆಯಾಗಿರುತ್ತದೆ. ಶಿಕ್ಷಣದ ಕೊರತೆ ಮತ್ತು ತಮ್ಮ ಮಾತನ್ನು ವ್ಯಾಖ್ಯಾನಿಸಿ ಹೇಳಬೇಕಾದ ಇತರರ ಮೇಲಿನ ಅವಲಂಬನೆ ಇದನ್ನು ಇನ್ನಷ್ಟು ಗಂಭೀರ ಸಮಸ್ಯೆಯಾಗಿಸುತ್ತದೆ.

ಆರೈಕೆ ಕಾರ್ಯಕ್ರಮದ ಭಾಗವಾಗಿ ಸಂರಕ್ಷ ಲೈಂಗಿಕ ವೃತ್ತಿಪರ ಮಹಿಳೆಯರಿಗೆ ವಯಸ್ಕರ ಶಿಕ್ಷಣ ಮತ್ತು ಸಾಮರ್ಥ್ಯ ವೃದ್ಧಿ ಹಾಗೂ ಅವರ ಮಕ್ಕಳಿಗೆ ಟ್ಯೂಷನ್ ವ್ಯವಸ್ಥೆ ಮಾಡಿದೆ. ಉದ್ದೇಶಿತ ಸಮುದಾಯದ ಸದಸ್ಯರ ಕಲಿಕೆ ಸಾಧ್ಯವಾಗಲಿ ಎಂಬ ಕಾರಣಕ್ಕೆ ವಯಸ್ಕರ ಶಿಕ್ಷಣ ಧೋರಣೆ ಅಳವಡಿಸಿಕೊಳ್ಳಲಾಗಿದೆ.

ಈ ಕಾರ್ಯಕ್ರಮಕ್ಕಾಗಿ ತಾಲೂಕನ್ನು ಎರಡು ಕ್ಲಸ್ಟರ್‌ಗಳಾಗಿ ವಿಭಜಿಸಲಾಗಿದೆ. ಪ್ರತಿ ಕ್ಲಸ್ಟರ್‌ನಲ್ಲಿಯೂ ಮೂರು ಸೈಟ್‌ಗಳನ್ನು ಆಯ್ಕೆ ಮಾಡಿ ಅಲ್ಲಿ ಸಾಕ್ಷರತೆ ತರಗತಿ ನಡೆಸಲಾಗುತ್ತಿದೆ. ಪ್ರತಿ ಕ್ಲಸ್ಟರ್‌ನಲ್ಲಿಯೂ ತರಬೇತಿ ಪಡೆದ ಶಿಕ್ಷಕರೇ ತರಗತಿ ನಡೆಸುತ್ತಿದ್ದಾರೆ. ಸಾಕ್ಷರತೆ ಶಿಕ್ಷಕರು ಸಮುದಾಯದ ಸದಸ್ಯರು ತರಗತಿಗೆ ಬರುವಂತೆ ಪ್ರೇರಣೆ ನೀಡುತ್ತಾರೆ ಮತ್ತು ಅವರಿಗೆ ಅಕ್ಷರ, ಗಣಿತ ಕಲಿಸುತ್ತಾರೆ ಹಾಗೂ ಇತರ ಅಗತ್ಯ ಮಾಹಿತಿ ಒದಗಿಸುತ್ತಾರೆ. ತರಗತಿಯಲ್ಲಿ ಅವರು ಹಾಡು, ಚುಟುಕ ಮತ್ತು ಸಣ್ಣ ಕತೆ ಇತ್ಯಾದಿಗಳನ್ನೂ ಕಲಿಯುತ್ತಾರೆ.

ವಯಸ್ಕರ ಶಿಕ್ಷಣ ಕಾರ್ಯಕ್ರಮವೆಂದರೆ ಓದು, ಬರಹ ಅಥವಾ ಅಕ್ಷರ ಮತ್ತು ಅಂಕೆಗಳ ಕಲಿಕೆ ಮಾತ್ರವಲ್ಲ. ವಯಸ್ಕ ಕಲಿಕಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಈ ಕಾರ್ಯಕ್ರಮ ಮಹತ್ವದ ಕೊಡುಗೆ ನೀಡಿದೆ. ಈ ಅನುಭವವನ್ನು ಮಲ್ಲಮ್ಮ ಹೇಳಿದ್ದು ಹೀಗೆ: 'ಕ್ಲಾಸ್‌ಗೆ ಹೋಗಲಾರಂಭಿಸಿದ ನಂತರ ಜನ್ರು ನಮ್ಮನ್ನು ಮೋಸ ಮಾಡೋದು ಅಥವಾ ಗೇಲಿ ಮಾಡೋದು ಸಾಧ್ಯವಿಲ್ಲ. ಮೊದಲೆಲ್ಲ ನಾವು ಇತರರನ್ನು ದಾರಿ ಕೇಳಿದ್ರೆ ಅಥವಾ ಬೋರ್ಡ್ ಓದಿ ಹೇಳಿ ಅಂದ್ರೆ ಅವ್ರಿಗೆ ಕಿರಿಕಿರಿ ಆಗೋದು. ಕೆಲವೊಮ್ಮೆ ಅವರು ತಪ್ಪು ತಪ್ಪಾಗಿ ಹೇಳ್ತಾ ಇದ್ರು. ಆದ್ರೆ ಈಗ ನಾವೇ ಬೋರ್ಡ್ ಓದ್ತೀವಿ'. ತಮ್ಮ ಹೆಸರು ಅಥವಾ ತಮ್ಮ ಗಂಡ/ಸಂಗಾತಿಯ ಹೆಸರು ಬರೆಯುವ ಸಾಮರ್ಥ್ಯ ಅವರ ಆತ್ಮಗೌರವವನ್ನೂ ಹೆಚ್ಚಿಸಿದೆ. ದೈನಂದಿನ ಜೀವನದಲ್ಲಿ ಅನುಭವಕ್ಕೆ ಬಂದ ಸಣ್ಣ ಪುಟ್ಟ ಬದಲಾವಣೆಗಳು ಕೂಡಾ ಅವರ ಸಾಮರ್ಥ್ಯ ಹೆಚ್ಚಳದ ಮೇಲೆ ಗಣನೀಯ ಪ್ರಮಾಣದ ಪರಿಣಾಮ ಬೀರಿವೆ.

ಸಹವರ್ತಿ ಶಿಕ್ಷಕರು ಸಾಕ್ಷರತೆ ತರಗತಿಗಳನ್ನು ತಮ್ಮ ಕೆಲಸದ ಕೌಶಲ ವೃದ್ಧಿಗೆ ಬಳಸಿಕೊಂಡರು. ಸಾಕ್ಷರತೆ ತರಗತಿಗೆ ಹೋದ ನಂತರ ಸಹವರ್ತಿಗಳು ಮತ್ತು ಸಮುದಾಯ ಸಂಯೋಜಕರು ತಾವು ಸೇವೆ ಒದಗಿಸುವ ಸಮುದಾಯದ ಸದಸ್ಯರ ಹೆಸರುಗಳನ್ನು ಓದಲು ಮತ್ತು ಬರೆಯಲು ಕಲಿತರು. ಸಹವರ್ತಿ ಕ್ಯಾಲೆಂಡರ್‌ಗಳನ್ನು ಸ್ವತಃ ಭರ್ತಿ ಮಾಡಲು ತೊಡಗಿದರು. ಪ್ರಯಾಣದ ಲೆಕ್ಕವನ್ನು ಅವರೇ ಒಪ್ಪಿಸತೊಡಗಿದರು ಮತ್ತು ಸ್ವಲ್ಪ ಮಟ್ಟಿಗೆ ಕೆಲಸದ ವರದಿಗಳನ್ನು ತಾವೇ ಬರೆಯತೊಡಗಿದರು.

ಸಾಕ್ಷರತೆ ಕಾರ್ಯಕ್ರಮ ಸದಸ್ಯರಲ್ಲಿ ಎಂತಹ ಉತ್ಸಾಹ ತುಂಬಿದೆ ಎಂದರೆ, ಕೆಲವರು ಅದರಿಂದ ಪ್ರೇರಿತರಾಗಿ ಈಗ ಕಂಪ್ಯೂಟರ್ ತರಗತಿಗೂ ಸೇರಿಕೊಂಡಿದ್ದಾರೆ. ಇದಕ್ಕೆ ಉತ್ತಮ ಉದಾಹರಣೆ ಗದಗದ ಬೀಬಿಜಾನ್ ಮತ್ತು ಲಕ್ಷ್ಮಿ. ಅನಕ್ಷರಸ್ಥರಾಗಿದ್ದ ಅವರು ಸಾಕ್ಷರತೆ ತರಗತಿಗೆ ಹಾಜರಾಗಿದ್ದು ಮಾತ್ರವಲ್ಲದೆ ಅದೇ ಸಂದರ್ಭದಲ್ಲಿ ತಮ್ಮ ಮಕ್ಕಳ ಸಹಾಯದಿಂದ ಇಂಗ್ಲಿಷ್ ಅಕ್ಷರ ಮಾಲೆಯನ್ನೂ ಕಲಿತರು. ಇದರಿಂದ ಅವರು ಕಂಪ್ಯೂಟರ್ ತರಗತಿಗೆ ಸೇರುವುದು ಸಾಧ್ಯವಾಗಿದೆ. ಸಾಕ್ಷರತೆ ಕಾರ್ಯಕ್ರಮದ ಅಡಿಯಲ್ಲಿ ಎಲ್ಲ ಜಿಲ್ಲೆಗಳಿಂದ ಒಟ್ಟು 509 ಸದಸ್ಯರು ಕಂಪ್ಯೂಟರ್ ತರಗತಿಗೆ ಸೇರಿದ್ದಾರೆ.

ಅಕ್ಷರ, ವ್ಯಾವಹಾರಿಕ ಸಾಕ್ಷರತೆಯ ಜೊತೆಗೆ ಸಮುದಾಯದ ಸದಸ್ಯರಿಗೆ ಕಾನೂನು ಸಾಕ್ಷರತೆ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗಿದೆ. ಅದರಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳು, ಕೌಟುಂಬಿಕ ಹಿಂಸೆ, ಐಟಿಪಿಎ ಮತ್ತು ಮಾನವ ಹಕ್ಕುಗಳು ಇತ್ಯಾದಿ ವಿಷಯಗಳನ್ನು ವಿವರಿಸಲಾಗಿದೆ. ಪ್ರತಿ ಜಿಲ್ಲೆಯಲ್ಲಿಯೂ ಕಾನೂನು ಸಾಕ್ಷರತೆ ಕಾರ್ಯಕ್ರಮ ನಡೆಸಲಾಗಿದೆ.

ಉದ್ದೇಶಿತ ಸಮುದಾಯದ ಜನರ ಮಕ್ಕಳಿಗೂ ಈ ಕಾರ್ಯಕ್ರಮದ ಅಡಿಯಲ್ಲಿ ಹೆಚ್ಚುವರಿ ಬೆಂಬಲ ಒದಗಿಸಿ ಅವರಿಗೆ ಟ್ಯೂಷನ್ ಕ್ಲಾಸ್ ವ್ಯವಸ್ಥೆ ಮಾಡಲಾಗಿದೆ. ಇದರಿಂದಾಗಿ ಹಲವು ಮಕ್ಕಳು 7 ಮತ್ತು 10ನೇ ತರಗತಿ ಉತ್ತೀರ್ಣರಾಗುವುದು ಸಾಧ್ಯವಾಗಿದೆ. ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಒಂದು ಮಗು ಎಸ್‌ಎಸ್‌ಎಲ್‌ಸಿಯಲ್ಲಿ ಡಿಸ್ಟಿಂಕ್ಷನ್ (ಶೇ. 70ಕ್ಕೂ ಹೆಚ್ಚು ಅಂಕ) ಪಡೆದು ಪಾಸಾಗುವುದು ಸಾಧ್ಯವಾಗಿದೆ. ಇದು ಇತರರಿಗೂ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುವುದಕ್ಕೆ ಪ್ರೇರಣೆಯಾಗಿದೆ.

ಒಟ್ಟಿನಲ್ಲಿ ಸಾಕ್ಷರತೆ ಕಾರ್ಯಕ್ರಮವು ಉದ್ದೇಶಿತ ಸಮುದಾಯದಲ್ಲಿ ಭಾರಿ ಬದಲಾವಣೆ ತಂದಿದೆ ಎಂಬುದು ನಿಜ. ತರಗತಿಯನ್ನು ಮುಂದುವರಿಸಿ ಇನ್ನಷ್ಟು ಕಲಿಯುವ ಉತ್ಸಾಹವನ್ನು ಅವರು ಹೊಂದಿದ್ದಾರೆ. ಜೂನ್ 09ಕ್ಕೆ ಕೇರ್ ಕಾರ್ಯಕ್ರಮ ಕೊನೆಗೊಂಡರೂ ಒಕ್ಕೂಟದ ಮೂಲಕ ಇದನ್ನು ಮುಂದುವರಿಸುವ ಆಸೆಯನ್ನು ಅವರು ಹೊಂದಿದ್ದಾರೆ.

# ಎಸ್‌ವಿವೈಎಂ ನಡೆದ ಬಂದ ಹಾದಿ



**ಸ್ವಾಮಿ** ವಿವೇಕಾನಂದರ ಬೋಧನೆಗಳು ಮತ್ತು ಚಿಂತನೆಗಳಿಂದ ಪ್ರಭಾವಿತರಾದ ವೈದ್ಯರ ಗುಂಪೊಂದು 1984ರಲ್ಲಿ ಆರಂಭಿಸಿದ ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್ ಈಗ ನೋದಾಯಿತ, ಎನ್‌ಜಿಒ ಆಗಿ ಬೆಳೆದು ನಿಂತಿದೆ. ಆರೋಗ್ಯ, ಶಿಕ್ಷಣ, ಸಮುದಾಯ ಅಭಿವೃದ್ಧಿ ಸೇವೆಗಳು, ತರಬೇತಿ, ಸಂಶೋಧನೆ, ಅಡ್ವೊಕಸಿ ಮತ್ತು ಸಮಾಲೋಚನಾ ಸೇವೆ ಕ್ಷೇತ್ರಗಳಲ್ಲಿ ಸಂಸ್ಥೆಯು ಕೆಲಸ ಮಾಡುತ್ತಿದೆ. ಆರೋಗ್ಯ, ಶಿಕ್ಷಣ ಮತ್ತು ಸಮುದಾಯ ಅಭಿವೃದ್ಧಿ ಕ್ಷೇತ್ರಗಳಲ್ಲಿ ತಳಮಟ್ಟದಿಂದ ನೀತಿ ನಿರೂಪಣೆ ಹಂತದ ವರೆಗಿನ ಕೆಲಸಗಳ ಮೂಲಕ ಭಾರತದಲ್ಲಿ ಹೊಸತೊಂದು ನಾಗರಿಕ ಸಮಾಜ ನಿರ್ಮಾಣದ ಗುರಿಯನ್ನು ಸಂಸ್ಥೆಯು ಹೊಂದಿದೆ. ಸ್ವಾವಲಂಬನೆ ಮತ್ತು ಸಶಕ್ತತೆಯೆಡೆಗಿನ ಸಮುದಾಯದ ಪ್ರಯತ್ನದ ಪ್ರಮುಖ ಪ್ರೇರಕ ಮತ್ತು ಪ್ರವರ್ತಕನಾಗಿ ಕೆಲಸ ಮಾಡುವ ಎಸ್‌ವಿವೈಎಂ ಸಮುದಾಯ ಚಾಲಿತ ಪ್ರಗತಿಯ ಸುಸ್ಥಿರತೆಗಾಗಿ ಸ್ಥಳೀಯ, ನೂತನ ಮತ್ತು ಮಿತವ್ಯಯಕರ ಪರಿಹಾರಗಳನ್ನು ಅಭಿವೃದ್ಧಿಪಡಿಸುತ್ತಿದೆ. ಸತ್ಯ, ಅಹಿಂಸೆ, ತ್ಯಾಗ ಮತ್ತು ಸೇವೆ ಸಂಸ್ಥೆಯ ಮೂಲ ಮೌಲ್ಯಗಳಾಗಿದ್ದು, ಕಾರ್ಯಕ್ರಮ ವಿನ್ಯಾಸ ಮತ್ತು ಅನುಷ್ಠಾನ, ಪಾಲುದಾರರೊಂದಿಗಿನ ವ್ಯವಹಾರ, ಸಂಪನ್ಮೂಲ ಬಳಕೆ, ಸಾರ್ವಜನಿಕ ತಪಾಸಣೆಗೆ ಮುಕ್ತ ಅವಕಾಶಗಳಲ್ಲಿ ಇದು ಪ್ರತಿಫಲನಗೊಳ್ಳುತ್ತಲೂ ಇದೆ. ಸಮುದಾಯದ ಬೆಂಬಲ ಪಡೆಯುವುದು, ಸರಕಾರ ಮತ್ತು ಕಾರ್ಪೊರೇಟ್ ಸಂಸ್ಥೆಗಳ ಜೊತೆ ಆರೋಗ್ಯಕರ ಪಾಲುದಾರಿಕೆಯಲ್ಲಿ ಕೆಲಸ ಮಾಡುವುದು, ಸಮಾನ ಮನಸ್ಕ ಸಂಘಟನೆಗಳ ಜೊತೆ ಅನುಭವವನ್ನು ಹಂಚಿಕೊಳ್ಳುವುದು ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್‌ನ ಹೆಗ್ಗುರುತು. ಇಂದು ಸಂಘಟನೆಯು ಆರೋಗ್ಯ, ಶಿಕ್ಷಣ, ಸಮುದಾಯ ಅಭಿವೃದ್ಧಿ ಮತ್ತು ತರಬೇತಿ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯದಲ್ಲಿ 60ಕ್ಕೂ ಹೆಚ್ಚು ಯೋಜನೆಗಳನ್ನು ನಡೆಸುತ್ತಿದೆ.

ಕಳೆದ ಎರಡು ವರ್ಷಗಳಿಂದ ನಾನು ಎಸ್‌ವಿವೈಎಂನಲ್ಲಿ ಕೆಲಸ ಮಾಡುತ್ತಿದ್ದೇನೆ. **ಸಂಸ್ಥೆಗೆ ಕೆಲವು ಮೂಲಭೂತ ಮೌಲ್ಯಗಳಿವೆ. ಅವುಗಳನ್ನು ಅನುಸರಿಸುವುದು ವ್ಯಕ್ತಿಯಾಗಿ ಬೆಳೆಯುವುದಕ್ಕೆ ನನಗೆ ಸಹಕಾರಿಯಾಗಿದೆ** ಎಂದು ವೃತ್ತಿಪರ ಆಪ್ತಸಮಾಲೋಚಕ ಸುರೇಶ್ ವಿ ಹೇಳುತ್ತಾರೆ.

### ಎಚ್‌ಐವಿ ಸಾಂಕ್ರಾಮಿಕಕ್ಕೆ ಎಸ್‌ವಿವೈಎಂ ಪ್ರತಿಕ್ರಿಯೆ

ರಾಷ್ಟ್ರೀಯ ಎಚ್‌ಐವಿ ಕಾರ್ಯಕ್ರಮದ ಅಂತರಗಳನ್ನು ತುಂಬುವ ಉದ್ದೇಶದಿಂದ ಎಸ್‌ವಿವೈಎಂ ಸುಮಾರು ಕಳೆದ ಒಂದು ದಶಕದಿಂದ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಸಂಸ್ಥೆಯು ನಡೆಸುತ್ತಿರುವ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮದ ಭಾಗವಾಗಿ ಈ ಕೆಲಸ 1998ರಲ್ಲಿ ಆರಂಭಗೊಂಡಿತು. ಈ ಅವಧಿಯಲ್ಲಿ ಸಾಂಕ್ರಾಮಿಕವು ಸಮುದಾಯದ ಸಾಮಾಜಿಕ-ಆರ್ಥಿಕ ಸ್ಥಿತಿಯ ಮೇಲೆ ಉಂಟು ಮಾಡುವ ಪರಿಣಾಮವನ್ನು ಸಂಘಟನೆಯು ಅರಿತುಕೊಂಡಿದೆ. ರಾಷ್ಟ್ರವು ಎಚ್‌ಐವಿ ಮತ್ತು ಏಡ್ಸ್ ಸಾಂಕ್ರಾಮಿಕವನ್ನು ಕಾರ್ಯಕ್ರಮ ಅನುಷ್ಠಾನ ಮತ್ತು ಅಡ್ವೊಕಸಿ ಮಟ್ಟಗಳೆರಡರಲ್ಲೂ ಅಭಿವೃದ್ಧಿ ತೊಡಕು ಎಂದೇ ಪರಿಗಣಿಸುತ್ತಿದೆ.

### ದೃಷ್ಟಿಕೋನ

ಎಚ್‌ಐವಿ ಮತ್ತು ಏಡ್ಸ್ ಭಯ ಮುಕ್ತ ಸಮಾಜ ಹಾಗೂ ಎಚ್‌ಐವಿ ಮತ್ತು ಏಡ್ಸ್‌ನೊಂದಿಗೆ ಜೀವಿಸುತ್ತಿರುವ ಜನರು ತಾವು ಜೀವಿಸುತ್ತಿರುವ ಸಮಾಜದ ಮುಖ್ಯವಾಹಿನಿಯಲ್ಲಿರುವುದು.

### ಗುರಿ

ಮೈಸೂರು, ಹಾಸನ ಮತ್ತು ಬಿಜಾಪುರ ಜಿಲ್ಲೆಗಳ ಸುಮಾರು 50 ಲಕ್ಷ ಜನರಿಗೆ ಹಂತ ಹಂತವಾಗಿ ನೇರ ಮತ್ತು ಜಾಲದ ಮೂಲಕ ಸಮಗ್ರ ಸೇವೆಗಳನ್ನು (ತಡೆ, ಪ್ರವರ್ತನೆ, ಉಪಶಮನ ಮತ್ತು ಪುನರ್ವಸತಿ) ಒದಗಿಸುವುದರ ಜೊತೆಗೆ ಕಾರ್ಯಕ್ರಮ ಅನುಷ್ಠಾನ ಮತ್ತು ನೀತಿ ನಿರೂಪಣೆ ಅಡ್ವೊಕಸಿಯ ನೂತನ ವಿಧಾನಗಳ ಮೂಲಕ ಎಚ್‌ಐವಿ ಸಾಂಕ್ರಾಮಿಕದ ರಾಷ್ಟ್ರೀಯ ಮಟ್ಟದ ಯೋಜನೆಗಳ ಮೇಲೆ ಪ್ರಭಾವ ಬೀರುವುದು. ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಪೂರಕ ವಾತಾವರಣ ಸೃಷ್ಟಿಸುವುದು.

**ಎಚ್‌ಐವಿ ಕಾರ್ಯಕ್ರಮವು ಈ ಕೆಳಗಿನ ಮಾರ್ಗದರ್ಶಿ ತತ್ವಗಳ ನೆಲೆಗಟ್ಟನ್ನು ಹೊಂದಿದೆ:**

- ಎಚ್‌ಐವಿ ಒಂದು ಅಭಿವೃದ್ಧಿ ವಿಷಯವಾಗಿದೆ
- ರಾಷ್ಟ್ರೀಯ ಕಾರ್ಯಕ್ರಮದಲ್ಲಿರುವ ಅಂತರಗಳನ್ನು ತುಂಬಲು ಪ್ರಯತ್ನ
- ಸಮಗ್ರ ಮತ್ತು ಎಲ್ಲರನ್ನೂ ಒಳಗೊಳ್ಳುವ ಧೋರಣೆ ಅನುಸರಣೆ
- ಹಕ್ಕುಗಳ ಆಧರಿತ ಧೋರಣೆ ಮತ್ತು ಲಿಂಗ ಸಮಾನತೆಯೊಂದಿಗೆ ನೂತನ ಸಾಂಸ್ಥಿಕ ಮಾದರಿ ಮತ್ತು ಕಾರ್ಯಕ್ರಮ ಧೋರಣೆಗಳನ್ನು ಅಭಿವೃದ್ಧಿಪಡಿಸುವುದು
- ಸರಕಾರದ ಕಾರ್ಯಕ್ರಮಗಳಿಗೆ ಪೂರಕವಾಗಿ ಮತ್ತು ಪ್ರೇರಕವಾಗಿ ಕೆಲಸ ಮಾಡುವುದು
- ಚಟುವಟಿಕೆಗಳ ನಡುವೆ ಸಮನ್ವಯ
- ಪರಸ್ಪರ ಹಂಚಿಕೆ ಮತ್ತು ಕಲಿಕೆಗಾಗಿ ಅಭಿವೃದ್ಧಿ ಮತ್ತು ಎಚ್‌ಐವಿ/ಏಡ್ಸ್ ಕ್ಷೇತ್ರದಲ್ಲಿ ಕೆಲಸ ಮಾಡುವ ವಿಶ್ವಾಸಾರ್ಹ ಸಂಸ್ಥೆಗಳ ಜೊತೆ ಜಾಲ ಮತ್ತು ಸಂಪರ್ಕ

**ಪ್ರಸ್ತುತ ಎಚ್‌ಐವಿ ಕಾರ್ಯಕ್ರಮದಲ್ಲಿ ಈ ಕೆಳಗಿನ ಅಂತರಗಳಿವೆ ಎಂಬುದನ್ನು ಎಸ್‌ವಿವೈಎಂ ಗುರುತಿಸಿದೆ**

- ಪರಿವರ್ತನೆ ಬದಲಿಗೆ ಕಾರ್ಯಕ್ರಮ ವಿಸ್ತರಣೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ
- ಖಾಸಗಿ ಕ್ಲಿನಿಕ್‌ಗಳು ಮತ್ತು ಆಸ್ಪತ್ರೆಗಳ ಪಾಲ್ಗೊಳ್ಳುವಿಕೆಯ ಕೊರತೆ ಇದೆ
- ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಎಚ್‌ಐವಿ ಕಾರ್ಯಕ್ರಮಗಳನ್ನು ಸಮಗ್ರಗೊಳಿಸುವ ಪ್ರಯತ್ನ ಸೀಮಿತವಾಗಿದೆ
- ಸರಕಾರ ಮತ್ತು ಖಾಸಗಿ ವ್ಯವಸ್ಥೆಗಳಲ್ಲಿ ಪದ್ಧತಿಗಳನ್ನು ಪ್ರಮಾಣೀಕರಿಸುವುದಕ್ಕೆ ಹೆಚ್ಚಿನ ಒತ್ತು ನೀಡಲಾಗಿಲ್ಲ.
- ಎಚ್‌ಐವಿ ಆರೈಕೆಯಲ್ಲಿ ಆಯುರ್ವೇದ ತತ್ವಗಳು ಮತ್ತು ಪದ್ಧತಿಗಳ ಕಲಿಕೆಯನ್ನು ಅಳವಡಿಸಿಕೊಳ್ಳುವುದಕ್ಕೆ ಹೆಚ್ಚಿನ ಅವಕಾಶ ಇಲ್ಲ.
- ಗಿರಾಕಿ ಆಧರಿತ ಸಮುದಾಯ ಸಂಘಟನೆ ಮಾದರಿಗಳು ಬಹಳ ಕಡಿಮೆ
- ಒವಿಸಿ ಮತ್ತು ಶಿಶು ಸೇವೆಗಳಿಗೆ ಸಂಬಂಧಿಸಿದ ಮಾದರಿಗಳು ಕಡಿಮೆ

- ಸಾಮರ್ಥ್ಯ ವೃದ್ಧಿ ಕಾರ್ಯಕ್ರಮಗಳ ಅನುಸರಣೆ ಕೊರತೆ ಇದೆ
- ಎಂಐಎಸ್ ಮತ್ತು ಉಸ್ತುವಾರಿ ಮತ್ತು ಮೌಲ್ಯಮಾಪನದ ಅಧಿಕೃತತೆ ಪ್ರಶ್ನಾರ್ಹ
- ಅತ್ಯುತ್ತಮ ಪದ್ಧತಿಗಳ ದಾಖಲಾತಿಗೆ ಹೆಚ್ಚಿನ ಒಲವು ಇಲ್ಲ
- ಕಾರ್ಯಕ್ರಮ ಮತ್ತು ಅದರ ಸುಸ್ಥಿರತೆಗೆ ಹೆಚ್ಚಿನ ಒತ್ತು ನೀಡಲಾಗಿಲ್ಲ.

ಸಾಂಕ್ರಾಮಿಕವನ್ನು ಎದುರಿಸಲು ಎಸ್‌ವಿವೈಎಂ ಸಾಂಸ್ಥಿಕ ಮತ್ತು ಕಾರ್ಯಕ್ರಮಾತ್ಮಕ ನೂತನ ಮಾದರಿಗಳ್ನು ಅಭಿವೃದ್ಧಿಪಡಿಸಲು ಸದಾ ಶ್ರಮಿಸುತ್ತಲೇ ಬಂದಿದೆ.

**ಕಾರ್ಯಕ್ರಮ ವಿನ್ಯಾಸ**

1. ನೇರವಾಗಿ ಒದಗಿಸಲಾಗುವ ಆರೋಗ್ಯ ರಕ್ಷಣೆ ಸೇವೆಗಳು

   ತಡೆ

   ಆರಂಭದಲ್ಲೇ ಪರೀಕ್ಷೆ

   ಆರೈಕೆ, ಬೆಂಬಲ ಮತ್ತು ಚಿಕಿತ್ಸೆ

2. ಸಂಪನ್ಮೂಲ ಗುಂಪುಗಳು – ತರಬೇತಿ ಮತ್ತು ಮಾಹಿತಿ ನೀಡಿಕೆ

   ಸಾಮರ್ಥ್ಯ ವೃದ್ಧಿ – ಸರಕಾರ ಮತ್ತು ಎನ್‌ಜಿಒಗಳಿಗೆ

3. ಜಾಲ ರೂಪಿಸುವಿಕೆ ಮತ್ತು ಸಹಕಾರ

   ಸಮುದಾಯ ಆಧರಿತ ಸಂಸ್ಥೆಗಳನ್ನು ಬಲಪಡಿಸುವುದು

   ಸರಕಾರ ಮತ್ತು ಎನ್‌ಜಿಒಗಳ ಜೊತೆ ಸಹಭಾಗಿತ್ವ

4. ನೂತನ ಆವಿಷ್ಕಾರಗಳು
5. ಸಂಶೋಧನೆ
6. ಅಡ್ವೊಕಸಿ– ಸರಕಾರದ ನೀತಿಯ ಮೇಲೆ ಪ್ರಭಾವ ಬೀರುವುದು
7. ತಜ್ಞರಿಂದ ಸಲಹೆ ಮತ್ತು ಸಮಾಲೋಚನೆ ಸೇವೆಗಳು

**ಕೆಲವು ಪ್ರಮುಖ ಅಂಶಗಳು**

- ಎಸ್‌ವಿವೈಎಂ ದೇಶದ ಮೊದಲ ಉಪವಿಭಾಗ ಮಟ್ಟದ ವಿಸಿಟಿಸಿಯನ್ನು ಮೈಸೂರು ಜಿಲ್ಲೆಯ ಸರಗೂರು ಮತ್ತು ಎಚ್‌ಡಿ ಕೋಟೆಯಲ್ಲಿ ಆರಂಭಿಸಿದೆ.
- ಸರಗೂರಿನ ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ಗ್ರಾಮೀಣ ರಕ್ತ ಸಂಗ್ರಹ ಕೇಂದ್ರ
- ಹೆತ್ತವರಿಂದ ಮಕ್ಕಳಿಗೆ ಸೋಂಕು ತಡೆ ಕೇಂದ್ರ
- ಪಿಪಿಟಿಸಿಟಿಗಾಗಿ ಪ್ರಾಥಮಿಕ ಆರೋಗ್ಯ ರಕ್ಷಣೆ ಹಂತದಲ್ಲಿ ಮೊದಲ ಕಾರ್ಯಕ್ರಮ
- ಎಲ್ಲರನ್ನೂ ಒಳಗೊಂಡ ಮತ್ತು ಸಮಗ್ರವಾದ ಧೋರಣೆ ಮೂಲಕ ಸಮುದಾಯ ಆರೈಕೆ ಮತ್ತು ಬೆಂಬಲ ಕೇಂದ್ರ*

*ಎಲ್ಲರನ್ನೂ ಒಳಗೊಳ್ಳುವ ಮತ್ತು ಸಮಗ್ರ ಧೋರಣೆ ಎಂದರೆ, ಎಚ್‌ಐವಿಯಿಂದ ಸೋಂಕಿತರಾದ ಮತ್ತು ಬಾಧಿತರಾದ ಜನರನ್ನು ಯಾವುದೇ ಕಳಂಕ ಮತ್ತು ತಾರತಮ್ಯ ಇಲ್ಲದೆ ಆರೈಕೆಯ ವರ್ತುಲಕ್ಕೆ ತರುವುದು ಮತ್ತು ಎಚ್‌ಐವಿ ಆರೈಕೆ ಮತ್ತು ಚಿಕಿತ್ಸೆಯನ್ನು ನಿಯಮಿತ/ಸಾರ್ವಜನಿಕ/ಖಾಸಗಿ ಆರೋಗ್ಯ ವ್ಯವಸ್ಥೆ ಮತ್ತು ಕಾರ್ಯಕ್ರಮಗಳಲ್ಲಿ ಸೇರಿಸಿಕೊಳ್ಳುವುದು.

- ಸಂಸ್ಥೆಯು ಸರಕಾರ ಮತ್ತು ಎನ್‌ಜಿಒ ಸಹಭಾಗಿತ್ವದೊಂದಿಗೆ ಮೈಸೂರು ಸರಕಾರಿ ವೈದ್ಯಕೀಯ ಕಾಲೇಜು ಆವರಣದಲ್ಲಿ ಉಚಿತ ಎಆರ್‌ಟಿ ಚಿಕಿತ್ಸಾ ಕೇಂದ್ರವನ್ನು ಆರಂಭಿಸಿದೆ. ಇದು ದೇಶದಲ್ಲಿಯೇ ಮೊದಲ ಮತ್ತು ಏಕೈಕ ಇಂತಹ ಪ್ರಯತ್ನವಾಗಿದೆ.

- ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ದೇಶದ ಏಕೈಕ ವಿಶ್ವವಿದ್ಯಾಲಯ ಮಾನ್ಯತೆಯ ಎಚ್‌ಐವಿ ಕಾರ್ಯಕ್ರಮ ಫೆಲೋಶಿಪ್ ನೀಡಿಕೆಗೆ ಪ್ರೇರಣೆ ಮತ್ತು ಸಹಕಾರ ನೀಡಿದೆ. ಪ್ರಸ್ತುತ ಇದನ್ನು ಸರಗೂರಿನಲ್ಲಿರುವ ಎಸ್‌ವಿವೈಎಂನ ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ನೀಡಲಾಗುತ್ತದೆ. ಸೆಪ್ಟೆಂಬರ್ 1, 2009ರಲ್ಲಿ ಈ ಕೋರ್ಸ್ ಆರಂಭಗೊಂಡಿದೆ.

ಕಳೆದ ಹಲವು ವರ್ಷಗಳಲ್ಲಿ ಸಂಸ್ಥೆಯು ಸಾಕಷ್ಟು ಮಟ್ಟದ ಪರಿಣತಿಯನ್ನು ಸಾಧಿಸಿದೆ ಮತ್ತು ಎಚ್‌ಐವಿ ಹಾಗೂ ಇತರ ಆರೋಗ್ಯ ರಕ್ಷಣೆ ಸೇವೆ ಒದಗಿಸುವ ದೇಶ ವಿದೇಶದ ಸಂಸ್ಥೆಗಳು ಮತ್ತು ಕಾರ್ಯಕರ್ತರಿಗೆ ಪ್ರಾಯೋಗಿಕ ಕಲಿಕಾ ಕೇಂದ್ರವಾಗಿ ರೂಪುಗೊಂಡಿದೆ. ಎಚ್‌ಐವಿ ಆರೈಕೆ ಮತ್ತು ನಿಯಂತ್ರಣಕ್ಕೆ ಸಂಸ್ಥೆಯು ಅಳವಡಿಸಿಕೊಂಡಿರುವ ಮಾದರಿಗೆ ರಾಷ್ಟ್ರ ಮಟ್ಟದ ಎಲ್ಲ ಪ್ರಮುಖ ಸಹಭಾಗಿಗಳು ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ಆರೋಗ್ಯ ರಕ್ಷಣೆ ಒದಗಿಸುತ್ತಿರುವವರು ಮತ್ತು ರೋಗಿಗಳು ಹೊಗಳಿದ್ದಾರೆ. ಯುಎನ್‌ಏಡ್ಸ್ ಇದನ್ನು ಅತ್ಯುತ್ತಮ ಮಾದರಿ ಎಂದು ದಾಖಲಿಸಿದೆ. ಸಂಘಟನೆಯ ಅಡ್ವೊಕಸಿ ಪ್ರಯತ್ನದಿಂದಾಗಿ ಈ ಮಾದರಿಗೆ ವ್ಯಾಪಕ ಸ್ವೀಕೃತಿ ಲಭ್ಯವಾಗಿದೆ. ಗ್ರಾಮೀಣ ಜನರಿಗೆ ಎಚ್‌ಐವಿ ಆರೈಕೆ ಸೇವೆಗಳು ಸುಲಭವಾಗಿ ಕೈಗೆಟುಕಬೇಕು ಎಂಬ ದೃಷ್ಟಿಯಿಂದ ಸಂಸ್ಥೆಯ ವಿನಂತಿಯ ಮೇರೆಗೆ ಕರ್ನಾಟಕದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಚ್‌ಐವಿ ಆರೈಕೆ ಮತ್ತು ಚಿಕಿತ್ಸೆ ಆರಂಭಿಸಲಾಗುತ್ತಿದೆ.

ಸಾಮರ್ಥ್ಯ ವೃದ್ಧಿ ಕ್ಷೇತ್ರದಲ್ಲಿ ಸಂಸ್ಥೆಯನ್ನು ಸಂಪನ್ಮೂಲ ಕೇಂದ್ರ ಎಂದೇ ಗುರುತಿಸಲಾಗುತ್ತಿದೆ.

- ಕರ್ನಾಟಕ, ಆಂಧ್ರ ಪ್ರದೇಶ, ಮಹಾರಾಷ್ಟ್ರ ಮತ್ತು ತಮಿಳು ನಾಡು ರಾಜ್ಯಗಳಲ್ಲಿ ಎಚ್‌ಐವಿ ಆರೈಕೆಯಲ್ಲಿ ತೊಡಗಿರುವ ವೈದ್ಯರು ಮತ್ತು ನರ್ಸ್‌ಗಳಿಗೆ ಸಂಸ್ಥೆಯು **ನಿರಂತರ ಶಿಕ್ಷಣ ಮತ್ತು ತರಬೇತಿ ಕೇಂದ್ರ** ಎಂದು ಗ್ಲೋಬಲ್ ಫಂಡ್ ರೌಂಡ್ 4ರಲ್ಲಿ ಎನ್‌ಜೆಂಡರ್ ಹೆಲ್ತ್ ಸೊಸೈಟಿಯು ಗುರುತಿಸಿದೆ.
- ಕರ್ನಾಟಕ ಎಚ್‌ಐವಿ/ಏಡ್ಸ್ ಕಾರ್ಯಕ್ರಮದಲ್ಲಿ ಎಚ್‌ಐವಿ ವಿಷಯಗಳಿಗೆ ಸಂಬಂಧಿಸಿದಂತೆ ಸರಕಾರಿ ಮತ್ತು ಖಾಸಗಿ ಆರೋಗ್ಯ ಸಂಸ್ಥೆಗಳ ವೈದ್ಯರು ಮತ್ತು ನರ್ಸ್‌ಗಳಿಗೆ ಪ್ರಾದೇಶಿಕ ಸಂಪನ್ಮೂಲ ಮತ್ತು ತರಬೇತಿ ಕೇಂದ್ರ ಎಂದು ಗುರುತಿಸಲಾಗಿದೆ.

**ಹೊಸ ಕಾರ್ಯಕ್ರಮಗಳು**

1. ವೈದ್ಯಕೀಯ ಕಾಲೇಜುಗಳಲ್ಲಿ ಸಮುದಾಯ ಆರೈಕೆ ಕೇಂದ್ರಗಳ ಸ್ಥಾಪನೆ. ಒಂದು ಸರಕಾರಿ ವೈದ್ಯಕೀಯ ಕಾಲೇಜು (ಹಾಸನ) ಮತ್ತು ಒಂದು ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ (ಬಿಎಲ್‌ಡಿಇಯ ಬಿ ಎಂ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ, ಬಿಜಾಪುರ) ಪ್ರಾಯೋಗಿಕವಾಗಿ ಆರಂಭಿಸಲಾಗಿದೆ. ಇದು ಈ ಕೆಳಗಿನ ಉದ್ದೇಶಗಳನ್ನು ಈಡೇರಿಸುವ ನಿರೀಕ್ಷೆ ಇದೆ.
2. ರಾಷ್ಟ್ರೀಯ ಕಾರ್ಯಕ್ರಮ, ಪ್ರೊಟೊಕಾಲ್ ಮತ್ತು ವಿಷಯಗಳ ಬಗ್ಗೆ ಖಾಸಗಿಯಾಗಿ ವೈದ್ಯ ವೃತ್ತಿ ನಡೆಸುವವರಿಗೆ ವೈದ್ಯಕೀಯ ಪ್ರತಿನಿಧಿ ಮಾದರಿಯಲ್ಲಿ ತರಬೇತಿ ನೀಡಿಕೆ.
3. ಕರ್ನಾಟಕದ ಬುಡಕಟ್ಟು ಜನರಿಗೆ ಎಚ್‌ಐವಿ ಕಾರ್ಯಕ್ರಮ ಅನುಷ್ಠಾನ ನೀತಿ ಅಭಿವೃದ್ಧಿಗೆ ನೆರವು ನೀಡುವುದಕ್ಕಾಗಿ ಇದನ್ನು ಕೈಗೆತ್ತಿಕೊಳ್ಳಲಾಗಿದೆ.
4. ರಾಜ್ಯದ ಎಆರ್‌ಟಿ ಕೇಂದ್ರಗಳಲ್ಲಿರುವ ಸಮುದಾಯ ಆರೈಕೆ ಕೇಂದ್ರದ ಸಂಯೋಜಕರಿಗೆ ನಿರ್ದಿಷ್ಟ ತರಬೇತಿ ಮಾದರಿಗಳು.

"ಕಳೆದ ನಾಲ್ಕು ವರ್ಷಗಳಿಂದ ಇಲ್ಲಿಗೆ ಬರುತ್ತಿದ್ದೇನೆ. ಆರಂಭದಲ್ಲಿ ನಾನು ಖಾಸಗಿ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೆ. ಅದು ಅತ್ಯಂತ ದುಬಾರಿ. ಆನಂತರ ನನಗೆ ಎಸ್‌ವಿವೈಎಂ ಬಗ್ಗೆ ತಿಳಿಯಿತು. ಈ ಸಂಸ್ಥೆಯಿಂದ ನನಗೆ ಬಹಳಷ್ಟು ಸಹಾಯವಾಗಿದೆ. ಇಲ್ಲಿ ಔಷಧ ಮಾತ್ರವಲ್ಲದೆ, ಪೌಷ್ಟಿಕ ಆಹಾರ ಮತ್ತು ಮಾನಸಿಕ–ಸಾಮಾಜಿಕ ಬೆಂಬಲವೂ ದೊರೆಯುತ್ತದೆ. ಜೀವನ ಸಂಕಷ್ಟಗಳಲ್ಲ, ಅದೊಂದು ಸಂತೋಷ ಎಂಬುದು ನನಗೆ ಈಗ ಅರಿವಾಗಿದೆ" ಸಮುದಾಯದ ಸದಸ್ಯೆ ಸುನೈನಾ ಎಂ (ಹೆಸರು ಬದಲಿಸಲಾಗಿದೆ) ಹೇಳುತ್ತಾರೆ.

ಎಚ್‌ಐವಿ ತಡೆ, ಆರೈಕೆ ಮತ್ತು ಬೆಂಬಲದ ಎಲ್ಲ ಆಯಾಮಗಳಿಗೂ ನಿಜಕ್ಕೂ ಸಮಗ್ರ ಮತ್ತು ಎಲ್ಲವನ್ನೂ ಒಳಗೊಂಡ ಧೋರಣೆ ಮೂಲಕ ಎಸ್‌ವಿವೈಎಂ ಗಮನ ಹರಿಸಿದೆ. ಸಂಸ್ಥೆಯು ಹಲವು ಸರಕಾರಿ, ಎನ್‌ಜಿಒ ಮತ್ತು ಖಾಸಗಿ ಸಂಸ್ಥೆಗಳ ಜೊತೆ ಸಹಭಾಗಿತ್ವವನ್ನೂ ಹೊಂದಿದೆ. ಕೆಲಸ, ಧೋರಣೆ, ಪಾರದರ್ಶಕತೆ ಮತ್ತು ಸೇವೆಯ ಮಹಾನ್ ತತ್ವಗಳಿಗೆ ತೋರುತ್ತಿರುವ ಬದ್ಧತೆಗೆ ಎಸ್‌ವಿವೈಎಂ ತಂಡಕ್ಕೆ ನಮ್ಮ ಅಭಿನಂದನೆಗಳು.

# ಎಚ್‌ಐವಿ ಆರೈಕೆಗೆ ಸಮನ್ವಯ

## ರಾಷ್ಟ್ರೀಯ ಉತ್ತಮ ಪದ್ಧತಿ ಕಾರ್ಯಾಗಾರ




**ಗ್ಲೋಬಲ್** ಫಂಡ್‌ನಿಂದ ಎಚ್‌ಐವಿ ಮತ್ತು ಏಡ್ಸ್‌ನೊಂದಿಗೆ ಜೀವಿಸುತ್ತಿರುವವರಿಗೆ ದೊರೆಯುತ್ತಿರುವ ಆರೈಕೆ ಮತ್ತು ಬೆಂಬಲ 2016ರ ಮಾರ್ಚ್ ವರೆಗೆ ಮುಂದುವರಿಯಲಿದೆ ಎಂದು ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯ (ನ್ಯಾಕೊ) ಆರೈಕೆ, ಬೆಂಬಲ ಮತ್ತು ಚಿಕಿತ್ಸೆ ವಿಭಾಗದ ಉಪ ನಿರ್ದೇಶಕ ಡಾ. ಡಿ ಬಚನಿ ಹೇಳಿದ್ದಾರೆ. ಗುರುವಾರ ಸರ್ಜಾಪುರ ರಸ್ತೆ ಸಮೀಪ ಸ್ನೇಹದಾನ ಆಯೋಜಿಸಿದ್ದ ಎಚ್‌ಐವಿ ಆರೈಕೆ ಸಮನ್ವಯ– ಒಂದು ರಾಷ್ಟ್ರೀಯ ಉತ್ತಮ ಪದ್ಧತಿ ಎಂಬ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಪ್ರಸ್ತುತ 2,70,000 ಎಚ್‌ಐವಿ ಪಾಸಿಟಿವ್ ಜನರು ಎಆರ್‌ಟಿ ಪಡೆಯುತ್ತಿದ್ದಾರೆ. ಸದ್ಯದಲ್ಲೇ ಈ ಸಂಖ್ಯೆ ಮೂರು ಲಕ್ಷಕ್ಕೆ ಏರುವ ನಿರೀಕ್ಷೆ ಇದೆ. ಮಾರ್ಚ್ 2012ಕ್ಕೆ ಹಾಕಿಕೊಳ್ಳಲಾಗಿದ್ದ ಗುರಿಯನ್ನು ಮಾರ್ಚ್ 2010ರಲ್ಲೇ ತಲುಪಬಹುದು. ಮುಂದಿನ ಆರು ವರ್ಷಗಳ ಅವಧಿಗೆ ಆರೈಕೆ ಮತ್ತು ಬೆಂಬಲಕ್ಕೆ 500 ಮಿಲಿಯನ್ ಡಾಲರ್ ನೆರವು ಮುಂದುವರಿಸಲು ಗ್ಲೋಬಲ್ ಫಂಡ್ ಸಿದ್ಧವಿದೆ ಎಂದು ಡಾ. ಬಚನಿ ಹೇಳಿದರು. ಎಚ್‌ಐವಿಯೊಂದಿಗೆ ಜೀವಿಸುತ್ತಿರುವವರಿಗೆ ದೇಶಾದ್ಯಂತ ಏಕರೂಪದಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗುವಂತಹ ಸೂಕ್ತ ಆರೈಕೆ ಮತ್ತು ಬೆಂಬಲದ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ರೂಪಿಸಬೇಕಿದೆ ಎಂದು ಅವರು ಹೇಳಿದರು.

“ಕರ್ನಾಟಕದಲ್ಲಿ ಎಚ್‌ಐವಿಯೊಂದಿಗೆ ಜೀವಿಸುತ್ತಿರುವವರು ಮತ್ತು ಅವರ ಬಾಧಿತ ಕುಟುಂಬದವರಿಗೆ ಸಮಗ್ರ, ಸಮರ್ಪಕ ಮತ್ತು ಸಹಾನುಭೂತಿಯ ಆರೈಕೆ ಒದಗಿಸುವುದು ನಮ್ಮ ಗುರಿ” ಎಂದು ಕೆಸಾಪ್ಸ್ ಯೋಜನಾ ನಿರ್ದೇಶಕ ಆರ್ ಆರ್ ಜನ್ನು ಹೇಳಿದರು. 34 ಎಆರ್‌ಟಿ ಕೇಂದ್ರಗಳು, 565 ಐಸಿಟಿಸಿಗಳು ಮತ್ತು 36 ಸಮುದಾಯ ಆರೈಕೆ ಕೇಂದ್ರಗಳ ಮೂಲಕ ಇದನ್ನು ಸಾಧಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

“ಹಲವಾರು ಸಂಘಟನೆಗಳು ಎಚ್‌ಐವಿಯೊಂದಿಗೆ ಜೀವಿಸುತ್ತಿರುವ ಜನರ ಆರೈಕೆ, ಬೆಂಬಲ ಮತ್ತು ಚಿಕಿತ್ಸೆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿವೆ. ಈ ರಾಷ್ಟ್ರೀಯ ವಿಚಾರ ಸಂಕಿರಣವು ವಿವಿಧ ರಾಜ್ಯಗಳು ಅತ್ಯುತ್ತಮ ಪದ್ಧತಿಗಳ ಕಲಿಕೆಯನ್ನು ಹಂಚಿಕೊಳ್ಳಲು ಉತ್ತಮ ವೇದಿಕೆ. ದೇಶಾದ್ಯಂತದ ಎಚ್‌ಐವಿ ಆರೈಕೆಯ ಅತ್ಯುತ್ತಮ ಪದ್ಧತಿಗಳನ್ನು ದಾಖಲಿಸಿಕೊಳ್ಳಲೂ ಇದು ನೆರವಾಗುತ್ತದೆ” ಎಂದು ಕೆಎಚ್‌ಪಿಟಿಯ ನಿರ್ದೇಶಕ ಡಾ. ರೆನಾಲ್ಡ್ ಹೇಳಿದರು.

ಆರೈಕೆ ಕೇಂದ್ರಗಳು ಮತ್ತು ಎಆರ್‌ಟಿ ಕೇಂದ್ರಗಳ ಯಶೋಗಾಥೆಗಳು, ಉಪಗ್ರಹ ಮೂಲಕ ಕೌಶಲ ವೃದ್ಧಿ

ಕಾರ್ಯಕ್ರಮದಲ್ಲಿ ಕೈಗೆತ್ತಿಕೊಳ್ಳಲಾದ ಪಾಸಿಟಿವ್ ಜನರ ದೃಷ್ಟಿಕೋನ ರೂಪಿಸುವಿಕೆ, ಸೋಂಕು ತಡೆ, ಆರೋಗ್ಯ ರಕ್ಷಣೆ ವ್ಯವಸ್ಥೆಯಲ್ಲಿ ಕಳಂಕ ಮತ್ತು ತಾರತಮ್ಯ ಕಡಿಮೆಗೊಳಿಸುವುದು ಮುಂತಾದ ವಿಷಯಗಳ ಬಗೆಗಿನ ಭಿತ್ತಿ ಚಿತ್ರ ಪ್ರದರ್ಶನವೂ ನಡೆಯಿತು. ವಿವಿಧ ರಾಜ್ಯಗಳಲ್ಲಿನ ಎಚ್‌ಐವಿ ಆರೈಕೆಯ ಅನುಭವ ಮತ್ತು ಸವಾಲುಗಳನ್ನು ಹಂಚಿಕೊಳ್ಳುವುದು, ಭಾರತದಲ್ಲಿನ ಎಚ್‌ಐವಿ ಆರೈಕೆಯ ಉತ್ತಮ ಪದ್ಧತಿಗಳನ್ನು ಒಟ್ಟುಗೂಡಿಸಿ ದಾಖಲಿಸುವುದು ಮತ್ತು ವಿವಿಧ ಹಂತದ ನೀತಿ ನಿರೂಪಣೆ ಹಾಗೂ ಧೋರಣೆ ಮೇಲೆ ಪ್ರಭಾವ ಬೀರುವುದು ಕಾರ್ಯಾಗಾರದ ಉದ್ದೇಶವಾಗಿತ್ತು. ಕಾರ್ಯಾಗಾರದ ಕೊನೆಯಲ್ಲಿ ದೇಶಾದ್ಯಂತ ಎಚ್‌ಐವಿ ಆರೈಕೆಯಲ್ಲಿ ಅನುಸರಿಸಲಾಗುತ್ತಿರುವ ಅತ್ಯುತ್ತಮ ಪದ್ಧತಿಗಳನ್ನು ದಾಖಲಿಸಿ ವಿವಿಧ ರಾಜ್ಯಗಳಿಗೆ ಹಂಚಲಾಗುವುದು. ಎಚ್‌ಐವಿ ಆರೈಕೆಯ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ದೇಶಾದ್ಯಂತ ಇರುವ ಸಂಘಟನೆಗಳಿಗೆ ಇದು ನೆರವಾಗುತ್ತದೆ.

ನ್ಯಾಕೊ, ತಾಂತ್ರಿಕ ಬೆಂಬಲ ಘಟಕ, ಜಿಲ್ಲಾ ಏಡ್ಸ್ ತಡೆ ಮತ್ತು ನಿಯಂತ್ರಣ ಘಟಕಗಳು, ವಿಶ್ವವಿದ್ಯಾಲಯಗಳು ಮತ್ತು ಎಚ್‌ಐವಿ ಪಾಸಿಟಿವ್ ಜನರ ಜಾಲದ ಪ್ರತಿನಿಧಿಗಳು ಸೇರಿದಂತೆ ಸುಮಾರು 250 ಜನರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಯುಎಸ್‌ಏಡ್, ವಿಶ್ವ ಆರೋಗ್ಯ ಸಂಸ್ಥೆ, ಕೆಎಚ್‌ಪಿಟಿ, ಪಿಸಿಐ, ಎಪಿಎಸಿ, ಅವರ್ಟ್ ಸೊಸೈಟಿ, ಸಮರ್ಥ್, ಎಫ್‌ಎಚ್‌ಐ, ಯುನಿಸೆಫ್, ಕ್ಲಿಂಟನ್ ಫೌಂಡೇಶನ್, ಎನ್‌ಆರ್‌ಎಚ್‌ಎಂ ಕರ್ನಾಟಕ, ಪಿಎಚ್‌ಎಫ್‌ಐ, ಲೆಪ್ರ ಸೊಸೈಟಿ, ಆರ್ಕಿಡ್, ಕರ್ನಾಟಕ, ತಮಿಳು ನಾಡು, ಕೇರಳ, ಮಹಾರಾಷ್ಟ್ರ, ದೆಹಲಿ, ರಾಜಸ್ಥಾನ, ಉತ್ತರ ಪ್ರದೇಶ, ಗುಜರಾತ್, ಮಿಜೋರಾಂ, ನಾಗಾಲ್ಯಾಂಡ್‌ನ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿಗಳು, ಪಿಡಬ್ಲ್ಯುಎನ್+, ಐಎನ್‌ಪಿ+, ಕೆಎನ್‌ಪಿ+, ಪಿಎಫ್‌ಐ, ಪಿಡಬ್ಲ್ಯುಡಿಎಫ್–ತಮಿಳುನಾಡು, ವರ್ಲ್ಡ್ ವಿಶನ್, ಫ್ರೀಡಂ ಫೌಂಡೇಶನ್, ಆ್ಯಕ್ಷನ್ ಏಡ್ ಮತ್ತು ಪಿಸಿಐ ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಡಾ. ಸ್ಟೀಫನ್ ಮೋಸೆಸ್, ದೇಶೀಯ ನಿರ್ದೇಶಕರು, ಎಚ್‌ಐವಿ/ಏಡ್ಸ್ ಕಾರ್ಯಕ್ರಮ, ಕೆಎಚ್‌ಪಿಟಿ ಮತ್ತು ಯುಎಸ್‌ಏಡ್ ಹಿರಿಯ ಸಲಹೆಗಾರರಾದ ಡಾ. ಸಂಗೀತಾ ಕೌಲ್ ಮಾತನಾಡಿದರು. "ಸುಮಾರು 40 ಸಮುದಾಯ ಆರೈಕೆ ಕೇಂದ್ರಗಳು ಜನರ ಮನ ಮುಟ್ಟುತ್ತಿವೆ. ಸಹಾನುಭೂತಿಯ ಆರೈಕೆಯೇ ಎಚ್‌ಐವಿ ಆರೈಕೆ" ಎಂದು ಸ್ನೇಹದಾನದ ನಿರ್ದೇಶಕ ಫಾ. ಮ್ಯಾಥ್ಯೂ ಪೆರುಂಪಿಲ್ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಹೇಳಿದರು. ಉನ್ನತ ಹಂತಗಳಲ್ಲಿ ಎಚ್‌ಐವಿಯೊಂದಿಗೆ ಜೀವಿಸುತ್ತಿರುವವರನ್ನು ಭಾಗಿಯಾಗಿಸುತ್ತಿರುವುದಕ್ಕೆ ಕೆಎನ್‌ಪಿ+ನ ಅಧ್ಯಕ್ಷೆ ಸರೋಜ ಪುತ್ರನ್ ಕೃತಜ್ಞತೆ ಅರ್ಪಿಸುತ್ತಾ ಕಾರ್ಯಾಗಾರದಲ್ಲಿ ಭಾಗವಹಸಿದ ಎಲ್ಲರಿಗೂ ಧನ್ಯವಾದ ಹೇಳಿದರು.

# ರೆಡ್ ರಿಬ್ಬನ್ ಕ್ಲಬ್




### ಪರಿಕಲ್ಪನೆ

ಶಿಕ್ಷಣ ಸಂಸ್ಥೆಗಳಲ್ಲಿ ಎಚ್‌ಐವಿ ಮತ್ತು ಏಡ್ಸ್ ಬಗ್ಗೆ ಜಾಗೃತಿ ಮೂಡಿಸುವ ಮತ್ತು ರಕ್ತದಾನಕ್ಕೆ ಪ್ರೇರಣೆ ನೀಡುವ ವಿದ್ಯಾರ್ಥಿಗಳ ಸ್ವಯಂಪ್ರೇರಿತ ಸಂಘಟನೆಗಳೇ ರೆಡ್ ರಿಬ್ಬನ್ ಕ್ಲಬ್‌ಗಳು. ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ ಬೆಂಬಲದ ಈ ಕಾರ್ಯಕ್ರಮ ಎನ್‌ಎಸ್‌ಎಸ್ ಸಹಭಾಗಿತ್ವದಲ್ಲಿ ನಡೆಯುತ್ತಿದೆ.

ಯುವ ಜನರಿಗೆ ಕೌಶಲ ಮತ್ತು ಜ್ಞಾನ ವೃದ್ಧಿ ತರಬೇತಿಗಳನ್ನು ನೀಡುವುದಕ್ಕೆ ರೆಡ್ ರಿಬ್ಬನ್ ಕ್ಲಬ್ ವೇದಿಕೆಯಾಗಿದೆ. ರೆಡ್ ರಿಬ್ಬನ್ ಕ್ಲಬ್ ಮೂಲಕ ಯುವ ಜನರು ಸುರಕ್ಷಿತ ಮತ್ತು ಆರೋಗ್ಯಕರ ಜೀವನ ಶೈಲಿಯ ಅಳವಡಿಕೆಯನ್ನು ರೂಢಿಸಿಕೊಳ್ಳುತ್ತಾರೆ. ಜನರಲ್ಲಿ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ, ಸ್ವಯಂ ಪ್ರೇರಿತ ರಕ್ತದಾನಕ್ಕೆ ಪ್ರೇರಣೆ ನೀಡುವುದು ಮತ್ತು ರಾಜ್ಯದ ಎಚ್‌ಐವಿ ಮತ್ತು ಏಡ್ಸ್ ತಡೆ ಕಾರ್ಯಕ್ರಮದಲ್ಲಿ ಬದಲಾವಣೆಯ ಹರಿಕಾರರಾಗಿ ಯುವಕರ ಬಳಕೆ ಈ ಕಾರ್ಯಕ್ರಮದ ಕಾರ್ಯತಂತ್ರವಾಗಿದೆ.

ರಾಜೀವ್ ಗಾಂಧಿ ವಿಶ್ವವಿದ್ಯಾಲಯ, ಬಿಜಾಪುರ ವಿಶ್ವವಿದ್ಯಾಲಯ, ಗುಲ್ಬರ್ಗ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಕೆಸಾಪ್ಸ್ 204 ರೆಡ್ ರಿಬ್ಬನ್ ಕ್ಲಬ್‌ಗಳನ್ನು ಸ್ಥಾಪಿಸಿದೆ.

ಎಚ್‌ಐವಿ ಮತ್ತು ಏಡ್ಸ್ ತಡೆ, ಆರೈಕೆ ಮತ್ತು ಬೆಂಬಲ ಹಾಗೂ ಚಿಕಿತ್ಸೆಯ ಬಗ್ಗೆ ಸರಿಯಾದ ಮಾಹಿತಿ ನೀಡಿ ಯುವಕರನ್ನು ಸಜ್ಜುಗೊಳಿಸಿ ಅವರ ಸಾಮರ್ಥ್ಯವನ್ನು ಬಳಸಿಕೊಳ್ಳುವುದು ರೆಡ್ ರಿಬ್ಬನ್ ಕ್ಲಬ್ ಉದ್ದೇಶವಾಗಿದೆ. ಆರೋಗ್ಯ ರಕ್ಷಣೆ ಕಾಳಜಿ ಮತ್ತು ಆರೋಗ್ಯಕರ ಜೀವನಕ್ರಮಕ್ಕೆ ಸಂಬಂಧಿಸಿದಂತೆ ಸರಿಯಾದ ಸಂದೇಶ ಸಾರುವುದಕ್ಕೆ ಸಹವರ್ತಿ ಶಿಕ್ಷಕರಾಗಿ ಅವರ ಸಾಮರ್ಥ್ಯವೃದ್ಧಿಯ ಉದ್ದೇಶವೂ ಇದೆ. ಪೂರಕ ವಾತಾವರಣ ಸೃಷ್ಟಿ ಮತ್ತು ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಪ್ರೇರಿತ ರಕ್ತ ದಾನಕ್ಕೆ ಮುಂದಾಗುವುದಕ್ಕೆ ಪ್ರೇರಣೆ ನೀಡುವ ಕೆಲಸವನ್ನೂ ಅವರು ಮಾಡುತ್ತಾರೆ.

# ವಿಶೇಷ ವರದಿ

**ಗುರಿ**

ಎಚ್‌ಐವಿ ಮತ್ತು ಏಡ್ಸ್ ತಡೆ, ಚಿಕಿತ್ಸೆ, ಆರೈಕೆ ಮತ್ತು ಬೆಂಬಲದ ಬಗ್ಗೆ ಯುವಕರಿಗೆ ಸರಿಯಾದ ಮಾಹಿತಿ ನೀಡಿ ಅವರನ್ನು ಸಜ್ಜುಗೊಳಿಸುವುದು.

**ಉದ್ದೇಶಗಳು**

1. ಎಚ್‌ಐವಿ ತಡೆ ವಿಧಾನಗಳ ಬಗ್ಗೆ ಜಾಗೃತಿ ಮೂಡಿಸುವುದರೊಂದಿಗೆ ಅಪಾಯದ ಗ್ರಹಿಕೆಯನ್ನು ಹೆಚ್ಚಿಸಿ ಯುವಜನರಲ್ಲಿ ಹೊಸ ಸೋಂಕು ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡುವುದು.
2. ಯುವಕರಲ್ಲಿ ಎಚ್‌ಐವಿಯೊಂದಿಗೆ ಜೀವಿಸುವ ಜನರಿಗೆ ಸಹಾಯ ಮತ್ತು ಬೆಂಬಲ ನೀಡುವ ಮನಸ್ಥಿತಿಯನ್ನು ಬೆಳೆಸುವುದು ಮತ್ತು ಆ ಮೂಲಕ ಆ ಜನರು ಎದುರಿಸುವ ಕಳಂಕ ಮತ್ತು ತಾರತಮ್ಯವನ್ನು ಕಡಿಮೆ ಮಾಡುವುದು.
3. ನಾಯಕತ್ವ ಗುಣಗಳು, ಸಂಧಾನ ಕೌಶಲ ಮತ್ತು ತಂಡ ಕಟ್ಟುವಿಕೆ ಕೌಶಲಗಳಲ್ಲಿ ಸಾಮರ್ಥ್ಯ ವೃದ್ಧಿ ನಡೆಸಿ ಸಹವರ್ತಿ ಶಿಕ್ಷಕರು ಮತ್ತು ಬದಲಾವಣೆಯ ಹರಿಕಾರರಾಗಲು ಯುವಕರಿಗೆ ಪ್ರೇರಣೆ ನೀಡುವುದು.
4. ಯುವಕರಲ್ಲಿ ಸ್ವಯಂ ಪ್ರೇರಿತ ರಕ್ತದಾನಕ್ಕೆ ಪ್ರೇರಣೆ ನೀಡುವುದು.

**ಕಾಲೇಜು ಮತ್ತು ಅಂತರ್ ಕಾಲೇಜು ಮಟ್ಟದಲ್ಲಿ ರೆಡ್ ರಿಬ್ಬನ್ ಕ್ಲಬ್ ಮೂಲಕ ನಡೆಯುವ ಚಟುವಟಿಕೆಗಳು–**

1. ಸಹವರ್ತಿ ಶಿಕ್ಷಕರಿಗೆ ತರಬೇತಿ
2. ಉಪನ್ಯಾಸ, ಚರ್ಚೆ/ಸಂವಾದ/ಸ್ಪರ್ಧೆ ಮುಂತಾದ ಮಾಸಿಕ ಕಾರ್ಯಕ್ರಮಗಳ ಮೂಲಕ ಜಾಗೃತಿ.
3. ರಕ್ತದಾನ ಶಿಬಿರಗಳು
4. ಸಂಸ್ಥೆಯಲ್ಲಿ ವಿಶ್ವ ಏಡ್ಸ್ ದಿನ ಆಚರಣೆ
5. ಎಚ್‌ಐವಿಯೊಂದಿಗೆ ಜೀವಿಸುತ್ತಿರುವ ಜನರು ಎದುರಿಸುತ್ತಿರುವ ಕಳಂಕ ಮತ್ತು ತಾರತಮ್ಯದ ಬಗ್ಗೆ ಮಾಹಿತಿ ನೀಡಿಕೆ ಕಾರ್ಯಕ್ರಮ

**ರಾಜ್ಯದ ಕಾಲೇಜುಗಳಲ್ಲಿ ಸ್ಥಾಪನೆಗೊಂಡಿರುವ ರೆಡ್ ರಿಬ್ಬನ್ ಕ್ಲಬ್‌ಗಳ ಸಂಖ್ಯೆ**

| ಕ್ರ. ಸಂ. | ಜಿಲ್ಲೆ | ರಾಜೀವ್ ಗಾಂಧಿ ವಿವಿ | ಗುಲ್ಬರ್ಗ ವಿಶ್ವ ವಿದ್ಯಾಲಯ | ಬೆಂಗಳೂರು ವಿವಿ | ಬಿಜಾಪುರ ವಿಶ್ವ ವಿದ್ಯಾಲಯ |
|---|---|---|---|---|---|
| 1 | ಬಾಗಲಕೋಟೆ | | | | 1 |
| 2 | ಬೆಳಗಾವಿ | | | | 2 |
| 3 | ಬಳ್ಳಾರಿ | | 8 | | 2 |
| 4 | ಬೀದರ್ | 1 | 17 | | 3 |
| 5 | ಬಿಜಾಪುರ | 1 | | | 7 |
| 6 | ಬೆಂಗಳೂರು ನಗರ | 23 | | 36 | |
| 7 | ಧಾರವಾಡ | 2 | | | 5 |
| 8 | ಗದಗ | | | | 1 |
| 9 | ಗುಲ್ಬರ್ಗ | 2 | 35 | | 10 |
| 10 | ಹಾಸನ | 2 | | | |
| 11 | ಹಾವೇರಿ | | | | 4 |
| 12 | ಕೊಪ್ಪಳ | | 9 | | 1 |
| 13 | ಉತ್ತರ ಕನ್ನಡ | 1 | | | 2 |
| 14 | ದಕ್ಷಿಣ ಕನ್ನಡ | 5 | | | |
| 15 | ಮೈಸೂರು | 3 | | | |
| 16 | ರಾಯಚೂರು | | 11 | | 5 |
| 17 | ರಾಮನಗರ | | | 3 | |
| 18 | ತುಮಕೂರು | 2 | | | |
| | ಒಟ್ಟು 204 | 42 | 80 | 39 | 43 |



# ಶಿಶು ತಪಾಸಣೆ

**ಪೀಠಿಕೆ**

**ಹದಿನೆಂಟು ತಿಂಗಳ ಒಳಗಿನ ಮಕ್ಕಳಲ್ಲಿ ಎಚ್‌ಐವಿ ಮತ್ತು ಏಡ್ಸ್ ನಿರ್ವಹಣೆ**

ಈ ಕೆಳಗಿನ ಮಾರ್ಗದಲ್ಲೇ ಬಹುತೇಕ ಮಕ್ಕಳಿಗೆ ತಮ್ಮ ಹೆತ್ತವರಿಂದ ಎಚ್‌ಐವಿ ಸೋಂಕು ಹರಡುತ್ತದೆ.

1. ಗರ್ಭಧರಿಸಿರುವ ಅವಧಿ
2. ಹೆರಿಗೆ
3. ಎದೆ ಹಾಲೂಡಿಸುವಿಕೆ

ಭಾರತದಲ್ಲಿ ಸೋಂಕು ಹರಡುವ ಈ ಮಾರ್ಗಗಳು ಈಗಲೂ ಸಾಮಾನ್ಯವೇ ಆಗಿವೆ. ಹೆತ್ತವರಿಂದ ಮಕ್ಕಳಿಗೆ ಸೋಂಕು ಹರಡುವಿಕೆ ತಡೆ ಕಾರ್ಯಕ್ರಮದ ಮೂಲಕ ನ್ಯಾಕೊ ಈ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸುತ್ತಿದೆ.

ಎಚ್‌ಐವಿ ಪಾಸಿಟಿವ್ ಮಹಿಳೆಯರಿಗೆ ಜನಿಸುವ ಪ್ರತಿ ಮಗುವನ್ನೂ ಸೋಂಕಿಗೆ ತೆರೆದುಕೊಂಡ ಶಿಶು ಎಂದು ಪರಿಗಣಿಸಲಾಗುತ್ತದೆ. ಎದೆ ಹಾಲು ಕುಡಿಯುವುದನ್ನು ನಿಲ್ಲಿಸಿದ ನಂತರವಷ್ಟೇ ಆ ಶಿಶುವಿಗೆ ಸೋಂಕು ಇಲ್ಲ ಎಂಬುದನ್ನು ದೃಢಪಡಿಸುವುದು ಸಾಧ್ಯ.

**ಮಕ್ಕಳ ಎಚ್‌ಐವಿ ಮತ್ತು ಏಡ್ಸ್ ಪರೀಕ್ಷೆಯ ಸವಾಲುಗಳು**

ತಾಯಿ ಮತ್ತು ಮಗುವಿನ ದೇಹದಲ್ಲಿ ಉತ್ಪತ್ತಿಯಾದ ಪ್ರತಿವಿಷಗಳನ್ನು (ಆ್ಯಂಟಿಬಾಡಿ) ಪ್ರತ್ಯೇಕಿಸಿ ಗುರುತಿಸಲು ಐಸಿಟಿಸಿಯಲ್ಲಿ ನಡೆಸುವ ಪರೀಕ್ಷೆಗೆ ಸಾಧ್ಯವಾಗುವುದಿಲ್ಲ. ಆದುದರಿಂದ ಮಗುವಿಗೆ ಎಚ್‌ಐವಿ ಸೋಂಕು ಇದೆಯೇ ಇಲ್ಲವೇ ಎಂದು ಹೇಳುವುದು ಕಷ್ಟ. ಜನನದ ನಂತರ ಹಲವು ತಿಂಗಳ ವರೆಗೆ ಮತ್ತು ತಾಯಿಯು ಮಗುವಿಗೆ ಹಾಲೂಡಿಸುತ್ತಿರುವಷ್ಟು ಅವಧಿಯಲ್ಲಿ ಮಗುವಿನ ರಕ್ತದಲ್ಲಿ ತಾಯಿಯ ದೇಹದ ಪ್ರತಿವಿಷಗಳು ಕಂಡು ಬರುತ್ತವೆ.

**18 ತಿಂಗಳ ಒಳಗಿನ ಮಕ್ಕಳಲ್ಲಿ ಎಚ್‌ಐವಿ ಸೋಂಕು ಪರೀಕ್ಷೆ**

ಮಗುವಿಗೆ ಎಚ್‌ಐವಿ ಸೋಂಕು ಇದೆಯೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಮಗುವಿನ ರಕ್ತದಲ್ಲಿರುವ ವೈರಸ್‌ನ ಡಿಎನ್‌ಎಯನ್ನು ಗುರುತಿಸಬೇಕು. ಪಾಲಿಮರಸ್ ಚೈನ್ ರಿಯಾಕ್ಷನ್ (ಪಿಸಿಆರ್) ಎಂದು ಈ ವಿಶೇಷ ಪರೀಕ್ಷೆಯನ್ನು ಕರೆಯುತ್ತಾರೆ. ಇದನ್ನು ಎರಡು ರೀತಿಯಲ್ಲಿ ನಡೆಸಬಹುದು.

1. ರಕ್ತದ ಒಣ ಕಲೆ (ಡಿಬಿಎಸ್): ಫಿಲ್ಟರ್ ಪೇಪರ್‌ನಲ್ಲಿ ಮಗುವಿನ ರಕ್ತವನ್ನು ಸಂಗ್ರಹಿಸಬೇಕು. ಈ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಿ ಅಲ್ಲಿ ಪರೀಕ್ಷೆ ನಡೆಸಲಾಗುತ್ತದೆ.
2. ಪೂರ್ಣ ರಕ್ತ ಪರೀಕ್ಷೆ: ಮಗುವಿನ ರಕ್ತವನ್ನು ಸೀಸೆಯಲ್ಲಿ ಸಂಗ್ರಹಿಸಬೇಕು. ಈ ಮಾದರಿಯನ್ನು ಕೆಲವೇ ಗಂಟೆಗಳ ಒಳಗೆ ಪ್ರಯೋಗಾಲಯಕ್ಕೆ ಕಳುಹಿಸಬೇಕು. ಅಲ್ಲಿ ಪರೀಕ್ಷೆ ನಡೆಸಲಾಗುತ್ತದೆ.

**ಡಿಬಿಎಸ್ ಬಳಕೆಯ ಅನುಕೂಲಗಳು**

ಐಸಿಟಿಸಿ ಮಟ್ಟದಲ್ಲಿ ಡಿಬಿಎಸ್ ಮಾದರಿ ಪರೀಕ್ಷೆಗೆ ಆದ್ಯತೆ ನೀಡಲಾಗುತ್ತದೆ. ಹೀಗೆ ಸಂಗ್ರಹಿಸಲಾದ ರಕ್ತವನ್ನು

ವಾರಗಳ ನಂತರವೂ ಪರೀಕ್ಷಿಸಬಹುದು, ಇದನ್ನು ಸಾಗಿಸುವುದು ಸುಲಭ ಮತ್ತು ಶೀತಲೀಕರಣ ವ್ಯವಸ್ಥೆಯ ಅಗತ್ಯ ಇಲ್ಲ ಎಂಬುದು ಈ ಆದ್ಯತೆಗೆ ಕಾರಣ.

### ಆರಂಭಿಕ ಹಂತದಲ್ಲೇ ಶಿಶು ಪರೀಕ್ಷೆಗೆ ನ್ಯಾಕೊ ಯೋಜನೆ

ಆರಂಭಿಕ ಹಂತದಲ್ಲೇ ಶಿಶುಪರೀಕ್ಷೆ ನಡೆಸುವುದಕ್ಕೆ ನ್ಯಾಕೊ ಯೋಜನೆಯೊಂದನ್ನು ಅಭಿವೃದ್ಧಿಪಡಿಸಿದೆ. ಅದರ ವಿವರಗಳು ಹೀಗಿವೆ:

1. ಪಿಸಿಆರ್ ಮತ್ತು ರ್‍ಯಾಪಿಡ್ ಪರೀಕ್ಷೆಗಳ ಜೊತೆಗೆ ಒಣ ರಕ್ತ ಕಲೆ ಅಥವಾ ಪೂರ್ಣ ರಕ್ತ ಪರೀಕ್ಷೆ ನಡೆಸುವುದು.
2. ಆರಂಭದಲ್ಲಿ ಕೆಲವು ಆಯ್ದ ಐಸಿಟಿಸಿಗಳು ಡಿಬಿಎಸ್ ಮಾದರಿ ಸಂಗ್ರಹ ಕೇಂದ್ರಗಳಾಗಿ ಕೆಲಸ ಮಾಡುತ್ತವೆ. ಅಲ್ಲಿಂದ ಅವುಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿ ಡಿಎನ್ಎ ಪಿಸಿಆರ್ ಪರೀಕ್ಷೆ ನಡೆಸಲಾಗುತ್ತದೆ.
3. ಡಿಬಿಎಸ್‌ನಲ್ಲಿ ಪಾಸಿಟಿವ್ ಎಂದು ಕಂಡು ಬಂದ ಮಕ್ಕಳನ್ನು ಎಆರ್‌ಟಿ ಕೇಂದ್ರಕ್ಕೆ ಶಿಫಾರಸು ಮಾಡಲಾಗುತ್ತದೆ. ಅಲ್ಲಿನ ರಾಷ್ಟ್ರೀಯ ಮಾರ್ಗದರ್ಶಿ ಸೂತ್ರಕ್ಕೆ ಅನುಗುಣವಾಗಿ ಹೆಚ್ಚಿನ ಆರೈಕೆ ಒದಗಿಸಲಾಗುತ್ತದೆ.

### ಮಗುವಿನ 18 ತಿಂಗಳಾದಾಗ ಖಚಿತ ಪರೀಕ್ಷೆ ನಡೆಸುವುದು ಕಡ್ಡಾಯ

ಆರಂಭಿಕ ಹಂತದಲ್ಲೇ ಶಿಶುವಿನ ಪರೀಕ್ಷೆ ನಡೆಸುವುದಕ್ಕೆ ಐಸಿಟಿಸಿ ಮತ್ತು ಎಆರ್‌ಟಿ ಕೇಂದ್ರದ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ರಕ್ತದ ಒಣ ಕಲೆ ಮತ್ತು ಪೂರ್ಣ ರಕ್ತ ಪರೀಕ್ಷೆಗಳು ಸೇರಿದಂತೆ ಡಿಎನ್ಎ ಪಿಸಿಆರ್ ಪರೀಕ್ಷೆ ವಿಧಾನಗಳಲ್ಲಿ ಅವರು ತರಬೇತಿ ಪಡೆದಿದ್ದಾರೆ. ಮಾದರಿ ಸಂಗ್ರಹ ಪರಿಕರಗಳು, ಮಾದರಿ ಸಂಗ್ರಹ, ಮಾದರಿ ಸಂಸ್ಕರಣೆ, ಮಾದರಿ ದಾಸ್ತಾನು, ಸಾಗಾಟ, ಪರೀಕ್ಷೆ ಕೇಂದ್ರಗಳು, ಪರೀಕ್ಷೆ ಫಲಿತಾಂಶದ ವ್ಯಾಖ್ಯಾನ, ಪರೀಕ್ಷೆ ಫಲಿತಾಂಶದ ವರದಿ ತಯಾರಿ, ಸಮಯಪಾಲನೆ ಮತ್ತು ದಾಖಲೀಕರಣ ಈ ತರಬೇತಿಯಲ್ಲಿ ಸೇರಿದೆ.

### ಆರಂಭಿಕ ಹಂತದಲ್ಲಿ ಮಕ್ಕಳ ತಪಾಸಣೆ ಬಗೆಗಿನ ಸಾಮಾನ್ಯ ಪ್ರಶ್ನೆಗಳು

**ಪ್ರಶ್ನೆ 1: ಆರಂಭಿಕ ಹಂತದಲ್ಲಿ ಮಕ್ಕಳ ತಪಾಸಣೆ ಎಂದರೇನು?**
ಉತ್ತರ: 18 ತಿಂಗಳ ಒಳಗಿನ ಮಗು ಎಚ್‌ಐವಿ ಸೋಂಕು ಹೊಂದಿದೆಯೇ ಎಂಬುದನ್ನು ಖಚಿತಪಡಿಸುವುದು

**ಪ್ರಶ್ನೆ: ಡಿಎನ್ಎ ಪಿಸಿಆರ್ ಎಂದರೇನು?**
ಉತ್ತರ: ಇದು ಎಚ್‌ಐವಿಯಲ್ಲಿರುವ ಡಿಎನ್‌ಎಯನ್ನು ಗುರುತಿಸುವ ಪರೀಕ್ಷೆ. ಎರಡು ರೀತಿಯ ಮಾದರಿ ಸಂಗ್ರಹದ ಮೂಲಕ ಈ ಪರೀಕ್ಷೆ ನಡೆಸಲಾಗುತ್ತದೆ. ಒಣ ರಕ್ತದ ಮಾದರಿ (ಡಿಬಿಎಸ್) ಮತ್ತು ಪೂರ್ಣ ರಕ್ತ ಪರೀಕ್ಷೆ ಮಾದರಿ ಎಂದು ಇದನ್ನು ಗುರುತಿಸಲಾಗುತ್ತದೆ.

**ಪ್ರಶ್ನೆ 3: ಡಿಎನ್ಎ ಪಿಸಿಆರ್ ಪರೀಕ್ಷೆಗೆ ಅರ್ಹತೆ ಇರುವವರು ಯಾರು?**
ಉತ್ತರ: 6 ವಾರಗಳಿಂದ 18 ತಿಂಗಳ ಒಳಗಿನ ಎಚ್‌ಐವಿ ಸೋಂಕಿಗೆ ತೆರೆದುಕೊಂಡ ಮಕ್ಕಳು

**ಪ್ರಶ್ನೆ 4: ಎಚ್‌ಐವಿ ಸೋಂಕಿಗೆ ತೆರೆದುಕೊಂಡ ಮಕ್ಕಳಿಗೆ ಡಿಎನ್ಎ ಪಿಸಿಆರ್ ಪರೀಕ್ಷೆ ಸೌಲಭ್ಯ ಎಲ್ಲಿ ದೊರೆಯುತ್ತದೆ**
ಉತ್ತರ: **ಮೊದಲ ಪರೀಕ್ಷೆ:** ಆರು ವಾರಗಳಿಂದ 18 ತಿಂಗಳೊಳಗಿನ ಮಕ್ಕಳಿಗೆ ಆಯ್ದ ಐಸಿಟಿಸಿಗಳಲ್ಲಿ ಪರೀಕ್ಷಾ ಸೌಲಭ್ಯ ದೊರೆಯುತ್ತದೆ (ಡಿಬಿಎಸ್ ಮತ್ತು ರ್‍ಯಾಪಿಡ್ ಪರೀಕ್ಷೆ)
**ಎರಡನೇ ಪರೀಕ್ಷೆ:** ಆರು ತಿಂಗಳಿಂದ 18 ತಿಂಗಳ ಮಕ್ಕಳಿಗೆ ಆಯ್ದ ಐಸಿಟಿಸಿಗಳಲ್ಲಿ ಡಿಬಿಎಸ್ ಸೌಲಭ್ಯ ದೊರೆಯುತ್ತದೆ. ಆರು ವಾರಗಳಿಂದ ಆರು ತಿಂಗಳ ವರೆಗಿನ ಮಕ್ಕಳಿಗೆ ಪೂರ್ಣ ರಕ್ತ ಪರೀಕ್ಷೆ ಸೌಲಭ್ಯ ಎಆರ್‌ಟಿ ಕೇಂದ್ರಗಳಲ್ಲಿ ದೊರೆಯುತ್ತದೆ.
ಮೊದಲ ಪರೀಕ್ಷೆ ಫಲಿತಾಂಶ ಪಾಸಿಟಿವ್ ಆಗಿದ್ದರೆ ಅಥವಾ ಮಗುವಿಗೆ ಎದೆ ಹಾಲು ನೀಡಲಾಗುತ್ತಿದ್ದರೆ ಮಾತ್ರ ಎರಡನೇ ಪರೀಕ್ಷೆ ನಡೆಸಲಾಗುತ್ತದೆ. ಎದೆ ಹಾಲು ನೀಡುವುದನ್ನು ನಿಲ್ಲಿಸಿ ಆರು ವಾರಗಳ ನಂತರ ಮತ್ತೊಂದು ಪರೀಕ್ಷೆ ನಡೆಸಬೇಕಾಗುತ್ತದೆ.

**ಪ್ರಶ್ನೆ 5: ಮಕ್ಕಳ ರಕ್ತದ ಮಾದರಿ ಸಂಗ್ರಹಿಸುವವರು ಯಾರು?**
ಉತ್ತರ: ತರಬೇತಿ ಪಡೆದ ನರ್ಸ್ ಅಥವಾ ಪ್ರಯೋಗಾಲಯ ತಂತ್ರಜ್ಞರು

**ಪ್ರಶ್ನೆ 6: ಫಲಿತಾಂಶ ಎಲ್ಲಿ ದೊರೆಯುತ್ತದೆ?**
ಉತ್ತರ: ಮಾದರಿ ಸಂಗ್ರಹ ಕೇಂದ್ರದಲ್ಲಿಯೇ ದೊರೆಯುತ್ತದೆ (ಆಯ್ದ 164 ಐಸಿಟಿಸಿ/ಎಆರ್‌ಟಿ ಕೇಂದ್ರಗಳು)

**ಪ್ರಶ್ನೆ 7: ಪರೀಕ್ಷೆ ಫಲಿತಾಂಶ ಯಾವಾಗ ದೊರೆಯುತ್ತದೆ?**
ಉತ್ತರ: ಕನಿಷ್ಠ ಒಂದು ತಿಂಗಳಲ್ಲಿ

**ಪ್ರಶ್ನೆ 8: ಎದೆ ಹಾಲು ನೀಡುವುದು ಫಲಿತಾಂಶದ ಮೇಲೆ ಪ್ರಭಾವ ಬೀರುತ್ತದೆಯೇ?**
ಉತ್ತರ: ಹೌದು.

## ಹೆತ್ತವರಿಂದ ಮಕ್ಕಳಿಗೆ ಸೋಂಕು ತಡೆ ಸೇವೆ

# ಪಿಪಿಟಿಸಿಟಿ ಮತ್ತಷ್ಟು ಮಾಹಿತಿ

**ಎಚ್‌ಐವಿಯಿಂದ** ಬಾಧಿತರಾದ ಮತ್ತು ಸೋಂಕಿತರಾದ ಮಕ್ಕಳು ಸಾಮಾಜಿಕ ಕಳಂಕ ಮತ್ತು ತಾರತಮ್ಯದ ಸಮಸ್ಯೆಯ ಜೊತೆಗೆ, ಅವರ ಎಚ್‌ಐವಿ ಪಾಸಿಟಿವ್ ಹೆತ್ತವರಲ್ಲಿ ಒಬ್ಬರು ಅಥವಾ ಇಬ್ಬರೂ ಅನಾರೋಗ್ಯ ಪೀಡಿತರಾದಾಗ ಅಥವಾ ಮೃತಪಟ್ಟ ನಂತರ ಅಪಾರವಾದ ಮಾನಸಿಕ ವೇದನೆಯನ್ನೂ ಅನುಭವಿಸಬೇಕಾಗುತ್ತದೆ. ಅನಾರೋಗ್ಯ ಅಥವಾ ಮರಣದ ನಂತರ ಮಕ್ಕಳು ಎದುರಿಸಬೇಕಾಗುವ ಅತ್ಯಂತ ಕಠಿಣವಾದ ಪರಿಸ್ಥಿತಿ ಎಂದರೆ ಮಮತೆಯ ನಷ್ಟ, ಬೆಂಬಲ ಮತ್ತು ರಕ್ಷಣೆ ಇಲ್ಲವಾಗುವುದು. ಇದು ಅವರ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಜೀವನದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಎಚ್‌ಐವಿಯೊಂದಿಗೆ ಜೀವಿಸುತ್ತಿರುವ ಹೆಚ್ಚಿನ ಮಕ್ಕಳಿಗೆ ತಾಯಿಯಿಂದಲೇ ಸೋಂಕು ಬಂದಿರುತ್ತದೆ. ಗರ್ಭಧರಿಸಿರುವ ಅವಧಿ, ಹೆರಿಗೆ ನೋವು ಅಥವಾ ಹೆರಿಗೆಯ ಸಂದರ್ಭದಲ್ಲಿ ಅಥವಾ ಎದೆ ಹಾಲು ಕುಡಿಯುವ ಸಂದರ್ಭದಲ್ಲಿ ಸೋಂಕು ಹರಡಿರುತ್ತದೆ. ಯಾವುದೇ ಬೆಂಬಲ ಇಲ್ಲದ ಸಂದರ್ಭಗಳಲ್ಲಿ, ಎದೆ ಹಾಲು ಕುಡಿಸದಿರುವ ಜನರಲ್ಲಿ ಸೋಂಕು ಹರಡುವ ಅಪಾಯ ಶೇ. 15ರಿಂದ 30ರಷ್ಟು ಹೆಚ್ಚು. ಸೋಂಕು ಹೊಂದಿರುವ ತಾಯಿಯು ಮಗುವಿಗೆ ಎದೆ ಹಾಲು ನೀಡಿದರೆ ಆ ಮೂಲಕ ಸೋಂಕು ಹರಡುವ ಅಪಾಯ ಶೇ. 5ರಿಂದ 20ರಷ್ಟು ಹೆಚ್ಚಾಗುತ್ತದೆ. ಹೀಗೆ ಒಟ್ಟು ಅಪಾಯದ ಪ್ರಮಾಣ ಶೇ. 20ರಿಂದ 40ರಷ್ಟಾಗುತ್ತದೆ. ತಾಯಿಯಿಂದ ಮಗುವಿಗೆ ಸೋಂಕು ಹರಡುವ ಪ್ರಮಾಣವನ್ನು ಸೂಕ್ತ ಮುನ್ನೆಚ್ಚರಿಕೆ ಮೂಲಕ ಶೇ. 2ಕ್ಕೆ ಇಳಿಸಬಹುದು. ಗರ್ಭ ಧರಿಸಿರುವ ಅವಧಿ ಮತ್ತು ಹೆರಿಗೆ ಸಂದರ್ಭದಲ್ಲಿ ಗರ್ಭಿಣಿ ಮಹಿಳೆಯರಿಗೆ ಆ್ಯಂಟಿ ರಿಟ್ರೋವೈರಲ್ ಪ್ರೊಫಿಲಾಕ್ಸಿಸ್ ನೀಡಬೇಕು. ನವಜಾತ ಶಿಶುವಿಗೆ ಒಂದು ವಾರದೊಳಗೆ ಈ ಔಷಧ ನೀಡಬೇಕು. ಅಗತ್ಯ ಬಿದ್ದಲ್ಲಿ ಸಿಸೇರಿಯನ್ ಮೂಲಕ ಮಗುವನ್ನು ಹೊರತೆಗೆಯುವುದು (ಹೆರಿಗೆ ನೋವು ಆರಂಭಕ್ಕೆ ಮತ್ತು ಒಳಪೊರೆಯಲ್ಲಿ ಬಿರುಕು ಉಂಟಾಗುವುದಕ್ಕೆ ಮೊದಲು) ಮುಂತಾದ ಪ್ರಸೂತಿ ನೆರವು ಮತ್ತು ಸಂಪೂರ್ಣವಾಗಿ ಎದೆ ಹಾಲು ನೀಡದೇ ಇರುವುದರಿಂದ ಇದು ಸಾಧ್ಯವಾಗುತ್ತದೆ. ಎಚ್‌ಐವಿ ಮತ್ತು ಏಡ್ಸ್‌ನಿಂದ ಬಾಧಿತರಾದ ಮತ್ತು ಸೋಂಕಿತರಾದ ಮಕ್ಕಳನ್ನು ಇಂತಹ ಪರಿಸ್ಥಿತಿಯಿಂದ ಪಾರುಮಾಡಬೇಕಾದ ಅಗತ್ಯ ಇದೆ. ಈ ಮಕ್ಕಳಿಗೆ ಅಗತ್ಯವಾದ ಆರೈಕೆ ಮತ್ತು ಬೆಂಬಲ ಒದಗಿಸಬೇಕು. ಅವರ ಬಾಲ್ಯದ ಅಗತ್ಯಗಳನ್ನು ಪೋಷಿಸುವ ಅನಿವಾರ್ಯತೆ ಇದೆ. ಆ ಮೂಲಕ ಅವರ ಹಕ್ಕುಗಳ ರಕ್ಷಣೆ ಮಾಡಬೇಕಿದೆ.

### ಪಿಪಿಟಿಸಿಟಿ ಸೇವೆಗಳು

ಭಾರತದಲ್ಲಿ ಪಿಪಿಟಿಸಿಟಿ ಒಂದು ಪ್ರತ್ಯೇಕ ಕಾರ್ಯಕ್ರಮವಾಗಿ ಬೆಳೆದಿಲ್ಲ. ತಾಯಿ ಮತ್ತು ಮಗುವಿನ ಆರೋಗ್ಯ ಅಥವಾ ಸಂತಾನೋತ್ಪತ್ತಿ ಮತ್ತು ಮಗುವಿನ ಆರೋಗ್ಯ ಕಾರ್ಯಕ್ರಮದ ಜೊತೆಯಲ್ಲಿ ಈ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಹೆತ್ತವರಿಂದ ಮಕ್ಕಳಿಗೆ ಸೋಂಕು ಹರಡುವಿಕೆ ತಡೆ ಸೇವೆಯ ಮುಖ್ಯ ಉದ್ದೇಶ ಗರ್ಭಿಣಿ ಮಹಿಳೆಯರು ತಮ್ಮ ಎಚ್‌ಐವಿ ಸ್ಥಿತಿಯನ್ನು ತಿಳಿದುಕೊಂಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವುದೇ ಆಗಿದೆ. ಆರೋಗ್ಯ ಸೇವೆಗಳ ಮೂಲಕ ಅವರು ಎಚ್‌ಐವಿ ಸೋಂಕು ಮಗುವಿಗೆ ಹರಡುವುದನ್ನು ತಡೆಯುವುದು ಸಾಧ್ಯವಾಗುತ್ತದೆ.

ವಿಶ್ವ ಆರೋಗ್ಯ ಸಂಸ್ಥೆ ಶಿಶುಗಳು ಮತ್ತು ಮಕ್ಕಳಿಗೆ ಎಚ್‌ಐವಿ ಸೋಂಕು ಹರಡುವುದನ್ನು ತಡೆಯುವುದಕ್ಕೆ ಕಾರ್ಯತಂತ್ರ ಧೋರಣೆಯನ್ನು ಪ್ರಸ್ತಾಪಿಸಿದೆ. ಅದರಲ್ಲಿ ನಾಲ್ಕು ಅಂಶಗಳಿವೆ:

1. ಎಚ್‌ಐವಿ ಸೋಂಕು ಹಡುವಿಕೆಯನ್ನು ಪ್ರಾಥಮಿಕ ಹಂತದಲ್ಲೇ ತಡೆಯುವುದು.
2. ಎಚ್‌ಐವಿಯೊಂದಿಗೆ ಜೀವಿಸುವ ಮಹಿಳೆಯರ ಅನಪೇಕ್ಷಿತ ಗರ್ಭಧಾರಣೆ ತಡೆಯುವುದು
3. ಎಚ್‌ಐವಿಯೊಂದಿಗೆ ಜೀವಿಸುತ್ತಿರುವ ತಾಯಂದಿರಿಂದ ನವಜಾತ ಶಿಶುಗಳಿಗೆ ಸೋಂಕು ಹರಡುವುದನ್ನು ತಡೆಯುವುದು
4. ಎಚ್‌ಐವಿಯೊಂದಿಗೆ ಜೀವಿಸುತ್ತಿರುವ ತಾಯಿ, ಅವರ ಮಕ್ಕಳು ಮತ್ತು ಕುಟುಂಬಕ್ಕೆ ಆರೈಕೆ, ಚಿಕಿತ್ಸೆ ಮತ್ತು ಬೆಂಬಲ ಒದಗಿಸುವುದು.

ತಾಯಿಯಿಂದ ಮಕ್ಕಳಿಗೆ ಸೋಂಕು ಹರಡುವಿಕೆಯ ಪ್ರಮಾಣ ಶೇ. 20ರಿಂದ 45ರಷ್ಟಿರುತ್ತದೆ.

- ಗರ್ಭಧಾರಣೆಯ ಅವಧಿ – ಶೇ. 5ರಿಂದ 10
- ಹೆರಿಗೆಯ ಸಮಯ – ಶೇ. 10ರಿಂದ 15
- ಎದೆ ಹಾಲು ಕುಡಿಸುವ ಸಂದರ್ಭ – ಶೇ. 5ರಿಂದ 20

ಈ ಕೆಳಗಿನ ಕ್ರಮಗಳ ಮೂಲಕ ಸೋಂಕು ಹರಡುವ ಪ್ರಮಾಣವನ್ನು ಶೇ. 2ಕ್ಕೆ ಇಳಿಸಬಹುದು:

- ಹೆರಿಗೆ ಸಂದರ್ಭದಲ್ಲಿ ಮಹಿಳೆ ಮತ್ತು ಶಿಶುವಿಗೆ ಆ್ಯಂಟಿ ರಿಟ್ರೋವೈರಲ್ ಪ್ರೊಫಿಲಾಕ್ಸಿಸ್ ನೀಡುವುದು
- ಸಿಸೇರಿಯನ್ ಮೂಲಕ ಮಗುವನ್ನು ಹೊರತೆಗೆಯುವಂತಹ (ಹೆರಿಗೆ ನೋವು ಆರಂಭಕ್ಕೆ ಮತ್ತು ಒಳಪೊರೆಯಲ್ಲಿ

ಬಿರುಕು ಉಂಟಾಗುವುದಕ್ಕೆ ಮೊದಲು) ಸೇವೆ ಸೇರಿದಂತೆ ಪ್ರಸೂತಿ ಬೆಂಬಲ ಸೇವೆಗಳನ್ನು ಒದಗಿಸುವುದು

- ಮಗುವಿಗೆ ಎದೆ ಹಾಲು ನೀಡದೇ ಇರುವುದು



**ಪಿಪಿಟಿಸಿಟಿ ಸೌಲಭ್ಯಗಳು**

- ಸ್ವಯಂಪ್ರೇರಿತ ಪರೀಕ್ಷೆ ಮತ್ತು ಆಪ್ತಸಮಾಲೋಚನೆ
- ಸುರಕ್ಷಿತ ಪ್ರಸೂತಿ ಸೌಲಭ್ಯ
- ಎಚ್‌ಐವಿ ಸೋಂಕಿತ ಮಹಿಳೆ ಮತ್ತು ಶಿಶುವಿಗೆ ಎಆರ್‌ವಿ ಪ್ರೊಫಿಲಾಕ್ಸಿಸ್ ನೀಡಿಕೆ
- ಮಗುವಿಗೆ ಸುರಕ್ಷಿತ ಆಹಾರ ನೀಡಿಕೆ ಬಗ್ಗೆ ಆಪ್ತಸಮಾಲೋಚನೆ
- ಆರೈಕೆ ಮತ್ತು ಬೆಂಬಲ ಸೇವೆಯ ಸಂಪರ್ಕ
- ಸಂಗಾತಿ/ ಗಂಡ–ಹೆಂಡತಿಗೆ ಆಪ್ತಸಮಾಲೋಚನೆ ಮತ್ತು ಪರೀಕ್ಷೆ ಸೇರಿದಂತೆ ಅತ್ಯಂತ ಜಾಗರೂಕತೆಯ ಸೋಂಕು ತಡೆ ಅಭ್ಯಾಸಗಳು

**ಎನ್‌ಎಸಿಪಿ 3ರ ಕಾರ್ಯಕ್ರಮಗಳು**

**ಏಕಗವಾಕ್ಷಿ ಸೇವಾ ಲಭ್ಯತೆ:** ಸ್ವಯಂ ಪ್ರೇರಿತ ಆಪ್ತಸಮಾಲೋಚನೆ ಮತ್ತು ಪರೀಕ್ಷಾ ಕೇಂದ್ರ ಒದಗಿಸುವ ಎಲ್ಲ ಸೇವೆಗಳು ಮತ್ತು ಪಿಪಿಟಿಸಿಟಿಯಲ್ಲಿ ಲಭ್ಯಿರುವ ಎಲ್ಲ ಸೇವೆಗಳನ್ನು ಜೊತೆ ಸೇರಿಸಿ ಈ ಎಲ್ಲ ಸೇವೆಗಳು ಒಂದೇ ಕೇಂದ್ರದಲ್ಲಿ ದೊರೆಯುವಂತೆ ವಿನ್ಯಾಸಗೊಳಿಸಲಾಗಿದೆ. ಈ ಕೇಂದ್ರಕ್ಕೆ ಸಮಗ್ರ ಆಪ್ತಸಮಾಲೋಚನೆ ಮತ್ತು ಪರೀಕ್ಷಾ ಕೇಂದ್ರ ಎಂದು ಹೆಸರು ಇಡಲಾಗಿದೆ.

ಪ್ರಸವಕ್ಕೆ ಮೊದಲು ಆಪ್ತಸಮಾಲೋಚನೆ ಪಡೆದುಕೊಂಡು, ಪರೀಕ್ಷೆ ಮಾಡಿಸಿ, ತಮ್ಮ ಎಚ್‌ಐವಿ ಸ್ಥಿತಿ ತಿಳಿದುಕೊಳ್ಳುವ ಪ್ರವೇಶ ದ್ವಾರವಾಗಿ ಐಸಿಟಿಸಿ ಕೆಲಸ ಮಾಡುತ್ತದೆ. ಈ ಕೇಂದ್ರದಲ್ಲಿ ಲಭ್ಯವಿರುವ ಪಿಪಿಟಿಸಿಟಿ ಸೇವೆಗಳೆಂದರೆ, ಪರೀ–ಕ್ಷೆಗೆ ಮೊದಲಿನ ಆಪ್ತಸಮಾಲೋಚನೆ, ಪರೀಕ್ಷೆ, ಪರೀಕ್ಷಾನಂತರದ ಆಪ್ತಸಮಾಲೋಚನೆ, ಸಾಂಸ್ಥಿಕ ಹೆರಿಗೆಗಾಗಿ ಮಾರ್ಗದರ್ಶನ ಮತ್ತು ಆಪ್ತಸಮಾಲೋಚನೆ, ಎಆರ್‌ಟಿ ಕೇಂದ್ರಕ್ಕೆ ಶಿಫಾರಸು, ಹೆರಿಗೆ ಸಂದರ್ಭದಲ್ಲಿ (ಪ್ರಸವ ವೇದನೆಯ ಎರಡನೇ ಹಂತ) ತಾಯಿಗೆ ನೆವಿರೋಪಿನ್ ಮಾತ್ರೆ ಮತ್ತು ನಂತರ ಮಗುವಿಗೆ ಸಿರಪ್ ನೀಡಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ನೆವಿರೋಪಿನ್ ನೀಡಿಕೆ (ಹೆರಿಗೆಯ 72 ತಾಸಿನೊಳಗೆ), ಮಗುವಿಗೆ ಆಹಾರ ಒದಗಿಸುವ ಬಗ್ಗೆ ಸಲಹೆ ನೀಡಿಕೆ, 6 ವಾರ, 6 ತಿಂಗಳು, 12 ತಿಂಗಳು ಮತ್ತು ಮಗುವಿನ ಎಚ್‌ಐವಿ ಸ್ಥಿತಿ ಅಂತಿಮವಾಗಿ ತಿಳಿದು ಬರುವ 18ನೇ ತಿಂಗಳುಗಳಲ್ಲಿ ತಾಯಿ ಮತ್ತು ಮಗು ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂಬುದನ್ನು ತಿಳಿಸುವುದು. ಪ್ರಸವಪೂರ್ವ ಪರೀಕ್ಷೆಯಲ್ಲಿ ಗರ್ಭಿಣಿ ಮಹಿಳೆಗೆ ಎಚ್‌ಐವಿ ಇರುವುದು ದೃಢಪಟ್ಟರೆ, ಸೋಂಕು ತಾಯಿಯಿಂದ ಮಗುವಿಗೆ ಹರಡದಂತೆ ತಡೆಯಲು ಹಲವು ಸೇವೆಗಳನ್ನು ಒದಗಿಸಲಾಗುವುದು. ಹೆತ್ತವರಿಂದ ಮಕ್ಕಳಿಗೆ ಸೋಂಕು ತಡೆ ಸೇವೆಯ ಪ್ರಮುಖ ಉದ್ದೇಶವೇ ಗರ್ಭಿಣಿ ಮಹಿಳೆಯರು ತಮ್ಮ ಎಚ್‌ಐವಿ ಸ್ಥಿತಿಯನ್ನು ತಿಳಿದುಕೊಳ್ಳುವುದು ಮತ್ತು ಜಿಲ್ಲಾ ಆರೋಗ್ಯ ಸೇವೆ ಮೂಲಕ ಮಗುವಿಗೆ ಸೋಂಕು ಹರಡುವುದನ್ನು ತಡೆಯುವುದು.

ಈ ಕಾರಣಗಳಿಗಾಗಿ ಕರ್ನಾಟಕದಲ್ಲಿ ಪಿಪಿಟಿಸಿಟಿ ಸೇವೆಗಳನ್ನು ಎನ್‌ಆರ್‌ಎಚ್‌ಎಂನೊಂದಿಗೆ ಸಂಯೋಜಿಸಲಾಗಿದೆ.

1. ಉತ್ತಮ ಗುಣಮಟ್ಟದ ಪ್ರಸವಪೂರ್ವ, ಪ್ರಸವ ಮತ್ತು ಪ್ರಸವ ನಂತರದ ಸೇವೆಗಳ ಲಭ್ಯತೆ. ಇದರಲ್ಲಿ ಆಪ್ತಸಮಾಲೋಚನೆ ಮತ್ತು ಮಗುವಿಗೆ ಆಹಾರ ನೀಡುವಿಕೆ ಬೆಂಬಲವೂ ಸೇರಿದೆ.
2. ಈಗಿನ ಸ್ಥಿತಿಗೆ ವ್ಯತಿರಿಕ್ತವಾಗಿ ಈಗಾಗಲೇ ಇರುವ ಸೇವೆಗಳನ್ನು ಗರ್ಭಧಾರಣೆಯ ಆರಂಭಿಕ ದಿನಗಳಲ್ಲೇ ಹೆಚ್ಚು ಪರಿಣಾಮಕಾರಿಯಾಗಿ ಬಳಸುವುದು.

**ಕೆಲವು ಸೇವೆಗಳು**

ತಾಯಿ ಭಾಗ್ಯ – ಆಸ್ಪತ್ರೆಯಲ್ಲೇ ಹೆರಿಗೆ ಆಗುವಂತೆ ಪ್ರೋತ್ಸಾಹಿಸುವುದು

ಯಶಸ್ವಿನಿ – ಎಚ್‌ಐವಿ ಪಾಸಿಟಿವ್ ಗರ್ಭಿಣಿಯರಿಗೆ ಸುರಕ್ಷಿತ ಹೆರಿಗೆ ಮತ್ತು ಸೋಂಕು ಹರಡದಂತೆ ಖಾತರಿ.



# ಸೇರ್ಪಡೆ ತರಬೇತಿ

## ಸಂಪರ್ಕ ಕಾರ್ಯಕರ್ತ ಯೋಜನೆ

ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯ (ನ್ಯಾಕೊ) ಬೆಂಬಲದಲ್ಲಿ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ (ಕೆಸಾಪ್ಸ್) ರಾಜ್ಯದ ಎಂಟು ಜಿಲ್ಲೆಗಳಲ್ಲಿ ಸಂಪರ್ಕ ಕಾರ್ಯಕರ್ತ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಎನ್‌ಎಸಿಪಿ–3ರ ಪ್ರಕಾರ ಸಂಪರ್ಕ ಕಾರ್ಯಕರ್ತರ ಕಾರ್ಯನಿರ್ವಹಣಾ ಮಾರ್ಗದರ್ಶಿಯಲ್ಲಿ ಸೂಚಿಸಿದ ಕ್ಷೇತ್ರಕಾರ್ಯ ಕಾರ್ಯತಂತ್ರಕ್ಕೆ ಅನುಗುಣವಾಗಿ ಗ್ರಾಮ ಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ಮುಂದಿನ ಮೂರು ವರ್ಷಗಳಲ್ಲಿ ದುರ್ಬಲ ಮತ್ತು ಉದ್ದೇಶಿತ ಜನರನ್ನು ತಲುಪುವುದು ಇದರ ಉದ್ದೇಶವಾಗಿದೆ. ಆಯ್ದ ಎಂಟು ಜಿಲ್ಲೆಗಳಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಹೊಣೆಯನ್ನು ಬೇರೆ ಬೇರೆ ಎನ್‌ಜಿಒಗಳು ವಹಿಸಿಕೊಂಡಿವೆ. ಸಂಪರ್ಕ ಕಾರ್ಯಕರ್ತ ಯೋಜನೆಗೆ ತಾಂತ್ರಿಕ ನೆರವು ಒದಗಿಸುವುದಕ್ಕೆ ಕೆಎಚ್‌ಪಿಟಿ ಮುಖ್ಯ ಎನ್‌ಜಿಒ (ಲೀಡ್) ಆಗಿದೆ. ಜಿಲ್ಲೆಗಳಲ್ಲಿ ಸಂಪರ್ಕ ಕಾರ್ಯಕರ್ತರ ಯೋಜನೆಯನ್ನು ಅನುಷ್ಠಾನಗೊಳಿಸುವ ಎಲ್ಲ ಎನ್‌ಜಿಒ ಸಿಬ್ಬಂದಿಗೆ ಬಾಗಲಕೋಟೆ ಕಲಿಕಾ ಕೇಂದ್ರದಲ್ಲಿ ತರಬೇತಿ ನೀಡಲಾಯಿತು.

ಅಕ್ಟೋಬರ್ 21ರಿಂದ 27, 2009ರ ವರೆಗೆ ಕ್ರಿಶ್ಚಿಯನ್ ಕೌನ್ಸಿಲ್ ಫಾರ್ ರೂರಲ್ ಡೆವಲಪ್‌ಮೆಂಟ್ ಆ್ಯಂಡ್ ರಿಸರ್ಚ್ (ಸಿಸಿಒಆರ್‌ಆರ್) ಸಿಬ್ಬಂದಿಗೆ ಮೊದಲ ಸೇರ್ಪಡೆ ತರಬೇತಿ ನೀಡಲಾಯಿತು. ಈ ತರಬೇತಿಯಲ್ಲಿ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಯ ಕ್ಷೇತ್ರ ಮೇಲ್ವಿಚಾರಕರು, ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳು ಮತ್ತು ಉಸ್ತುವಾರಿ ಮತ್ತು ಮೌಲ್ಯಮಾಪನ ಅಧಿಕಾರಿಗಳು ಸೇರಿದಂತೆ ಒಟ್ಟು 17 ಸಿಬ್ಬಂದಿ ಭಾಗವಹಿಸಿದ್ದರು. ಏಳು ದಿನಗಳ ತರಬೇತಿ ಅವಧಿಯಲ್ಲಿ ಶಿಬಿರಾರ್ಥಿಗಳಿಗೆ ನ್ಯಾಕೊದ ಪ್ರಸ್ತಾವಿತ ಸಂಪರ್ಕ ಕಾರ್ಯಕರ್ತರ ಕಾರ್ಯನಿರ್ವಹಣೆ ಮಾರ್ಗದರ್ಶಿಯ ಬಗ್ಗೆ ವಿವರ ನೀಡಲಾಯಿತು.

ತರಬೇತಿ ವಿಷಯಗಳು ಈ ಕೆಳಗಿನಂತಿವೆ:

1. ಎಚ್‌ಐವಿ, ಎಸ್‌ಟಿಐ ಮತ್ತು ಕಾಂಡೋಮ್ ಬಳಕೆಯ ಮೂಲಭೂತ ಅಂಶಗಳು
2. ದೇಹ ನಕ್ಷೆ ತಯಾರಿ ಮತ್ತು ಲೈಂಗಿಕತೆ ಭಾಷೆ
3. ಪರಿಸ್ಥಿತಿ ಅಗತ್ಯ ಅಂದಾಜು– ಸಾಮಾಜಿಕ, ವಿಭಾಗ ಮತ್ತು ಉದ್ದೇಶಿತ ನಕ್ಷೆ ಹಾಗೂ ಕ್ಷೇತ್ರಕಾರ್ಯ ಯೋಜನೆ ಮತ್ತು ವೈಯಕ್ತಿಕ ಸೂಕ್ಷ್ಮ ಯೋಜನೆಗೆ ಅದರ ಬಳಕೆ
4. ಉಸ್ತುವಾರಿ ಮತ್ತು ಮೌಲ್ಯಮಾಪನ

ಉಪನ್ಯಾಸ ಮತ್ತು ಗ್ರಾಮಗಳಲ್ಲಿನ ವಾಸ್ತವಿಕ ಪದ್ಧತಿಗಳ ಮೂಲಕ ಯೋಜನೆಯ ಪರಿಕಲ್ಪನೆ ಮತ್ತು ಬಳಕೆಯನ್ನು ಶಿಬಿರಾರ್ಥಿಗಳು ಸ್ಪಷ್ಟಪಡಿಸಿಕೊಳ್ಳುವುದು ಈ ಅಧಿವೇಶನಗಳ ಮುಖ್ಯ ಉದ್ದೇಶ.

ಪ್ರತಿಕ್ರಿಯೆ ಅಧಿವೇಶನದಲ್ಲಿ ಶಿಬಿರಾರ್ಥಿಗಳು ತಮ್ಮ ಅನಿಸಿಕೆ ಹಂಚಿಕೊಂಡರು. ಬಾಗಲಕೋಟೆ ಕಲಿಕಾ ಕೇಂದ್ರದ ತಂಡದ ನೆರವಿನೊಂದಿಗೆ ಹೊಸ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಬಳಸುವ ಅಭ್ಯಾಸ ಮಾಡಲು ಸಾಧ್ಯವಾಯಿತು. ಜಿಲ್ಲಾ ಸಂಪರ್ಕ ಕಾರ್ಯಕರ್ತ ತಂಡಕ್ಕೆ ಈ ವಿಷಯಗಳನ್ನು ವರ್ಗಾಯಿಸಲು ಬಾಗಲಕೋಟೆ ಕಲಿಕಾ ಕೇಂದ್ರವು ಆತ್ಮವಿಶ್ವಾಸ ನೀಡಿತು ಎಂದು ಅವರು ಹೇಳಿದರು. ಈ ತರಬೇತಿಯಿಂದಾಗಿ ಸಂಪರ್ಕ ಕಾರ್ಯಕರ್ತ ಯೋಜನೆಯ ಕರಡು ಕೈಪಿಡಿ ಸಿದ್ಧಪಡಿಸಲಾಯಿತು.

## ಉಡುಪಿ ಎಂಎಸ್‌ಎಂ ಸಮುದಾಯದ

# ಜಿಲ್ಲಾ ಸಮಾವೇಶ

**ಕೆಸಾಪ್ಸ್** ಸಹಭಾಗಿತ್ವದಲ್ಲಿ ಗಾರ್ಡ್ ಸಂಸ್ಥೆ ಉಡುಪಿಯ ಬಾಲಭವನದಲ್ಲಿ ಅಕ್ಟೋಬರ್ 4, 2009ರಂದು ಜಿಲ್ಲಾ ಮಟ್ಟದ ಎಂಎಸ್‌ಎಂ ಸಮಾವೇಶ ನಡೆಸಿತು. ದೀಪಜ್ಯೋತಿ ಜಾಲದ ಸಂಚಾಲಕಿ ಶ್ರೀಮತಿ ವೀಣಾ ಕಾರ್ಯಕ್ರಮ ಉದ್ಘಾಟಿಸಿದರು. ಡಾಪ್ಕು ಅಧಿಕಾರಿ ಡಾ. ಅಶೋಕ್ ಕುಮಾರ್, ಸ್ವ್ಯಾಡ್‌ನ ಶ್ರೀ ಕಿರಣ್ ಬಾಬು ಮತ್ತು ಶ್ರೀಮತಿ ಆಶಾ ಉಪಸ್ಥಿತರಿದ್ದರು. ಈ ಒಂದು ದಿನದ ಕಾರ್ಯಕ್ರಮದಲ್ಲಿ 79 ಎಂಎಸ್‌ಎಂ ಪ್ರತಿನಿಧಿಗಳು ಭಾಗವಹಿಸಿದ್ದರು.

**ಈ ಕಾರ್ಯಕ್ರಮದ ಉದ್ದೇಶಗಳು**

- ತಮ್ಮ ಸಮಸ್ಯೆಗಳು ಮತ್ತು ಅನುಭವವನ್ನು ಹಂಚಿಕೊಳ್ಳುವುದಕ್ಕೆ ಸಮುದಾಯದ ಸದಸ್ಯರಿಗೆ ಜಿಲ್ಲಾ ಮಟ್ಟದಲ್ಲಿ ವೇದಿಕೆಯೊಂದನ್ನು ಒದಗಿಸುವುದು.
- ಉದ್ದೇಶಿತ ಕಾರ್ಯಕ್ರಮಗಳ ಜೊತೆ ಇನ್ನೂ ಸಂಪರ್ಕ ಹೊಂದಿಲ್ಲದ ಸಮುದಾಯದ ಸದಸ್ಯರನ್ನು ಜೊತೆ ಸೇರಿಸುವುದು ಮತ್ತು ಯೋಜನೆಯೊಂದಿಗೆ ಸಂಪರ್ಕ ಸಾಧಿಸುವುದು.
- ಸಮುದಾಯ, ಸೇವೆ ಮತ್ತು ಸೇವೆ ಒದಗಿಸುವವರ ನಡುವಿನ ಅಂತರವನ್ನು ಕಡಿಮೆಗೊಳಿಸುವುದು.

ಸಮಾವೇಶದ ಉದ್ಘಾಟನೆ ನಂತರ ಭಾಗವಹಿಸಿದ್ದ ಎಂಎಸ್‌ಎಂ ಸದಸ್ಯರನ್ನು ಮೂರು ಗುಂಪುಗಳಾಗಿ ವಿಭಜಿಸಿ ಈ ಕೆಳಗಿನ ವಿಷಯಗಳ ಬಗ್ಗೆ ಚರ್ಚಿಸಲು ಹೇಳಲಾಯಿತು.

- ಬಿಕ್ಕಟ್ಟು ನಿರ್ವಹಣೆ
- ಎಸ್‌ಟಿಐ ಕ್ಲಿನಿಕ್
- ಐಸಿಟಿಸಿ ಮತ್ತು ಆರ್‌ಟಿಐ ಶಿಫಾರಸುಗಳು

ಪ್ರತಿಯೊಂದು ಗುಂಪೂ ಚರ್ಚೆ ನಡೆಸಿ ವಿಷಯದ ಬಗೆಗಿನ ನಿಲುವುಗಳನ್ನು ದೊಡ್ಡ ಗುಂಪಿನಲ್ಲಿ ಮಂಡಿಸಿತು. ಪ್ರತಿಯೊಂದು ವಿಷಯ ಮಂಡನೆಯ ನಂತರವೂ ಇತರರಿಗೆ ಪ್ರಶ್ನೆ ಕೇಳುವುದಕ್ಕೆ ಮತ್ತು ಅನುಮಾನಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಇತ್ತು. ವೇದಿಕೆಯಲ್ಲಿದ್ದ ಸದಸ್ಯರು ಈ ಪ್ರಶ್ನೆಗಳಿಗೆ ಉತ್ತರಿಸಿದರು.

**ಸಮುದಾಯದ ಧ್ವನಿ**

- "ಎಚ್‌ಐವಿ ಸೋಂಕು ಪ್ರಮಾಣ ಕಡಿಮೆಯಾಗಿದ್ದರೂ ಸೋಂಕು ಹರಡುವುದನ್ನು ಸಂಪೂರ್ಣವಾಗಿ ನಿಯಂತ್ರಿಸಲು ಇನ್ನಷ್ಟು ಕೆಲಸ ಮತ್ತು ಪ್ರಯತ್ನದ ಅಗತ್ಯವಿದೆ"
- "ಆರಂಭದಲ್ಲಿ ಎಚ್‌ಐವಿ ಬಗ್ಗೆ ಮಾತನಾಡುವಾಗ ಮುಜುಗರ ಮತ್ತು ಹಿಂಸೆ ಅನಿಸುತ್ತಿತ್ತು. ಆದರೆ ಈಗ ಅಂತಹ ಯಾವುದೇ ಸಮಸ್ಯೆ ಇಲ್ಲ. ನಮ್ಮಲ್ಲಿ ಆತ್ಮವಿಶ್ವಾಸ ಇದೆ"
- "ಆರಂಭದಲ್ಲಿ ನನಗೆ ಹೆದರಿಕೆ ಇತ್ತು. ಆದರೆ ಈಗ ನನ್ನಂತಹ ಬಹಳ ಜನ ಇದ್ದಾರೆ ಎಂಬುದು ತಿಳಿದಿದೆ"

# ನಿರಂತರ

## ಜಿಲ್ಲಾ ಎಚ್‌ಐವಿ/ಏಡ್ಸ್ ನಿಯಂತ್ರಣ ಮತ್ತು ಬೆಂಬಲ ಉಪಕ್ರಮ

**ನಿರಂತರದ** ಆಶ್ರಯದಲ್ಲಿ ದಾವಣಗೆರೆಯ ಜೆಜೆಎಂಎಂಸಿ ಆವರಣದಲ್ಲಿ ಮಕ್ಕಳ ಕಾರ್ಯಕ್ರಮವೊಂದು ನಡೆಯಿತು. ಸೆಪ್ಟೆಂಬರ್ 11, 2009ರಂದು ನಡೆದ ಎನ್‌ಜಿಒ ಸಮನ್ವಯ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿತ್ತು. ಪೊಲೀಸ್ ಇಲಾಖೆಯಿಂದ ಸಂಗ್ರಹಿಸಲಾದ ಅಕ್ಕಿಯನ್ನು ವಿತರಿಸುವುದು ಮತ್ತು ಮಕ್ಕಳ ಆರೋಗ್ಯ ತಪಾಸಣೆ ನಡೆಸುವುದು ಕಾರ್ಯಕ್ರಮದ ಉದ್ದೇಶವಾಗಿತ್ತು.

ನಿರಂತರ ಸಮಿತಿಯು ಕಾರ್ಯಕ್ರಮವನ್ನು ಸಂಯೋಜಿಸಿತ್ತು. ಎಲ್ಲ ಎನ್‌ಜಿಒಗಳ ಪ್ರತಿನಿಧಿಗಳು, ಒವಿಸಿ ಮಕ್ಕಳು ಮತ್ತು ಅವರ ಹೆತ್ತವರು, ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. 18 ಮಕ್ಕಳು ಆರೋಗ್ಯ ತಪಾಸಣೆ ಮಾಡಿಕೊಂಡು ಸೇವೆ ಪಡೆದುಕೊಂಡರು. ಡಾ. ಗಿರೀಶ್ ಮಕ್ಕಳ ಆರೋಗ್ಯ ತಪಾಸಣೆ ನಡೆಸಿದರು. ಡಿವೈಎಸ್‌ಪಿ ಶ್ರೀ ಚಂದ್ರಪ್ಪ ಕಾರ್ಯಕ್ರಮ ಉದ್ಘಾಟಿಸಿದರು.

ತರಬೇತಿಗೆ ಮೊದಲು (ಡಾಪ್ಕು ಪಾಲುದಾರರ ತರಬೇತಿ) ಎಚ್‌ಐವಿ ಮತ್ತು ಏಡ್ಸ್ ಹಾಗೂ ಅದರ ತಾಂತ್ರಿಕ ಅಂಶಗಳ ಬಗ್ಗೆ ನನಗೇನೂ ಗೊತ್ತಿರಲಿಲ್ಲ. ಜೊತೆಗೆ ಹಲವು ತಪ್ಪು ಕಲ್ಪನೆಗಳೂ ಇದ್ದವು. ತರಬೇತಿಯು ಎಚ್‌ಐವಿ ಮತ್ತು ಏಡ್ಸ್ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಳ್ಳಲು ಸಹಕಾರಿಯಾಯಿತು ಎಂದು ಶ್ರೀ ಚಂದ್ರಪ್ಪ ಉದ್ಘಾಟನಾ ಭಾಷಣದಲ್ಲಿ ಹೇಳಿದರು. ಪಾಸಿಟಿವ್ ಜನರೊಂದಿಗಿನ ಸಂವಹನದಲ್ಲಿ ಅವರ ಜೀವನದ ಪರಿಸ್ಥಿತಿಯ ಅರಿವಾಯಿತು. ಅವರು, ಮತ್ತು ವಿಶೇಷವಾಗಿ ಅವರ ಮಕ್ಕಳಿಗೆ ಏನಾದರೂ ಸಹಕಾರ ಒದಗಿಸಬೇಕು ಎಂದು ನಾವು ನಿರ್ಧರಿಸಿದೆವು. ಸಮುದಾಯದ ಸೇವೆಗೆ ನಾವು ಸದಾ ಸಿದ್ಧರಿದ್ದೇವೆ. ಯಾವುದೇ ಬೆಂಬಲ ಬೇಕಿದ್ದರೂ ನಮ್ಮನ್ನು ಮುಕ್ತವಾಗಿ ಸಂಪರ್ಕಿಸಿ ಎಂದು ಅವರು ಹೇಳಿದರು.

ಸಮುದಾಯದ ಬಗ್ಗೆ ಪೊಲೀಸ್ ಇಲಾಖೆ ಹೊಂದಿರುವ ಕಾಳಜಿಯನ್ನು ಡಾ. ವಿಜಯಕುಮಾರ್ ಶ್ಲಾಘಿಸಿದರು. ಆರು ತಿಂಗಳ ಅವಧಿಗೆ 15 ಮಕ್ಕಳಿಗೆ ಕಾಲೇಜು ಪೌಷ್ಠಿಕ ಆಹಾರ ಒದಗಿಸಲಿದೆ ಎಂದು ಅವರು ಘೋಷಿಸಿದರು.

ದಾವಣಗೆರೆ ಜಿಲ್ಲೆಯಲ್ಲಿ ಎಚ್‌ಐವಿ ಮತ್ತು ಏಡ್ಸ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಎನ್‌ಜಿಒಗಳ ಪ್ರತಿನಿಧಿಗಳನ್ನು ಒಳಗೊಂಡಿರುವ ಸಮಿತಿ ನಿರಂತರ. ಆಗಸ್ಟ್ 18, 2009ರಂದು ನಡೆದ ಎನ್‌ಜಿಒಗಳ ಸಭೆಯಲ್ಲಿ ಎಲ್ಲ ಎನ್‌ಜಿಒಗಳ ಜೊತೆ ಸಮಾಲೋಚನೆ ನಡೆಸಿ ಈ ಸಮಿತಿ ರಚಿಸಲಾಗಿದೆ.

# ಆ್ಯಕ್ಷನ್ ಏಡ್

## ಹೆಜ್ಜೆಗಲ್ಲುಗಳು ತರಬೇತಿ

**ಸಮುದಾಯ** ಮತ್ತು ಸಾಂಸ್ಥಿಕ ಬೆಳವಣಿಗೆ ಬಗೆಗಿನ ಕೆಲಸಗಳು ಸುಗಮವಾಗಿ ನಡೆದು-ಕೊಂಡು ಹೋಗುವುದಕ್ಕೆ ಬೇಕಾದ ಕೆಲಸಗಳನ್ನು ಮಾಡುವುದರ ಜೊತೆಗೆ ಲೈಂಗಿಕತೆ, ಸಂವಹನ ಮತ್ತು ಎಚ್‌ಐವಿ ಹಾಗೂ ಏಡ್ಸ್ ಬಗ್ಗೆ ಸಮುದಾಯದ ಸದಸ್ಯರ ಕೌಶಲ ಮತ್ತು ಗ್ರಹಿಕೆಯನ್ನು ಸುಧಾರಿಸುವ ಪ್ರಯತ್ನವೂ ನಡೆ-ಯುತ್ತಿದೆ.

ಇದನ್ನು ಗಮನದಲ್ಲಿ ಇರಿಸಿಕೊಂಡು ಶಿವಮೊಗ್ಗದ ಅಭಯ ಆ್ಯಕ್ಷನ್ ಏಡ್ ಸಮುದಾಯದ ಸದಸ್ಯರ ಜೊತೆ ಸಹಭಾಗಿತ್ವದಲ್ಲಿ ಹೆಜ್ಜೆಗಲ್ಲುಗಳು ತರಬೇತಿಯನ್ನು ಆರಂಭಿಸಿದೆ. ಯೋಜನೆಯ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿಯೂ ಈ ತರಬೇತಿ ನಡೆ-ಯುತ್ತಿದೆ.

ಸಮುದಾಯದ ಜೊತೆಗೆ ಸಮಾಲೋಚನೆ ನಂತರ, ಅವರ ಅನುಕೂಲವನ್ನು ನೋಡಿ-ಕೊಂಡು ಪ್ರತಿ ತಿಂಗಳೂ ಮೂರರಿಂದ ನಾಲ್ಕು ಗಂಟೆ ಅವಧಿಯ ತರಬೇತಿ ನಡೆಸಲು ಉದ್ದೇಶಿಸಲಾಗಿದೆ. ಒಟ್ಟು ಆರು ತಿಂಗಳ ಕಾಲ ಈ ತರಬೇತಿ ನಡೆಯಲಿದೆ. ಈ ಪ್ರಕಾರ ಮೇ 2009ರಿಂದ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿಯೂ ತರಬೇತಿ ಆರಂಭಗೊಂಡಿದೆ.

ಸಾಮೂಹಿಕ ನಾಯಕತ್ವದ ಮೂಲಕ ಸಮುದಾಯ ಸಂಘಟಿತವಾಗಿ ಸಬಲಗೊಂಡಿರುವ ಹಿನ್ನೆಲೆಯಲ್ಲಿ ಹೆಜ್ಜೆಗಲ್ಲುಗಳು ತರಬೇತಿಯ ಉದ್ದೇಶಗಳು ಮತ್ತು ಆದರ್ಶಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುವಂತೆ ತರಬೇತಿ ಅಧಿವೇಶನಗಳನ್ನು ಸಂಘಟಿಸಲಾಗಿದೆ. ಸಂಘಟನೆಯಾಗಿ ಆ್ಯಕ್ಷನ್ ಏಡ್ಸ್ ತತ್ವಗಳೂ ಇದರಲ್ಲಿ ಸೇರಿದೆ.

ಸಮುದಾಯದ ಮಹಿಳೆಯರ ವರ್ತನೆಯಲ್ಲಿ ಬದಲಾವಣೆ ಉಂಟು ಮಾಡುವ ಉದ್ದೇಶದಿಂದ ಅಭಯ ಆ್ಯಕ್ಷನ್ ಏಡ್ ಸಿಬ್ಬಂದಿ ಸತತ ಪ್ರಯತ್ನ ನಡೆಸುತ್ತಿದ್ದಾರೆ. ಈ ತರಬೇತಿಯಲ್ಲಿ ಮುಕ್ತವಾಗಿ ಭಾಗವಹಿಸುವಂತೆ ಮಹಿಳೆಯರಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ.





# ಎಪಿಎಸಿ ಕಲಿಕಾ ಪ್ರವಾಸ

**ಕೆಎಚ್‌ಪಿಟಿಯ** ಹದಿನೈದು ಸದಸ್ಯರ ತಂಡವೊಂದು ಎಪಿಎಸಿಯ ಸಂಪರ್ಕ ಕಾರ್ಯಕರ್ತ ಯೋಜನೆ ಬಗ್ಗೆ ತಿಳಿದುಕೊಳ್ಳಲು ಆಗಸ್ಟ್ 2009ರಲ್ಲಿ ಅಲ್ಲಿಗೆ ಕಲಿಕಾ ಭೇಟಿ ನೀಡಿತು. ಚೆನ್ನೈ, ಸೇಲಂ ಮತ್ತು ತಿರುಚ್ಚಿ ಈ ಭೇಟಿಯಲ್ಲಿ ಒಳಗೊಂಡಿತ್ತು. ಕೇವಲ ಎಂಟೇ ತಿಂಗಳ ಅವಧಿಯಲ್ಲಿ ಎಷ್ಟೊಂದನ್ನು ಸಾಧಿಸಲಾಗಿದೆ ಎಂಬುದು ತಂಡದ ಅಚ್ಚರಿಗೆ ಕಾರಣವಾಯಿತು. ಸಮುದಾಯದ ಜೊತೆ ಎಪಿಎಸಿ ಹೊಂದಿರುವ ಬಾಂಧವ್ಯ ಮತ್ತು ಸಮುದಾಯ ಅದರಲ್ಲೂ ವಿಶೇಷವಾಗಿ ಮಹಿಳೆಯರ ಪಾಲ್ಗೊಳ್ಳುವಿಕೆ ಶ್ಲಾಘನೀಯವೇ ಸರಿ. ಕಲಿಕಾರ್ಥಿಗಳು ಮತ್ತು ಮಾಹಿತಿ ನೀಡುವವರ ನಡುವಿನ ನಿರಂತರ ಸಂವಹನದ ಮೂಲಕವೇ ಇಡೀ ಭೇಟಿ ನಡೆಯಿತು.

ಎಚ್‌ಐವಿ/ಏಡ್ಸ್ ಕ್ಷೇತ್ರದ ವಿವಿಧ ವಿಷಯಗಳ ಬಗ್ಗೆ ತಂಡವು ಹಲವು ಹೊಸ ಒಳನೋಟಗಳನ್ನು ಪಡೆದುಕೊಂಡಿತು. ಎಚ್‌ಐವಿ ಮತ್ತು ಏಡ್ಸ್ ಕಾರ್ಯಕ್ರಮ ಅನುಷ್ಠಾನದಲ್ಲಿ ಎಪಿಎಸಿಯ ಅನುಭವ, ಸ್ವಯಂಸೇವೆ ಆಧರಿತ ಸಹವರ್ತಿ ಶಿಕ್ಷಣ ಮಾದರಿ, ಪರಿಣಾಮಕಾರಿ ಪಿಪಿಟಿಸಿಟಿ ಕಾರ್ಯಕ್ರಮದ ಕಾರ್ಯತಂತ್ರಗಳು, ಮಹಿಳೆ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದಕ್ಕಾಗಿ ಅಡ್ವೊಕಸಿ ಬಳಕೆ, ಯೋಜನೆಯ ಆರಂಭಿಕ ಹಂತದಲ್ಲಿಯೇ ಎಚ್‌ಐವಿ ಮತ್ತು ಏಡ್ಸ್‌ನೊಂದಿಗೆ ಜೀವಿಸುತ್ತಿರುವವರಿಗೆ ಆರೈಕೆ ಮತ್ತು ಬೆಂಬಲ ಒದಗಿಸಬೇಕಾದುದರ ಮಹತ್ವ, ಕಾರ್ಯಕ್ರಮಗಳ ಉತ್ತಮ ಅನುಷ್ಠಾನಕ್ಕಾಗಿ ಮಾಹಿತಿ ನಿರ್ವಹಣೆ ಮತ್ತು ಜಿಲ್ಲಾ ಸಂಪನ್ಮೂಲ ವ್ಯಕ್ತಿಯ ನೇಮಕ ಇತ್ಯಾದಿ ವಿಷಯಗಳ ಬಗ್ಗೆ ತಂಡವು ಹೊಸ ವಿಷಯಗಳನ್ನು ತಿಳಿದುಕೊಂಡಿತು.

ತಮಿಳು ನಾಡು ಮತ್ತು ಕರ್ನಾಟಕದ ಕ್ಷೇತ್ರ ವಾಸ್ತವದ ಬಗ್ಗೆ ಭಿನ್ನತೆಗಳಿದ್ದರೂ ಕೆಲವು ಅಂಶಗಳನ್ನು ಕರ್ನಾಟಕದಲ್ಲಿಯೂ ಅನುಷ್ಠಾನಗೊಳಿಸಬಹುದು ಎಂದು ಕೆಎಚ್‌ಪಿಟಿ ತಂಡ ಭಾವಿಸಿದೆ. ಎಂಎಆರ್‌ಪಿಗಾಗಿ ಬಿಎಸ್‌ಎಸ್ ನಡೆಸುವುದು, ಸ್ವಸಹಾಯ ಗುಂಪುಗಳನ್ನು ರಚಿಸುವ ಮೂಲಕ ಜನರು ಹೆಚ್ಚಿನ ಪ್ರಮಾಣದಲ್ಲಿ ಯೋಜನೆಯಲ್ಲಿ ಭಾಗವಹಿಸುವಂತೆ ಮಾಡುವುದು, ಗ್ರಾಮ ಮಟ್ಟದ ಆರೋಗ್ಯ ಸ್ವಯಂ ಸೇವಕರನ್ನು ಗುರುತಿಸುವುದು ಮತ್ತು ಪಿಪಿಟಿಸಿಟಿ ಕಾರ್ಯಕ್ರಮದ ಯಶಸ್ಸನ್ನು ಅನುಕರಿಸುವುದು ಇತ್ಯಾದಿ ಇಂತಹ ಕೆಲವು ಚಟುವಟಿಕೆಗಳಾಗಿವೆ.

ಕರ್ನಾಟಕದ ಎಚ್‌ಐವಿ/ಏಡ್ಸ್ ಕ್ಷೇತ್ರದಲ್ಲಿ ಹೊಂದಿರುವ ಅಪಾರ ಅನುಭವದ ಹಿನ್ನೆಲೆಯಲ್ಲಿ ತಂಡವು ಕೆಲವು ವಿಷಯಗಳನ್ನು, ಅದರಲ್ಲೂ ವಿಶೇಷವಾಗಿ ಸಂಪರ್ಕ ಕಾರ್ಯಕರ್ತರ ಯೋಜನೆಯ ಅನುಭವಗಳನ್ನು ಎಪಿಎಸಿಯ ಜೊತೆಗೂ ಹಂಚಿಕೊಂಡಿತು. ಎನ್‌ಆರ್‌ಎಚ್‌ಎಂಗಾಗಿ ಒದಗಿಸಲಾದ ಮೂಲಸೌಕರ್ಯವನ್ನು ಗರಿಷ್ಠ ಬಳಕೆ ಮಾಡಿಕೊಳ್ಳುವುದು, ನಿಯತವಾಗಿ ತಂಡದ ಸಾಮರ್ಥ್ಯ ವೃದ್ಧಿ ನಡೆಸುವುದು, ಹೆಚ್ಚು ಪರಿಣಾಮಕಾರಿ ಕ್ಷೇತ್ರಕಾರ್ಯಕ್ಕಾಗಿ ಸಂಪರ್ಕ ಕಾರ್ಯಕರ್ತ ತಂಡದಲ್ಲಿ ಒಬ್ಬರು ಮಹಿಳೆ ಮತ್ತು ಒಬ್ಬರು ಪುರುಷರನ್ನು ಸೇರಿಸುವುದು, ಕ್ಷೇತ್ರ ಮಟ್ಟದಲ್ಲಿ ಪುರಾವೆ ಆಧರಿತ ಎಂಐಎಸ್ ವ್ಯವಸ್ಥೆ ಅನುಸರಿಸುವುದು, ಕಂಪ್ಯೂಟರೀಕೃತ ಎಂಐಎಸ್ ವ್ಯವಸ್ಥೆ ಬಳಸುವುದು ಮತ್ತು ವರದಿ ತಯಾರಿ ಅಗತ್ಯಗಳಿಗಾಗಿ ಎಂಎಸ್–ಎಕ್ಸೆಲ್ ಬಳಕೆ ಇದರಲ್ಲಿ ಸೇರಿದೆ.

ಒಟ್ಟಿನಲ್ಲಿ, ಎಪಿಎಸಿ ಭೇಟಿ ಮತ್ತು ಎರಡು ತಂಡಗಳ ನಡುವಿನ ಸಂವಹನ ಎರಡೂ ಕಡೆಗೂ ಅಪಾರ ಪ್ರಯೋಜನ ಉಂಟು ಮಾಡಿದೆ. ಇದೊಂದು ಎರಡು ರಾಜ್ಯಗಳ ನಡುವಿನ ಕಲಿಕೆಯ ವೇದಿಕೆಯೂ ಆಯಿತು.



# ಸೋಲಾಪುರದಲ್ಲಿ ಮೇಳವ

**ನಿರಮಯ** ಆರೋಗ್ಯ ಧಾಮ ಮತ್ತು ಕಾರಿಡಾರ್ಸ್ ಯೋಜನೆ ಜಂಟಿಯಾಗಿ ಸೆಪ್ಟೆಂಬರ್ 30, 2009ರಂದು ಮಹಿಳಾ ಮೇಳವವನ್ನು ಸಂಘಟಿಸಿತು. ಸಂಘಟನೆ ಪ್ರಕ್ರಿಯೆಯನ್ನು ಬಲಪಡಿಸುವುದು ಮತ್ತು ಸದಸ್ಯತ್ವ ಹೆಚ್ಚಿಸುವಂತೆ ಸಹವರ್ತಿ ಶಿಕ್ಷಕರಿಗೆ ಸ್ಫೂರ್ತಿ ನೀಡುವುದು ಇದರ ಉದ್ದೇಶವಾಗಿತ್ತು. ಅಸಂಘಟಿತ ಕಾರ್ಮಿಕರ ಸಂಘಟನೆಯ ಅಧ್ಯಕ್ಷೆ ಶ್ರೀಮತಿ ಸರಿತ ಮೊಕಾಶಿ ಅತಿಥಿಯಾಗಿ ಭಾಗವಹಿಸಿದ್ದರು.

ಅತಿಥಿಗಳನ್ನು ಸ್ವಾಗತಿಸಿದ ನಂತರ ಸೀಮಾ ಕಣಿಕರ್ ನಿರಮಯ ಆರೋಗ್ಯ ಧಾಮ ಮತ್ತು ಕಾರಿಡಾರ್ಸ್ ಯೋಜನೆಯ ಉದ್ದೇಶಗಳನ್ನು, ಅದು ಹೇಗೆ ಸೋಲಾಪುರ, ತೆಂಬುರ್ನಿ ಮತ್ತ ಬರ್ಶಿಗಳಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ವಿವರಿಸಿದರು. ಸಂಘದ ಮೂಲಕ ದೊಡ್ಡ ಸಮಸ್ಯೆಗಳನ್ನು ಹೇಗೆ ಸುಲಭವಾಗಿ ಪರಿಹರಿಸಬಹುದು ಎಂಬುದನ್ನು ನಿಜ ಜೀವನದ ಉದಾಹರಣೆಗಳ ಮೂಲಕ ಸರಿತ ಮೊಕಾಶಿ ವಿವರಿಸಿದರು. ಸದಸ್ಯತ್ವ ಹೆಚ್ಚಳ ಹೇಗೆ ಮಾಡಬಹುದು ಎಂಬ ಬಗ್ಗೆಯೂ ಅವರು ಸಲಹೆ ನೀಡಿದರು. ನಿರಂತರ ಅನುಸರಣೆ ಬಗ್ಗೆಯೂ ಅವರು ಮಾತನಾಡಿದರು.

ಕ್ರಾಂತಿ ಮಹಿಳಾ ಸಂಘದ ಸದಸ್ಯತ್ವದ ಸ್ಥಾನಮಾನದ ಬಗ್ಗೆ ಕಶಿಬಾಯಿ ಜಾಧವ್ ಮಾತನಾಡಿದರು. ಇನ್ನೂ ಹೆಚ್ಚಿನ ಸಂಖ್ಯೆಯ ಮಹಿಳೆಯರನ್ನು ತಲುಪುವುದಕ್ಕಾಗಿ ಮತ್ತು ಕ್ರಾಂತಿ ಮಹಿಳಾ ಸಂಘವನ್ನು ಬಲಪಡಿಸುವುದಕ್ಕಾಗಿ ಸೋಲಾಪುರ ಜಿಲ್ಲೆಯ ಇತರ ತಾಲೂಕುಗಳಲ್ಲಿಯೂ ಕೆಲಸ ಮಾಡಲು ಕಾರ್ಯಕಾರಿ ಸಮಿತಿ ಸದಸ್ಯರು ನಿರ್ಧರಿಸಿದ್ದಾರೆ ಎಂದು ಅವರು ಹೇಳಿದರು.

ಕ್ರಾಂತಿ ಮಹಿಳಾ ಸಂಘವು ವಾರ್ಷಿಕ ಲೆಕ್ಕ ಪರಿಶೋಧನೆಯನ್ನು ಪೂರ್ತಿಗೊಳಿಸಿದ್ದು ಪಾನ್ ಕಾರ್ಡ್ ಪಡೆದಿದೆ. ಜೊತೆಗೆ 12–ಎ ಪ್ರಮಾಣಪತ್ರವೂ ದೊರಕಿದೆ. ಎಫ್‌ಸಿಆರ್‌ಎಗೆ ಅರ್ಜಿ ಹಾಕುವುದು ಮುಂದಿನ ಹೆಜ್ಜೆ. ಮಹಾನಂದ ಅವರ ಜನಪದ ನೃತ್ಯ ಈ ಮೇಳವದ ಪ್ರಮುಖ ಆಕರ್ಷಣೆಯಾಗಿತ್ತು. ಪ್ರತಿಯೊಬ್ಬರೂ ಮೇಳವವನ್ನು ಆನಂದಿಸಿದರು.

ಇದಕ್ಕೂ ಒಂದು ದಿನ ಮೊದಲು ಎಂಎಸ್‌ಎಂಗಳಿಗಾಗಿ ದೋಸ್ತಾನಾ ಸಂಘ ಮೇಳವವನ್ನು ಆಯೋಜಿಸಿತ್ತು. ದೋಸ್ತಾನಾದ ಎಲ್ಲ ಸದಸ್ಯರನ್ನು ಒಂದೆಡೆ ಸೇರಿಸುವುದು, ದೋಸ್ತಾನಾ ಸಂಘದ ಪ್ರಗತಿಗೆ ಅವರ ನೆರವು ಪಡೆಯುವುದು, ಅವರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಇದರ ಉದ್ದೇಶವಾಗಿತ್ತು. ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು. ಅತಿಥಿಗಳಲ್ಲದೆ ಹಾಜರಿದ್ದ ಇತರರನ್ನೂ ದೀಪ ಬೆಳಗಿಸಲು ಆಹ್ವಾನಿಸಿದ್ದು ವಿಶೇಷವಾಗಿತ್ತು.

ಶಿವಾಜಿ ಶಿಂಧೆ (ಆಪ್ತಸಮಾಲೋಚಕರು) ನೆರವಿನೊಂದಿಗೆ ಸದಾಶಿವ ಶಿಂಧೆ (ದೋಸ್ತಾನಾದ ಕಾರ್ಯದರ್ಶಿ) ಕಾರ್ಯಕ್ರಮವನ್ನು ಯೋಜಿಸಿದ್ದರು. ಜಂಟಿ ಕಾರ್ಯದರ್ಶಿ ಆಸಿಫ್ ಶೇಖ್ ಕಾರ್ಯಕ್ರಮ ನಿರೂಪಿಸಿದರು. ಸಹವರ್ತಿ ಪ್ರೇರಕರು ಅತಿಥಿಗಳನ್ನು ಸ್ವಾಗತಿಸುವುದು, ಆಹಾರದ ವ್ಯವಸ್ಥೆ ಮಾಡುವುದು ಮುಂತಾದ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಡಾ. ಶಿರೀಶ್ ಕುತಥೇಕರ್ ಎಂ ಎಸ್ (ಕ್ಯಾನ್ಸರ್ ತಜ್ಞರು) ಮತ್ತು ವಾಲ್‌ಚಂದ್ ಕಾಲೇಜಿನ ಪ್ರೊ.

ಅಪರ್ಣಾ ಕಾಂಬ್ಳೆ ಅವರು ವಿಶೇಷ ಆಹ್ವಾನಿತರಾಗಿದ್ದರು. ಶ್ರೀ ಸಿದ್ಧಾರೂಢ ಮತ್ತು ಶ್ರೀ ಕಲ್ಯಾಣ್ ಜೋಡಾವೆ ಅವರನ್ನೂ ದೋಸ್ತಾನ ಸಂಘ ಆಹ್ವಾನಿಸಿತ್ತು. ಮೇಳವದಲ್ಲಿ ಒಟ್ಟು 130 ಎಂಎಸ್‌ಎಂಗಳು ಭಾಗವಹಿಸಿದ್ದರು.

ಡಾ. ಶಿರೀಶ್ ಕುತಥೇಕರ್ ಆರೋಗ್ಯದ ಮಹತ್ವವನ್ನು ತಮ್ಮ ಭಾಷಣದಲ್ಲಿ ವಿವರಿಸಿದರು. ಎಂಎಸ್‌ಎಂಗಳು ಎಸ್‌ಟಿಐಗೆ ತುತ್ತಾಗುವ ಅಪಾಯ ಲೈಂಗಿಕ ವೃತ್ತಿಪರ ಮಹಿಳೆಯರಿಗಿಂತ ಹತ್ತುಪಟ್ಟು ಹೆಚ್ಚು. ಆದುದರಿಂದ ಹೆಚ್ಚಿನ ಮುನ್ನೆಚ್ಚರಿಕೆ ಅಗತ್ಯ ಎಂದು ಅವರು ಹೇಳಿದರು. ಮುನ್ನೆಚ್ಚರಿಕೆ ಎಂಬ ಪದವನ್ನು ವಿವರಿಸಿದ ಅವರು ಅದಕ್ಕೆ ಸೂಕ್ತ ಉದಾಹರಣೆಗಳನ್ನೂ ನೀಡಿದರು. ಮನುಷ್ಯ ದೇಹ ಹೊಂದಿರುವ ಅಪಾರ ಮೌಲ್ಯವನ್ನು ತಿಳಿಸಿ ಹೇಳಿದ ಅವರು ನಮ್ಮ ದೇಹವನ್ನು ಯಾವ ರೀತಿ ಬಳಸುತ್ತಿದ್ದೇವೆ ಎಂಬುದನ್ನು ವಿವರಿಸಿದರು. ಡಾ. ಶಿರೀಶ್ ಕುಮಾರ್ 500 ರೂಪಾಯಿ ದೇಣಿಗೆಯನ್ನೂ ನೀಡಿದರು.

ಹಾರ್ಮೋನ್ ಅಥವಾ ಕ್ರೋಮೋಜೋಮ್‌ಗಳ ಬದಲಾವಣೆಯಿಂದ ಮನುಷ್ಯನ ವ್ಯಕ್ತಿತ್ವ ಬದಲಾಗುತ್ತದೆ ಎಂದು ಅಪರ್ಣಾ ಕಾಂಬ್ಳೆ ಹೇಳಿದರು. ಪುರುಷರಲ್ಲಿ ಹೆಣ್ಣಿನಂತಹ ವರ್ತನೆ ಮತ್ತು ಮಹಿಳೆಯರಲ್ಲಿ ಪುರುಷರಂತಹ ವರ್ತನೆಗೆ ಇದು ಕಾರಣವಾಗಬಹುದು. ಇದು ಸಹಜವೇ ಆಗಿರುವುದರಿಂದ ಅದಕ್ಕಾಗಿ ಯಾರನ್ನೂ ದೂಷಿಸಿ ಫಲವಿಲ್ಲ ಎಂದು ಅವರು ಹೇಳಿದರು. ಇದನ್ನು ಸಮಾಜ ಮತ್ತು ಕುಟುಂಬದ ಸದಸ್ಯರ ಜೊತೆ ಹಂಚಿಕೊಳ್ಳಬೇಕು. ಈ ಮೂಲಕ ಎಂಎಸ್‌ಎಂ ಮತ್ತು ಹಿಜ್ರಾಗಳ ಬಗೆಗಿನ ಧೋರಣೆಯನ್ನು ಬದಲಾಯಿಸಬಹುದು. ಈ ಜಾಗೃತಿ ಕಳಂಕ ಮತ್ತು ತಾರತಮ್ಯ ನಿವಾರಣೆಗೆ ಸಹಕಾರಿ. ಸಮಾಜ ಮತ್ತು ಕುಟುಂಬದ ಸದಸ್ಯರು ಅವರನ್ನು ಅವರು ಇದ್ದ ಹಾಗೆ ಸ್ವೀಕರಿಸುವುದಕ್ಕೆ ಸಿದ್ಧವಾಗಬೇಕು ಎಂದು ಅವರು ಕರೆ ನೀಡಿದರು.

ಆನಂತರ ಮನರಂಜನಾ ಕಾರ್ಯಕ್ರಮ ನಡೆಯಿತು. ಎಸ್‌ಟಿಐ ಸೋಂಕಿನ ವಿಧಗಳು ವಿಷಯದ ಮೇಲೆ ನಾಟಕ ಪ್ರದರ್ಶನ ನಡೆಯಿತು. ವಾಕ್ ಆ್ಯಂಡ್ ಟಾಕ್ ಎಂಬ ರಸಪ್ರಶ್ನೆ ಕಾರ್ಯಕ್ರಮ ನಡೆಸಲಾಯಿತು. ಕಿರಣ್ ಕುಂಭಾರ್ ಮತ್ತು ಅಮೀರ್ ಪಠಾಣ್ ಲಾವಣಿ ನೃತ್ಯ ಪ್ರದರ್ಶನ ನೀಡಿದರು.

## ಜನಪದ ತಂಡಗಳಿಗೆ

# ಏಡ್ಸ್ ಜಾಗೃತಿ ಕಾರ್ಯಾಗಾರ

**ಜನಪದ** ತಂಡಗಳಿಗೆ ಮೂರು ದಿನಗಳ ಏಡ್ಸ್ ಜಾಗೃತಿ ಕಾರ್ಯಾಗಾರ ನಜರಾಬಾದ್‌ನ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿ ಆವರಣದ ವೈದ್ಯರ ಭವನದಲ್ಲಿ ನಡೆಯಿತು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ ಮತ್ತು ಜಿಲ್ಲಾ ಏಡ್ಸ್ ತಡೆ ಘಟಕಗಳು ಜಂಟಿಯಾಗಿ ಈ ಕಾರ್ಯಕ್ರಮವನ್ನು ಸಂಯೋಜಿಸಿದ್ದವು.

ಮೂವರು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಕೃಷ್ಣಮೂರ್ತಿ, ಪ್ರಾದೇಶಿಕ ಸಂಯೋಜಕರು, ಹಾಡು ಮತ್ತು ನೃತ್ಯ ವಿಭಾಗ, ಸಂಸ್ಕೃತಿ ಸಚಿವಾಲಯ, ಮತ್ತು ಕೆಸಾಪ್ಸ್‌ನ ಜಿ ಬಿ ಮೇಟಿ ಮತ್ತು ಜಿ ಎಸ್ ಪ್ರವೀಣ್ ಕಾರ್ಯಾಗಾರ ನಡೆಸಿ ಕೊಟ್ಟರು. ಜನಪದ ತಜ್ಞ ಪ್ರೊ. ಕಾಳೇಗೌಡ ನಾಗವಾರ ಕಾರ್ಯಾಗಾರ ಉದ್ಘಾಟಿಸಿದರು. ಭಾಷಾತಜ್ಞ ಲಿಂಗದೇವರು ಹಳೇಮನೆ ಮುಖ್ಯ ಅತಿಥಿಯಾಗಿದ್ದರು. ಕೆಸಾಪ್ಸ್ ಯೋಜನಾ ನಿರ್ದೇಶಕ ಆರ್ ಆರ್ ಜನ್ನು ಉಪಸ್ಥಿತರಿದ್ದರು.

ಏಡ್ಸ್ ತಡೆಗೆ ಸರಕಾರ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಎಚ್‌ಐವಿ ಮತ್ತು ಏಡ್ಸ್ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಮತ್ತು ಹರಡುವಿಕೆ ತಡೆಯಲು ಜನಪದ ತಂಡಗಳನ್ನು ಬಳಸಿಕೊಳ್ಳುವುದು ಹೊಸ ಬಗೆಯ ಚಿಂತನೆಯಾಗಿದೆ ಎಂದು ಕಾಳೇಗೌಡ ನಾಗವಾರ ಹೇಳಿದರು. ಏಡ್ಸ್ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲು ಇಂತಹ ಇನ್ನಷ್ಟು ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಅವರು ಹೇಳಿದರು.

ಮೈಸೂರು, ಶಿವಮೊಗ್ಗ, ಮಂಡ್ಯ, ತುಮಕೂರು, ಬೆಂಗಳೂರು ಗ್ರಾಮಾಂತರ, ಗದಗ, ಹಾಸನ, ಬಳ್ಳಾರಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳ 14 ಜನಪದ ತಂಡಗಳ ಸುಮಾರು 115 ಜನಪದ ಕಲಾವಿದರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಎಚ್‌ಐವಿ ಹರಡುವಿಕೆ ತಡೆಯ ವಿವಿಧ ವಿಧಾನಗಳ ಬಗ್ಗೆ ಈ ಕಲಾವಿದರಿಗೆ ತರಬೇತಿ ನೀಡಲಾಯಿತು. ಇವರು ತಮ್ಮ ತಮ್ಮ ಜಿಲ್ಲೆಗಳಲ್ಲಿ ಯಕ್ಷಗಾನ, ವೀರಗಾಸೆ, ಜೋಗಿಪದ, ಹರಿಕಥೆ, ಕರಪಲ ಮೇಳ, ಬೀಸು ಕಂಸಾಳೆ, ಡೊಳ್ಳು ಪದ, ಬೀದಿ ನಾಟಕಗಳ ಮೂಲಕ ಜನರಲ್ಲಿ ಎಚ್‌ಐವಿ ಮತ್ತು ಏಡ್ಸ್ ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ.

ಮೈಸೂರಿನ ವಿದ್ಯಾಭವನದಲ್ಲಿ ಈ ಕಾರ್ಯಾಗಾರ ನಡೆಯಿತು. ಪುರುಷ ಮತ್ತು ಮಹಿಳೆಯರು ಸೇರಿ ಒಟ್ಟು



112 ಕಲಾವಿದರು ಭಾಗವಹಿಸಿದ್ದರು. ಧಾರವಾಡದ್ದಲಿಯೂ 126 ಕಲಾವಿದರಿಗಾಗಿ ಇಂತಹುದೇ ಕಾರ್ಯಾಗಾರ ನಡೆಸಲಾಗಿತ್ತು. ಖ್ಯಾತ ಪತ್ರಕರ್ತ ಮತ್ತು ಲೇಖಕ ಪಾಟೀಲ ಪುಟ್ಟಪ್ಪ, ರಂಗಕರ್ಮಿ ಬಸವಲಿಂಗಯ್ಯ ಹಿರೇಮಠ್ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಕಾರ್ಯಾಗಾರದಲ್ಲಿ ಭಾಗವಹಿಸಿದ ಇತರ ಜಿಲ್ಲೆಗಳೆಂದರೆ ಬಿಜಾಪುರ, ಚಾಮರಾಜನಗರ, ಚಿಕ್ಕಮಗಳೂರು, ದಾವಣಗೆರೆ, ಗದಗ, ಹಾಸನ, ಹಾವೇರಿ, ಮಂಡ್ಯ, ಮಂಗಳೂರು, ಉಡುಪಿ, ಕೊಪ್ಪಳ, ಉತ್ತರ ಕನ್ನಡ ಮತ್ತು ಬಳ್ಳಾರಿ.

ಸೂಚನೆ: ಈ ಎರಡು ಕಾರ್ಯಾಗಾರದಲ್ಲಿ ಭಾಗವಹಿಸಿದ ತಂಡಗಳಿಂದ 15 ತಂಡಗಳನ್ನು ಆಯ್ದುಕೊಳ್ಳಲಾಗುವುದು. ಈ ತಂಡಗಳು ನವೆಂಬರ್ 23ರಿಂದ ಡಿಸೆಂಬರ್ 9, 2009ರ ವರೆಗೆ 1800 ಪ್ರದರ್ಶನ ನೀಡಲಿವೆ.

# ಹಾಸನ ಒವಿಸಿ ಕೇಸ್‌ಸ್ಟಡಿ

**ಕರ್ನಾಟಕದ** ದಕ್ಷಿಣದ ಜಿಲ್ಲೆಗಳಲ್ಲಿ ಪ್ರತಿ ಎರಡು ತಿಂಗಳಿಗೊಮ್ಮೆ ಒವಿಸಿ ಬೆಂಬಲ ಗುಂಪು ಸಭೆ ನಡೆಯುತ್ತದೆ. ಈ ಸಭೆಯಲ್ಲಿ ಮಕ್ಕಳಿಗೆ ಉಪಯುಕ್ತವಾದ ವಿಷಯಗಳ ಚರ್ಚೆ ನಡೆಯುತ್ತದೆ. ಮನರಂಜನೆ, ಅಧ್ಯಾತ್ಮಿಕ ಅಭಿವೃದ್ಧಿ, ಆರೋಗ್ಯ, ನೈರ್ಮಲ್ಯ ಇತ್ಯಾದಿ ವಿಷಯಗಳು ಇದರಲ್ಲಿ ಒಳಗೊಂಡಿರುತ್ತವೆ. ಸಾಮಾನ್ಯವಾಗಿ ಮಕ್ಕಳನ್ನು ಅವರ ಹೆತ್ತವರು ಅಥವಾ ಪಾಲಕರು ಸಭೆಗೆ ಕರೆ ತರುತ್ತಾರೆ. ಐದರಿಂದ 16 ವರ್ಷ ವಯಸ್ಸಿನ ಮಕ್ಕಳು ಈ ಸಭೆಯಲ್ಲಿ ಭಾಗವಹಿಸುತ್ತಾರೆ.

ಒವಿಸಿ ಸಭೆಗಳ ಆರಂಭದ ದಿನಗಳಲ್ಲಿ ಮಕ್ಕಳನ್ನು ಭೇಟಿಯಾಗುವುದು ಮತ್ತು ಅವರಿಗೆ ಸುರಕ್ಷಿತ ತಾಣವನ್ನು ಒದಗಿಸುವುದು ಉದ್ದೇಶವಾಗಿತ್ತು. ನಂತರ ಈ ಸಭೆಗಳಲ್ಲಿ ಮಕ್ಕಳ ನಿರೀಕ್ಷೆಗಳನ್ನು ಅರ್ಥ ಮಾಡಿಕೊಳ್ಳಲು ಆರಂಭಿಸಲಾಯಿತು. ಈಗ ಮೊದಲೇ ನಿರ್ಧರಿಸಿದ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತದೆ. ಆರಂಭದಲ್ಲಿ ಇದು ಮಕ್ಕಳು ಮನಬಿಚ್ಚಿ ಮಾತನಾಡುವುದಕ್ಕೆ ಸಹಕಾರಿಯಾಯಿತು. ಅವರು ಮಾತನಾಡಲು, ತಮ್ಮ ನಿಲುವುಗಳನ್ನು ಹಂಚಿಕೊಳ್ಳಲು ಮತ್ತು ಯಾವುದೇ ಒತ್ತಡಕ್ಕೆ ಒಳಗಾಗದೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಕಲಿತರು. ಈ ವೇದಿಕೆಯು ಮಕ್ಕಳಿಗೆ ಭೀತಿ ಮುಕ್ತ ವಾತಾವರಣವನ್ನೂ ರೂಪಿಸಿತು. “ಕಳೆದ ಎರಡು ವರ್ಷಗಳಿಂದ ನಾನು ಇಲ್ಲಿ

ಬರ್ತಾ ಇದ್ದೇನೆ. ನಾನೂ ಕನಸು ಕಾಣಬಹುದು ಎಂಬುದು ಈಗ ನನಗೆ ಅರ್ಥವಾಗಿದೆ. ಯಾಕೆಂದರೆ ನನಗೆ ಸಾಮರ್ಥ್ಯವೂ ಇದೆ, ನನ್ನ ಕನಸನ್ನು ನನಸು ಮಾಡುವ ಬೆಂಬಲವೂ ದೊರೆಯುತ್ತಿದೆ" ಎನ್ನುತ್ತಾಳೆ ಪ್ರಿಯಾ (ಹೆಸರು ಬದಲಿಸಲಾಗಿದೆ).

ಈಗ ಮಕ್ಕಳು ಹೆಚ್ಚು ಆತ್ಮವಿಶ್ವಾಸ ಹೊಂದಿದ್ದಾರೆ ಮತ್ತು ಮುಕ್ತವಾಗಿದ್ದಾರೆ. ಹಾಗಾಗಿ ಮಕ್ಕಳು ಯೋಜನೆ ಬಗ್ಗೆ ಹೆಚ್ಚಿನ ಜವಾಬ್ದಾರಿ ವಹಿಸುವಂತಹ ಕಾರ್ಯತಂತ್ರದ ಅಗತ್ಯವಿದೆ ಎಂಬ ಭಾವನೆ ಈಗ ವ್ಯಕ್ತವಾಗಿದೆ. ಇದು ಸ್ಪಷ್ಟವಾಗಿ ಮಕ್ಕಳ ಕಾರ್ಯಕ್ರಮ. ಇದನ್ನು ದೊಡ್ಡವರು ನಡೆಸಿಕೊಂಡು ಹೋಗುವುದು ಅಷ್ಟೊಂದು ಸೂಕ್ತವೇನೂ ಅಲ್ಲ. ಆದುದ-ರಿಂದ ಕಾರ್ಯಕ್ರಮವನ್ನು ದೊಡ್ಡವರ ಕೇಂದ್ರೀಕೃತ ನಿಲುವಿನಿಂದ ಮಕ್ಕಳೇ ಕೇಂದ್ರ ಸ್ಥಾನದಲ್ಲಿರುವ ನಿಲುವಾಗಿ ಬದಲಿಸಿಕೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿ ಮಕ್ಕಳು ಒವಿಸಿ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವುದೇ ಈ ಸಭೆಯ ಮುಖ್ಯ ಗುರಿಯಾಗಿದೆ.

ಮಕ್ಕಳ ಪಾಲ್ಗೊಳ್ಳುವಿಕೆಯ ಈ ಅಭಿಯಾನದ ಹಾಸನದ ಒಂದು ಉದಾಹರಣೆಯನ್ನು ನೋಡೋಣ. ಐಪಿಪಿಸಿಸಿ-ಡಿಐಸಿಯನ್ನು ಹೆಚ್ಚು ಶಿಶು ಸ್ನೇಹಿಯಾಗಿ ಮಾಡಲು ಹೊರಟಾಗ, ಮಕ್ಕಳಿಗೆ ಯಾವ ರೀತಿಯ ಸ್ಥಳ ಬೇಕು ಎಂದು ಯೋಜನಾ ಸಿಬ್ಬಂದಿ ಮಕ್ಕಳನ್ನೇ ಕೇಳಿದರು. ಬೊಂಬೆಗಳು, ಆಟದ ಸಾಮಗ್ರಿ ಮತ್ತು ಗೋಡೆಯಲ್ಲಿ ಹೊಸ ಚಿತ್ರಗಳನ್ನು ಬರೆಸಬೇಕು ಎಂದು ಮಕ್ಕಳು ಹೇಳಿದರು. ಹಾಗಾಗಿ ಈಗ ಇಲ್ಲಿನ ಗೋಡೆಗಳಲ್ಲಿ ಮಕ್ಕಳ ಬಯಕೆಯಂತೆ, ಅವರೇ ವಿನ್ಯಾಸಗೊಳಿಸಿದ ಚಿತ್ರಗಳು ಕಂಗೊಳಿಸುತ್ತಿವೆ.

## ಸಾಂಕ್ರಾಮಿಕ ವಿರುದ್ಧ ಹೋರಾಟಕ್ಕೆ

# ತಂತ್ರಜ್ಞಾನದ ಸಲಕರಣೆ

**ನಾವೀಗ** ತಾಂತ್ರಿಕವಾಗಿ ಸಶಕ್ತವಾದ ವಾತಾವರಣದಲ್ಲಿ ಜೀವಿಸುತ್ತಿದ್ದೇವೆ. ನಮ್ಮಲ್ಲಿ ಎಷ್ಟು ಜನರಿಗೆ ಮೊಬೈಲ್ ಇಲ್ಲದೆ ಒಂದು ದಿನ ಕಳೆಯುವುದು ಸಾಧ್ಯ? ನಮ್ಮ ಜನಸಂಖ್ಯೆಗೆ ಹೋಲಿಸಿದರೆ ಇಂಥವರ ಸಂಖ್ಯೆ ನಗಣ್ಯ ಎಂಬುದರಲ್ಲಿ ಅನುಮಾನವೇ ಇಲ್ಲ. ವರ್ಷಗಳು ಉರುಳಿದಂತೆ ತಂತ್ರಜ್ಞಾನ ನಮ್ಮ ಜಗತ್ತಿನ ಬಹುಭಾಗವನ್ನು ಆಕ್ರಮಿಸಿಕೊಂಡಿದೆ.

ಸಲಕರಣೆ ಸ್ನೇಹಿ ವಾತಾವರಣದಲ್ಲಿ ಈ ಸಲಕರಣೆಗಳೇ ಎಚ್‌ಐವಿಯಂತಹ ಸಾಂಕ್ರಾಮಿಕ ತಡೆಗೆ ಬಳಕೆಯಾಗಬಹುದು ಎಂಬುದನ್ನು ನಾವು ಯೋಚಿಸಿದ್ದೇವೆಯೇ? ಕೆಎಚ್‌ಪಿಟಿಯ ವೆಬ್‌ಸೈಟ್‌ನಲ್ಲಿ ಸದಸ್ಯರೊಬ್ಬರು ಈ ಪ್ರಶ್ನೆ ಎತ್ತಿದ್ದಾರೆ. ಇದಕ್ಕೆ ಬಂದ ಪ್ರತಿಕ್ರಿಯೆಗಳೂ ಆಸಕ್ತಿಕರವೇ ಆಗಿದೆ. ಸಾಂಕ್ರಾಮಿಕಗಳ ವಿರುದ್ಧ ಹೋರಾಟದಲ್ಲಿ ತಂತ್ರಜ್ಞಾನಕ್ಕೆ ಪ್ರಮುಖ ಪಾತ್ರ ಇದೆ ಎಂದೇ ಎಲ್ಲರೂ ಭಾವಿಸುತ್ತಿದ್ದಾರೆ. ಸಂಶೋಧನೆಯಲ್ಲಿ ಭಾರೀ ಮುನ್ನಡೆ ಸಾಧಿಸಲು ತಂತ್ರಜ್ಞಾನ ನಮಗೆ ನೆರವಾಗಿದೆ. ಸೂಕ್ಷ್ಮದರ್ಶಕ, ರೋಗ ಶಾಸ್ತ್ರ, ತಳಿ ವಿಜ್ಞಾನ ಮುಂತಾದ ವಿಷಯಗಳ ಸಲಕರಣೆ ಮತ್ತು ಕೌಶಲ ನಮಗೆ ದೊಡ್ಡ ನೆರವನ್ನೇ ನೀಡಿದೆ. ಸಿಎಂಐಎಸ್, ಬಯೋಮೆಟ್ರಿಕ್ಸ್, ಎಲ್‌ಎಂಐಎಸ್, ಜಿಪಿಎಸ್ ಮತ್ತು ಟೆಲಿ ಮೆಡಿಸಿನ್‌ನಂತಹ ವಿಶೇಷ ಆವಿಷ್ಕಾರಗಳು ಸಾರ್ವಜನಿಕ ಆರೋಗ್ಯ ನಿರ್ವಹಣೆಯ ನಮ್ಮ ದೃಷ್ಟಿಕೋನವನ್ನೇ ಬದಲಾಯಿಸಿವೆ ಎಂಬುದು ಅವರ ಭಾವನೆ.

ಎಚ್‌ಐವಿಯಂತಹ ಸಾಂಕ್ರಾಮಿಕ ತಡೆಗೆ ತಂತ್ರಜ್ಞಾನವನ್ನು ಮಾತ್ರ ನಂಬಿಕೊಂಡು ಇರಬಾರದು ಎಂಬ ಎಚ್ಚರವೂ ಅವರಲ್ಲಿದೆ. ಅಭಿವೃದ್ಧಿಯ ಕ್ಷೇತ್ರದಲ್ಲಿ ನಾವು ಸಮಸ್ಯೆಯೊಂದರಿಂದ ಹೊರಬರುವ ದಾರಿ ಅಥವಾ ಪರಿಹಾರವನ್ನು ಕಂಡುಕೊಳ್ಳುತ್ತೇವೆ. ನಂತರ ಸಮಸ್ಯೆಗೆ ಅದು ಮಾತ್ರ ಪರಿಹಾರ ಎಂದು ಭಾವಿಸುತ್ತೇವೆ. ಎಚ್‌ಐವಿ ಮತ್ತು ಏಡ್ಸ್ ಸಾಂಕ್ರಾಮಿಕ ತಡೆಯುವ ಪ್ರಯತ್ನದಲ್ಲಿ ತಂತ್ರಜ್ಞಾನಕ್ಕೆ ಪಾತ್ರ ಇದೆ. ಅಗ್ಗ ಮತ್ತು ಮಿತವ್ಯಯಕರ ಲಸಿಕೆಗಳಿಂದ ಹಿಡಿದು ಮೂಲಸೌಕರ್ಯ ತೊಡಕುಗಳಿರುವಲ್ಲಿ ಪರ್ಯಾಯ ಸಂವಹನ ವ್ಯವಸ್ಥೆ ವರೆಗೆ ತಂತ್ರಜ್ಞಾನದ ನೆರವು ಪಡೆಯಬಹುದು. ತಂತ್ರಜ್ಞಾನದ ವ್ಯಾಪ್ತಿಯ ಆಚೆಗೂ ವಿಸ್ತರಿಸಿಕೊಂಡಿರುವ ಚಿಂತನ ಕ್ರಮಗಳ ಜೊತೆಗೆ ಸಮನ್ವಯದಿಂದ ಬಳಸಿದರೆ ತಂತ್ರಜ್ಞಾನ ಅತ್ಯಂತ ಪರಿಣಾಮಕಾರಿ ಎನಿಸಬಹುದು. ತಂತ್ರಜ್ಞಾನದ ಮುನ್ನಡೆ ಖಂಡಿತವಾಗಿಯೂ ಇಡೀ ತಡೆ ಮತ್ತು ನಿಯಂತ್ರಣ ಪ್ರಕ್ರಿಯೆಯನ್ನು ಇನ್ನಷ್ಟು ತ್ವರಿತಗೊಳಿಸುತ್ತದೆ ಎಂಬುದೇ ಎಲ್ಲ ಸದಸ್ಯರ ಅಭಿಪ್ರಾಯವಾಗಿದೆ. ಸಾಮಾಜಿಕ, ಆರ್ಥಿಕ, ಲಿಂಗತ್ವ ವಿಷಯಗಳನ್ನು ಒಳಗೊಂಡ ಧೋರಣೆ ಅತ್ಯಂತ ಪರಿಣಾಮಕಾರಿ ಮತ್ತು ಫಲಪ್ರದ ಆಗುವುದರಲ್ಲಿ ಸಂಶಯವಿಲ್ಲ.

ಒಟ್ಟಿನಲ್ಲಿ, ನಿಶ್ಚಿತ ಗುರಿಯನ್ನು ಸಾಧಿಸುವಲ್ಲಿ ತಂತ್ರಜ್ಞಾನವನ್ನು ಬಳಸಿಕೊಳ್ಳಬಹುದು ಎಂಬುದು ಸದಸ್ಯರ ಅಭಿಪ್ರಾಯವಾಗಿದೆ ಎಂದು ಚರ್ಚೆಯನ್ನು ಸಮಾರೋಪಗೊಳಿಸಬಹುದು. ನಾವು ಪರಿಹಾರ ಹುಡುಕಲು ಹೊರಟಿರುವ ಸಮಸ್ಯೆಯು ಬೃಹತ್ ಪ್ರಮಾಣದ್ದೇ ಆಗಿರುವುದರಿಂದ ಸಾಧ್ಯವಿರುವ ಮತ್ತು ಲಭ್ಯವಿರುವ ಎಲ್ಲವನ್ನೂ ಬಳಸಿಕೊಳ್ಳಬೇಕಾದ ಅಗತ್ಯ ಇದೆ.

# ಚಾಂದಿನಿ– ಒಂದು ಮಾದರಿ

ಎಂಎಸ್‌ಎಂಗಳ ಸಮುದಾಯ ಆಧರಿತ ಸಂಘಟನೆ ಬೆಳಗಾವಿಯ ಸ್ವೀಕಾರ್‌ನ ಉಪಾಧ್ಯಕ್ಷೆ ಶ್ರೀಮತಿ ಚಾಂದಿನಿ ಸಮುದಾಯದೊಳಗೆ ಮಾತ್ರವಲ್ಲ, ಸಾಮಾನ್ಯ ಜನಸಮುದಾಯದಲ್ಲಿಯೂ ಜನಪ್ರಿಯವಾಗಿದ್ದಾರೆ. ಜೋಗಪ್ಪನಾಗಿರುವ ಆಕೆ ತನ್ನ ಸಮುದಾಯ ಮತ್ತು ಸಮಾಜದ ಒಳಿತಿಗಾಗಿ ಹಲವು ಹತ್ತು ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಯೋಜನೆಯ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಎಚ್‌ಐವಿ ಮತ್ತು ಏಡ್ಸ್ ಸಂಬಂಧಿ ವಿಷಯಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಅವರಿಗೆ ನೆರವು ನೀಡಿದೆ. ಪಾಥ್ ಸಂಸ್ಥೆಯಲ್ಲಿ ಸಲಹೆಗಾರರಾಗಿ ಕೆಲಸ ಮಾಡಿರುವ ಅವರು ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ದೆಹಲಿ ಮುಂತಾದೆಡೆ ಎಂಎಸ್‌ಎಂ ಕಾರ್ಯಕ್ರಮ ಆರಂಭಕ್ಕೆ ನೆರವು ನೀಡಿದ್ದಾರೆ. ಅವರ ಜೊತೆ ಸಮಯ ಕಳೆಯುವ ಮತ್ತು ಮಾತುಕತೆ ನಡೆಸುವ ಅವಕಾಶವೊಂದು ಶ್ರೀ ಸಿದ್ಧಾರೂಢ ಮತ್ತು ಶ್ರೀ ಪವನ್ ಕುಮಾರ್ ಅವರಿಗೆ ದೊರೆಯಿತು. ಈ ಮಾತುಕತೆಯ ಆಯ್ದ ಭಾಗ ಇಲ್ಲಿದೆ:

**ಸಿದ್ಧಾರೂಢ: ಕೆಎಚ್‌ಪಿಟಿಯ ಶುಭಾಶಯಗಳು. ನಾನು ಸಿದ್ಧಾರೂಢ, ಕೆಎಚ್‌ಪಿಟಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಿಮ್ಮ ಕೆಲಸದ ಬಗ್ಗೆ ಸಾಕಷ್ಟು ಕೇಳಿದ್ದೇವೆ, ನಿಮ್ಮ ಸಂದರ್ಶನ ಮಾಡಲು ಬಯಸಿದ್ದೇವೆ.**

**ಚಾಂದಿನಿ:** ನಮಸ್ತೆ, ನೀವು ನನ್ನ ಮನೆಗೆ ಬಂದಿರುವುದು ಬಹಳ ಖುಷಿಯಾಗಿದೆ. ನೀವು ಮುಕ್ತವಾಗಿ ನಿಮ್ಮ ಪ್ರಶ್ನೆಗಳನ್ನು ಕೇಳಬಹುದು.

**ಸಿದ್ಧಾರೂಢ: ನಿಮ್ಮ ಜೀವನದ ಬಗ್ಗೆಯೇ ಯಾಕೆ ಮಾತುಕತೆ ಆರಂಭಿಸಬಾರದು? ಈ ಎಲ್ಲ ವರ್ಷಗಳಲ್ಲಿ ನಿಮ್ಮ ಅನುಭವ ಏನು ಎಂಬುದನ್ನು ಹಂಚಿಕೊಳ್ಳುವಿರಾ?**

**ಚಾಂದಿನಿ:** ನಾನು ಗಂಡಾಗಿ ಹುಟ್ಟಿದ್ದರೂ ಬಾಲ್ಯದಿಂದಲೇ ನನಗೆ ಹೆಣ್ಣಿನ ಭಾವನೆಗಳಿದ್ದವು. ಚಿಕ್ಕಂದಿನಿಂದಲೇ ಹೆಣ್ಣು ಮಕ್ಕಳು ಮಾಡುವ ಎಲ್ಲ ಕೆಲಸಗಳನ್ನೂ ಹೆಚ್ಚು ಇಷ್ಟಪಟ್ಟು ಮಾಡುತ್ತಿದ್ದೆ. ಆದರೆ ಮನೆಯವರು ಇದಕ್ಕೆ ಬಹಳ ವಿರೋಧ ವ್ಯಕ್ತಪಡಿಸಿದರು. ನನ್ನ ವರ್ತನೆಯನ್ನು ಬದಲಾಯಿಸಲು ಬಹಳ ಪ್ರಯತ್ನವನ್ನೂ ಮಾಡಿದರು. ಹತ್ತು ವರ್ಷವಾಗಿದ್ದಾಗ ನನಗೆ ಅತ್ಯಂತ ತೀವ್ರ ಅನಾರೋಗ್ಯ ಕಾಡಿತು. ವೈದ್ಯರೂ ನನ್ನ ಆಸೆ ಬಿಟ್ಟಿದ್ದರು. ಆ ಸಂದರ್ಭದಲ್ಲಿ ನಮ್ಮ ಮನೆಯ ಸಮೀಪ ವಾಸಿಸುವ ಮಹಿಳೆಯೊಬ್ಬರು ನನ್ನನ್ನು ಸವದತ್ತಿ ಎಲ್ಲಮ್ಮನಿಗೆ ಜೋಗಪ್ಪನಾಗಿ ಬಿಡುವಂತೆ ಅಪ್ಪ ಅಮ್ಮನಿಗೆ ಸಲಹೆ ನೀಡಿದರು. ಹಾಗಾಗಿ ನಾನು ಜೋಗಪ್ಪ ಆದೆ. ಆನಂತರವೂ ಸಂಪ್ರದಾಯವಾದಿ ಜನರಿಂದ ನನಗೆ ಬಹಳ ತೊಂದರೆ ಎದುರಾಗಿದೆ.

**ಸಿದ್ಧಾರೂಢ: ಈ ಎಲ್ಲ ಸಮಸ್ಯೆಗಳಿಂದ ನೀವು ಹೇಗೆ ಹೊರಗೆ ಬಂದಿರಿ?**

**ಚಾಂದಿನಿ:** ಬಹಳ ವರ್ಷಗಳ ಕಾಲ ಇದೊಂದು ದೊಡ್ಡ ಹೋರಾಟವೇ ಆಗಿತ್ತು. ಕ್ರಮೇಣ, ನನ್ನ ಕೆಲಸದ ಮೂಲಕ ನನಗೆ ಹಲವು ಜನರ ಪರಿಚಯವಾಯಿತು. ಸರಕಾರದ ವಿವಿಧ ಇಲಾಖೆಗಳು ಮತ್ತು ರಾಜಕಾರಣಿಗಳ ಸಂಪರ್ಕವೂ ದೊರೆಯಿತು. ಸಮಾಜದಲ್ಲಿರುವ ಬಡಜನರ ಅಗತ್ಯಗಳಿಗೆ ಸ್ಪಂದಿಸಲು ಈ ಸಂಪರ್ಕವನ್ನು ನಾನು ಬಳಸಿಕೊಂಡೆ. ಆ ಮೂಲಕ ನನ್ನ ಬಗ್ಗೆ ಜನರಲ್ಲಿ ವಿಶ್ವಾಸವೂ ಬೆಳೆಯಿತು. ಜನರು ನನ್ನನ್ನು ಅರ್ಥ ಮಾಡಿಕೊಂಡ ನಂತರ ನನಗೆ ಬೆಂಬಲವಾಗಿ ನಿಂತರು. ಇದರಿಂದಾಗಿ ಸಮಸ್ಯೆಗಳ ಪರಿಹಾರ ಸುಲಭವಾಯಿತು. “ಹಕ್ಕಿಯೊಂದು ಗೂಡಿನಲ್ಲಿ ಕೂತಿದ್ದಾಗ ಅದು ಹೊರಜಗತ್ತಿನ ಬಗ್ಗೆ ಭೀತಿಯಲ್ಲೇ ಇರುತ್ತದೆ. ಆದರೆ ಒಮ್ಮೆ ಹಾರಲು ಆರಂಭಿಸಿದ ನಂತರ, ಅದಕ್ಕೆ ಶಕ್ತಿ ಬರುತ್ತದೆ. ಸವಾಲುಗಳನ್ನು ಎದುರಿಸುವ ಕೌಶಲ ತನ್ನಿಂತಾನಾಗಿಯೇ ಬಂದು ಬಿಡುತ್ತದೆ”.

**ಸಿದ್ಧಾರೂಢ: ಜನರ ಸೇವೆಗೆ ನೀವು ಯಾವ ಯಾವ ಕೆಲಸದಲ್ಲಿ ತೊಡಗಿದ್ದೀರಿ?**

**ಚಾಂದಿನಿ:** ಮೊತ್ತ ಮೊದಲನೆಯದಾಗಿ ಮತ್ತು ಅತ್ಯಂತ ಮುಖ್ಯವಾಗಿ ನಾನು ನನ್ನ ಸಮುದಾಯದ ಜನರ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸುತ್ತೇನೆ. ಸಾಮಾನ್ಯ ಜನ ಸಮುದಾಯದಿಂದ ನೆರವು ಕೇಳಿ ಬಂದ ಯಾರನ್ನೂ ಹಾಗೆಯೇ ಹಿಂದಕ್ಕೆ ಕಳಿಸಿಲ್ಲ.

**ಸಿದ್ಧಾರೂಢ: ಎಂಎಸ್‌ಎಂ ಸಮುದಾಯದ ಜೊತೆ ನೀವು ಮಾಡುತ್ತಿರುವ ಕೆಲಸವನ್ನು ವಿವರಿಸುತ್ತೀರಾ?**

**ಚಾಂದಿನಿ:** ಈ ಯೋಜನೆ ಆರಂಭವಾಗುವುದಕ್ಕೂ ಮೊದಲೇ ನಾನು ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿರುವ ಎಂಎಸ್‌ಎಂಗಳ ಜೊತೆ ಬಹಳಷ್ಟು ಸಂಪರ್ಕ ಹೊಂದಿದ್ದೆ. ಹಲವು ಜನ ನನ್ನ ಹತ್ತಿರದ ಗೆಳೆಯರು ಎಚ್‌ಐವಿ ಮತ್ತು ಏಡ್ಸ್‌ನಿಂದಾಗಿ ಸಾವನ್ನಪ್ಪಿದ್ದನ್ನು ನಾನು ಕಂಡಿದ್ದೇನೆ. ಈ ಸೋಂಕಿನ ಬಗ್ಗೆ ನನಗೆ ಗೊತ್ತಾದಾಗಲೇ ನಾನು ತಿಳಿದವರಿಂದ ಮಾಹಿತಿ ಪಡೆದು ಸರಕಾರಿ ಆಸ್ಪತ್ರೆಯಲ್ಲಿ ಎಚ್‌ಐವಿ ಪರೀಕ್ಷೆ ಮಾಡಿಸಿಕೊಂಡೆ. ನನ್ನ ಎಚ್‌ಐವಿ ಸ್ಥಿತಿಯನ್ನು ದೃಢಪಡಿಸಿಕೊಂಡ ನಂತರ, ನಾನು 12 ಎಂಎಸ್‌ಎಂಗಳನ್ನು ಜೊತೆ ಸೇರಿಸಿ ಅವರನ್ನು ಪರೀಕ್ಷೆಗೆ ಕರೆದುಕೊಂಡು ಹೋದೆ. ಆಪ್ತಸಮಾಲೋಚಕರು ಮತ್ತು ಪ್ರಯೋಗಾಲಯ ತಂತ್ರಜ್ಞರಿಗೆ ಇದೊಂದು ಆಶ್ಚರ್ಯವಾಗಿತ್ತು.

**ಬಿಕ್ಕಟ್ಟುಗಳು ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಜನರ ಜೀವನದ ಅವಿಭಾಜ್ಯ ಅಂಗ. ಎಲ್ಲಿಯೇ ಬಿಕ್ಕಟ್ಟು ಕಂಡು ಬಂದರೂ, ಮಧ್ಯ ರಾತ್ರಿಯಾದರೂ ನಾನು ನನ್ನ ಜನರ ನೆರವಿಗೆ ಧಾವಿಸುತ್ತೇನೆ**

# ನಿಮ್ಮ ಪುಟ




ಅವರು ನಮ್ಮ ಜೀವನದ ಬಗ್ಗೆ ಹಲವು ಪ್ರಶ್ನೆಗಳನ್ನು ಕೇಳಿದರು. ನಾವು ನಮ್ಮ ಬದುಕಿನ ಬಗ್ಗೆ ಅವರಿಗೆ ಬೇಕಾದ ಎಲ್ಲ ಮಾಹಿತಿಯನ್ನೂ ನೀಡಿ ಪರೀಕ್ಷೆ ಮಾಡಿಸಿಕೊಂಡೆವು.

ಯೋಜನೆ ಆರಂಭಗೊಂಡ ನಂತರ ಡಿಐಸಿ ನಾವು ಭೇಟಿಯಾಗುವ ನಮ್ಮ ನೆಚ್ಚಿನ ಸ್ಥಳವಾಯಿತು. ಬಹಳಷ್ಟು ಜೋಗಪ್ಪಗಳು ಡಿಐಸಿಗೆ ಬರಲು ಮುಜುಗರಪಡುತ್ತಾರೆ. ಒಂದು ಸಂದರ್ಭದಲ್ಲಿ ನಾವು ಡಿಐಸಿಯಲ್ಲಿ ನಮ್ಮ ದೇವಿಗೆ ಪೂಜೆಯ ಕಾರ್ಯಕ್ರಮ ಇಟ್ಟುಕೊಂಡೆವು. ಅದ-ಕ್ಕೆ ಸಿಬ್ಬಂದಿ ಮತ್ತು ಇತರ ಜೋಗಪ್ಪಗಳನ್ನು ಆಹ್ವಾನಿಸಿದೆವು. ಯೋಜನೆ ಮತ್ತು ಕಾಂಡೋಮ್ ಬಳಕೆ ಬಗ್ಗೆ ಸೂಕ್ಷ್ಮತೆ ಮೂಡಿಸಲು ನಾನು ಈ ಸಂದರ್ಭವನ್ನು ಬಳಸಿಕೊಂಡೆ. ಆ ದಿನ ನಮ್ಮ ಮನೆಯಲ್ಲಿ ಕ್ಲಿನಿಕ್ ಕೂಡ ನಡೆಯಿತು. ಅಂದು ಆಗಮಿಸಿದ್ದ ಎಲ್ಲ ಜೋಗಪ್ಪಗಳು ಯೋಜನೆಯ ಸೇವೆ ಪಡೆದುಕೊಳ್ಳುವುದಾಗಿ ಹೇಳಿದರು.

ಬಿಕ್ಕಟ್ಟುಗಳು ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಜನರ ಜೀವನದ ಅವಿಭಾಜ್ಯ ಅಂಗ. ಎಲ್ಲಿಯೇ ಬಿಕ್ಕಟ್ಟು ಕಂಡು ಬಂದರೂ, ಮಧ್ಯ ರಾತ್ರಿಯಾದರೂ ನಾನು ನನ್ನ ಜನರ ನೆರವಿಗೆ ಧಾವಿಸುತ್ತೇನೆ. ನಮ್ಮ ಸಮುದಾಯದ ಜನರನ್ನು ರಕ್ಷಿಸಲು ಪೊಲೀಸ್, ಸೇನಾ ಸಿಬ್ಬಂದಿ, ಮಾಧ್ಯಮ, ಸ್ಥಳೀಯ ಗೂಂಡಾಗಳು, ರಾಜಕಾರಣಿಗಳು ಮತ್ತು ಇತರ ಜನರ ನೆರವು ಪಡೆದ ಹಲವು ಉದಾಹರಣೆಗಳಿವೆ.

**ಸಿದ್ಧಾರೂಢ: ಲೈಂಗಿಕ ವೃತ್ತಿಪರ ಮಹಿಳೆಯರು ಮತ್ತು ಎಚ್‌ಐವಿ ಪಾಸಿಟಿವ್ ಜನರಿಗೆ ನೆರವು ನೀಡುವ ಅವಕಾಶ ನಿಮಗೆ ಒದಗಿ ಬಂದಿತ್ತೇ?**

**ಚಾಂದಿನಿ:** ಎಂಎಸ್‌ಎಂಗಳ ಹಾಗೆಯೇ ಲೈಂಗಿಕ ವೃತ್ತಿಪರ ಮಹಿಳೆಯರೂ ಸಮಾಜದ ಎಲ್ಲ ವರ್ಗಗಳಿಂದ ವಿವಿಧ ರೀತಿಯ ತೊಂದರೆಗೆ ಒಳಗಾಗುತ್ತಾರೆ. ಲೈಂಗಿಕ ವೃತ್ತಿಪರ ಮಹಿಳಾ ಸಮುದಾಯದ ಜೊತೆಗೂ ನಾನು ಉತ್ತಮ ಬಾಂಧವ್ಯ ಹೊಂದಿದ್ದೇನೆ. ಬಂಧನ ಆದಾಗ ಮತ್ತು ಆ ಸುದ್ದಿ ನನಗೆ ತಲುಪಿದ ಕೂಡಲೇ ನಾನು ಯಾವ ರೀತಿಯಲ್ಲಿ ಸಹಾಯ ಮಾಡಬಹುದು ಎಂದು ಪ್ರಯತ್ನಿಸುತ್ತೇನೆ. ಕೆಲವು ಸಂದರ್ಭಗಳಲ್ಲಿ ಬ್ರಾಥೆಲ್‌ಗಳ ಮೇಲೆ ನಿರಂತರವಾಗಿ ದಾಳಿ ನಡೆಯುತ್ತದೆ. ಪ್ರಕರಣ ದಾಖಲಿಸುವ ಮೊದಲೇ ಈ ಮಹಿಳೆಯರ ಬಿಡುಗಡೆ ಮಾಡುವುದಕ್ಕಾಗಿ ನಾನು ಮಧ್ಯಪ್ರವೇಶ ನಡೆಸುತ್ತೇನೆ. ಹೀಗಾಗಿ ನನ್ನನ್ನು ಅವರು ಗೌರವಿಸುತ್ತಾರೆ ಮತ್ತು ನನ್ನ ಸಮಾಜ ಸೇವೆಗೆ ಬೆಂಬಲ ನೀಡುತ್ತಿದ್ದಾರೆ.

**ಸಿದ್ಧಾರೂಢ: ಎಚ್‌ಐವಿಯೊಂದಿಗೆ ಜೀವಿಸುತ್ತಿರುವ ಜನರ ಜೊತೆ ನೀವು ಮಾಡುತ್ತಿರುವ ಕೆಲಸವನ್ನು ವಿವರಿಸುತ್ತೀರಾ?**

**ಚಾಂದಿನಿ:** ಎಚ್‌ಐವಿಯೊಂದಿಗೆ ಜೀವಿಸುತ್ತಿರುವ ಜನರಿಗೆ ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳಲು ಸೂಕ್ತ ಬೆಂಬಲ ದೊರಕದ ಸಂದರ್ಭದಲ್ಲಿ ನಾನು ಅವರಿಗೆ ಸಹಕರಿಸಲು ಪ್ರಯತ್ನಿಸುತ್ತೇನೆ. ವೈದ್ಯಕೀಯ ಸೇವೆ ಪಡೆದುಕೊಳ್ಳಲು ನಾನು 5-6 ಎಚ್‌ಐವಿ ಪಾಸಿಟಿವ್ ಕುಟುಂಬಗಳಿಗೆ ನೆರವು ನೀಡುತ್ತಿದ್ದೇನೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿ ಎಚ್‌ಐವಿಯಿಂದಾಗಿ ಹೆತ್ತವರು ಮೃತಪಟ್ಟ ನಂತರ ಅವರ ಪಾಸಿಟಿವ್ ಮಗುವನ್ನು ನೋಡಿಕೊಳ್ಳುವವರು ಯಾರೂ ಇರಲಿಲ್ಲ. ಸಂಪೂರ್ಣವಾಗಿ ಕೈಬಿಡಲಾಗಿತ್ತು. ನಾನು ಅಲ್ಲಿಗೆ ಹೋಗಿ ಆ ಮಗುವಿನ ಅಜ್ಜ-ಅಜ್ಜಿಯರನ್ನು ಮಾತನಾಡಿಸಿ ಅವರನ್ನು ಹಾಸ್ಟೆಲ್ ಒಂದಕ್ಕೆ ಕರೆದುಕೊಂಡು ಹೋದೆ. ಆಪ್ತಸಮಾಲೋಚನೆ ನಂತರ ಮಗುವನ್ನು ಹಾಸ್ಟೆಲ್‌ಗೆ ಸೇರಿಸಲಾಯಿತು. ಈಗ ಆ ಹುಡುಗ ಚೆನ್ನಾಗಿದ್ದಾನೆ. ಆಗಾಗ ನನಗೆ ಫೋನ್ ಮಾಡುತ್ತಾನೆ. ನಾನು ಆಗಾಗ ಹಾಸ್ಟೆಲ್‌ಗೆ ಆಹಾರ ಧಾನ್ಯ ಮತ್ತು ಬಿಸ್ಕೆಟ್ ನೀಡುತ್ತೇನೆ. ಕಳೆದ ಒಂದು ವರ್ಷದಲ್ಲಿ ನನ್ನ ಮೂಲಕ ಆರು ಮಕ್ಕಳು ಹಾಸ್ಟೆಲ್ ಸೇರಿದ್ದಾರೆ.

**ಸಿದ್ಧಾರೂಢ: ನೀವು ಮಾಡುತ್ತಿರುವ ಒಳ್ಳೆಯ ಕೆಲಸದ ನಡುವೆ ನಿಮಗೆ ತೊಂದರೆ ಎದುರಾಗಿದೆಯೇ?**

**ಚಾಂದಿನಿ:** ಹೌದು. ಹಲವು ಬಾರಿ ನಾನು ತೊಂದರೆ ಎದುರಿಸಿದ್ದೇನೆ. ಒಂದು ಬಾರಿ ನಾನು ಜೋಗಪ್ಪಗಳ ಪೆನ್ಶನ್ ಹಣಕ್ಕಾಗಿ ಸರಕಾರಿ ಕಚೇರಿಗೆ ಹೋಗಿದ್ದೆ. ಆ ಸಂದರ್ಭದಲ್ಲಿ ಅಲ್ಲಿದ್ದ ಅಧಿಕಾರಿ ಜೋಗಪ್ಪಗಳ ಹಾಗೆ ವರ್ತಿಸುವುದನ್ನು ನಿಲ್ಲಿಸಬೇಕು. ಇತರರು ಜೋಗಪ್ಪ ಅಥವಾ ಎಂಎಸ್‌ಎಂ ಆಗುವುದನ್ನು ತಡೆಯಬೇಕು ಮುಂತಾದ ಷರತ್ತು ಹಾಕಿದರು. ನನಗೆ ಬಹಳ ಹತಾಶೆಯಾಯಿತು. ಇತರರನ್ನು ಎಂಎಸ್‌ಎಂ ಆಗದಂತೆ ತಡೆಯುವುದು ನನ್ನ ಕೆಲಸವಲ್ಲ ಎಂದು ಹೇಳಿ ನಾನು ಹಿಂದಕ್ಕೆ ಬಂದೆ.

**ಸಿದ್ಧಾರೂಢ: ಸಾಮಾನ್ಯ ಜನರೊಂದಿಗೆ ನೀವು ಮಾಡಿದ ಕೆಲಸವನ್ನು ನಮ್ಮೊಂದಿಗೆ ಹಂಚಿಕೊಳ್ಳುವಿರಾ?**

**ಚಾಂದಿನಿ:** ಕಳೆದ ಹಲವು ವರ್ಷಗಳ ಅವಧಿಯಲ್ಲಿ ನಾನು ಸರಕಾರಿ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳ ಜೊತೆ ಸಂಪರ್ಕ ಹೊಂದಿದ್ದೇನೆ. ಈ ಸಂಪರ್ಕಗಳನ್ನು ಇತರರಿಗೆ ನೆರವು ನೀಡಲು ನಾನು ಬಳಸಿಕೊಳ್ಳುತ್ತೇನೆ. ಈಗ ನಮ್ಮಲ್ಲಿ ಬೀದಿ ದೀಪ, ಉತ್ತಮ ರಸ್ತೆಗಳು ಮತ್ತು ಕುಡಿಯುವ ನೀರಿನ ಸೌಲಭ್ಯ ಬಂದಿದೆ. ಮುಂದಿನ ಕೆಲವು ದಿನಗಳಲ್ಲಿ ಚರಂಡಿ ಕೆಲಸವೂ ಪೂರ್ಣಗೊಳ್ಳಲಿದೆ. ಕಳೆದ ಕೆಲವು ವರ್ಷಗಳಿಂದ ನಾನು ಉಚಿತ ವಿವಾಹಗಳನ್ನೂ ಸಂಘಟಿಸುತ್ತಿದ್ದೇನೆ.

**ಸಿದ್ಧಾರೂಢ: ಉಚಿತ ವಿವಾಹದ ಕಡೆಗೆ ನೀವು ಗಮನ ಹರಿಸಲು ಕಾರಣವೇನು?**

**ಚಾಂದಿನಿ:** ನಾನು ಎಂಎಸ್‌ಎಂ ಆಗಿರುವುದರಿಂದ ಮಕ್ಕಳನ್ನು ಹೊಂದುವುದು ಸಾಧ್ಯವಿಲ್ಲ. ಹಾಗಾಗಿ ಇತರರಿಗೆ ಮದುವೆ ಮಾಡಿಸುವುದು ನನಗೆ ಬಹಳ ಸಂತೃಪ್ತಿ ನೀಡುತ್ತದೆ. ನಾನು ಬಡ ಜನರನ್ನು ಆಯ್ಕೆ ಮಾಡಿಕೊಂಡು ಅವರಿಗೆ ಮದುವೆಯಾಗಲು ನೆರವು ನೀಡುತ್ತೇನೆ. ಪ್ರತಿ ವರ್ಷವೂ ನನ್ನ ಮನೆಯ ಮುಂದೆಯೇ ಈ ಕಾರ್ಯಕ್ರಮ ನಡೆಯುತ್ತದೆ. ನಾನು ಇತರ ಎಂಎಸ್‌ಎಂ ಗೆಳೆಯರನ್ನೂ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿಸುತ್ತೇನೆ. ಇದರ ಮೂಲಕ ನಮ್ಮ ಬಗ್ಗೆ ಸಮಾಜಕ್ಕೆ ಸಂದೇಶ ನೀಡುವುದೂ ನನ್ನ ಉದ್ದೇಶವಾಗಿದೆ.

**ಸಿದ್ಧಾರೂಢ: ನಿಮ್ಮದೇ ಆದ ಸಮುದಾಯ ಆಧರಿತ ಸಂಘಟನೆ ಹೊಂದುವುದು ಮುಖ್ಯ ಎಂದು ನೀವು ಯಾಕೆ ಹೇಳುತ್ತೀರಿ?**

**ಚಾಂದಿನಿ:** ವೇದ ಕಾಲದಿಂದಲೇ ಎಂಎಸ್‌ಎಂ ವರ್ತನೆ ಇತ್ತು. ಮುಂದಿನ ತಲೆಮಾರುಗಳಲ್ಲಿಯೂ ಅದು ಇರುತ್ತದೆ. ನನ್ನ ಬಯಕೆ ಏನೆಂದರೆ ನಾವು ಈಗ ಅನುಭವಿಸುತ್ತಿರುವ ನೋವು ಮತ್ತು ತೊಂದರೆಗಳು ನಮ್ಮೊಂದಿಗೆ ಕೊನೆಯಾಗಬೇಕು. ಮುಂದಿನ ತಲೆಮಾರಿಗೆ ಇಂತಹ ಅನುಭವ ಉಂಟಾಗಬಾರದು. ಅವರು ಅದರಿಂದ ತೊಂದರೆಗೆ ಒಳಗಾಗಬಾರದು. ಆದುದರಿಂದ ನಮ್ಮದೇ ಆದ ಸಮುದಾಯ ಆಧರಿತ ಸಂಘಟನೆ ಹೊಂದುವುದು ಬಹಳ ಮುಖ್ಯ. ಈ ಮೂಲಕ ನಮ್ಮ ಆರೋಗ್ಯ ಮತ್ತು ಹಕ್ಕುಗಳಿಗಾಗಿ ಕೆಲಸ ಮಾಡಬಹುದು.

**ಸಿದ್ಧಾರೂಢ: ಜನರಿಂದ ನಿಮಗೆ ಯಾವ ರೀತಿಯ ಪ್ರತಿಕ್ರಿಯೆ ದೊರೆಯುತ್ತಿದೆ?**

**ಚಾಂದಿನಿ:** ನನ್ನ ಸ್ಥಿತಿಯಿಂದಾಗಿ ನನ್ನ ಮನೆ ಕಡೆ ತಲೆ ಹಾಕುವುದಕ್ಕೆ ಜನರು ಹಿಂಜರಿಯುತ್ತಿದ್ದ ಕಾಲವೊಂದಿತ್ತು. ಆದರೆ ಈಗ ನನ್ನ ಮನೆ ಹಲವು ಹತ್ತು ಚಟುವಟಿಕೆಗಳ ಕೇಂದ್ರ ಸ್ಥಾನವಾಗಿದೆ. ನನ್ನ ಮನೆಯ ಹೆಸರು ರೇಣುಕಾ ನಿವಾಸ. ಹಾಗಾಗಿ ಇಡೀ ಕಾಲನಿಗೇ ರೇಣುಕಾ ನಗರ ಎಂದು ಹೆಸರು ಇರಿಸಲಾಗಿದೆ. ಸಾಮಾನ್ಯವಾಗಿ ನಾನು ಊರಿನಲ್ಲಿ ನಡೆಯುವ ಎಲ್ಲ ರಾಜಕೀಯ, ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೇನೆ. ಕಳೆದ ವರ್ಷ ಜಾತ್ರೆಯ ಸಂದರ್ಭದಲ್ಲಿ ನನ್ನ ಸೇವೆಯನ್ನು ಸ್ಮರಿಸಿ ನನಗೆ ಸನ್ಮಾನವನ್ನೂ ಮಾಡಲಾಗಿತ್ತು.

**ಸಿದ್ಧಾರೂಢ: ನೀವು ಇಷ್ಟೆಲ್ಲ ಕೆಲಸ ಮಾಡಿದ್ದೀರಿ. ನಿಮಗೆ ಸಂಪರ್ಕಗಳಿವೆ, ನಿಮ್ಮನ್ನು ಜನರು ಗುರುತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸದ್ಯದಲ್ಲೇನಾದರೂ ನೀವು ಚುನಾವಣೆಗೆ ಸ್ಪರ್ಧಿಸುವ ಸಾಧ್ಯತೆ ಇದೆಯೇ?**

**ಚಾಂದಿನಿ:** ನನ್ನ ಜನರು, ನನ್ನ ಸಮುದಾಯದ ಸದಸ್ಯರು ನನ್ನ ಮೇಲೆ ಚುನಾವಣೆಗೆ ನಿಲ್ಲುವಂತೆ ಒತ್ತಡ ಹೇರುತ್ತಿದ್ದಾರೆ. ಆದರೆ ಈತನಕ ಆ ಬಗ್ಗೆ ನಾನು ಯೋಚನೆ ಮಾಡಿಲ್ಲ. ನಾನು ಇಂದು ಏನಾಗಿದ್ದೇನೆಯೋ ಅದರ ಬಗ್ಗೆ ನನಗೆ ತೃಪ್ತಿ ಇದೆ. ರಾಜಕೀಯ ಅಧಿಕಾರ ದೊರೆತರೆ ಅದು ನನ್ನನ್ನು ಸ್ವಾರ್ಥಿಯನ್ನಾಗಿ, ದುರಾಸೆಯ ವ್ಯಕ್ತಿಯಾಗಿ ಮಾಡಬಹುದು ಎಂಬ ಭೀತಿಯೂ ಇದೆ. ಅದು ನನ್ನನ್ನು ನನ್ನ ಜನರಿಂದ ದೂರ ತಳ್ಳುತ್ತದೆ.

**ಸಿದ್ಧಾರೂಢ: ನಿಮ್ಮ ಸಮುದಾಯದ ಸದಸ್ಯರಿಗೆ ನಿಮ್ಮ ಸಂದೇಶ ಏನು?**

**ಚಾಂದಿನಿ:** ನಾನು ವಿದ್ಯಾವಂತೆ ಮತ್ತು ಶ್ರೀಮಂತ ಮನೆತನದಿಂದ ಬಂದವಳು ಎಂದು ನನ್ನ ಸಮುದಾಯದ ಕೆಲವರು ಭಾವಿಸಿದ್ದಾರೆ. ಈ ಸಮುದಾಯದ ಜನರಿಗೆ ನೆರವು ನೀಡುವ ಅಗತ್ಯವೂ ಇಲ್ಲ ಎಂದು ಕೆಲವು ಭಾವಿಸಿದ್ದಾರೆ. ಆದರೆ ಅದು ಸರಿಯಲ್ಲ. ಎಂಎಸ್‌ಎಂಗಳು ಮಾತ್ರ ಎಂಎಸ್‌ಎಂಗಳ ಕಷ್ಟ ಮತ್ತು ನೋವನ್ನು ಅರ್ಥ ಮಾಡಿಕೊಳ್ಳಬಲ್ಲರು. ಆದುದರಿಂದ ಜೊತೆ ಸೇರುವುದು, ಸಂಘಟನೆ ಕಟ್ಟುವುದು ಬಹಳ ಮುಖ್ಯ. ನಮ್ಮ ಸಮಸ್ಯೆಗೆ ಇದೊಂದೇ ಪರಿಹಾರ.

**ಸಿದ್ಧಾರೂಢ: ಸಾಮಾನ್ಯ ಜನಸಮುದಾಯಕ್ಕೆ ನಿಮ್ಮ ಸಂದೇಶ ಏನು?**

**ಚಾಂದಿನಿ:** ಸರಿಯಾಗಿ ಬಳಸಿದರೆ ಸಣ್ಣದೊಂದು ಮರದ ತುಂಡು ಕೂಡಾ ದೊಡ್ಡ ಕೊಡುಗೆ ನೀಡುತ್ತದೆ. ನಾವು ಹಿಜ್ರಾಗಳಾಗಿದ್ದೂ ಇಷ್ಟೊಂದು ಒಳ್ಳೆಯ ಕೆಲಸ ಮಾಡುತ್ತಿದ್ದೇವೆ. ಆದರೆ ಮುಖ್ಯ ವಾಹಿನಿಯ ಸಮಾಜ ಇಷ್ಟು ಕೆಲಸವನ್ನೂ ಮಾಡುತ್ತಿಲ್ಲ. ಇದನ್ನು ಗುರುತಿಸುವಂತೆ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಜೊತೆಗೆ ನಮ್ಮ ಕೆಲಸವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡುವುದಕ್ಕೆ ನಮಗೆ ಅವಕಾಶ ಕೊಡಿ ಎಂದು ಅವರನ್ನು ಕೇಳಿಕೊಳ್ಳುತ್ತಿದ್ದೇನೆ.

**ಸಿದ್ಧಾರೂಢ: ಚಾಂದಿನಿ, ಬಹಳ ಕೃತಜ್ಞತೆಗಳು. ನಿಮ್ಮ ಮಾತುಗಳು ಸಮುದಾಯಕ್ಕೆ ಪ್ರೇರಣೆ ನೀಡುವುದರ ಜೊತೆಗೆ ಅವರೆಲ್ಲರೂ ಜೊತೆಯಾಗಿ ನಿಮ್ಮನ್ನು ಮಾದರಿಯಾಗಿಸಿ ಬೆಳೆಯುತ್ತಾರೆ ಎಂಬ ಭರವಸೆ ನನಗಿದೆ. ವಂದನೆಗಳು.**

**ನಾನು ವಿದ್ಯಾವಂತೆ ಮತ್ತು ಶ್ರೀಮಂತ ಮನೆತನದಿಂದ ಬಂದವಳು ಎಂದು ನನ್ನ ಸಮುದಾಯದ ಕೆಲವರು ಭಾವಿಸಿದ್ದಾರೆ. ಈ ಸಮುದಾಯದ ಜನರಿಗೆ ನೆರವು ನೀಡುವ ಅಗತ್ಯವೂ ಇಲ್ಲ ಎಂದು ಕೆಲವು ಭಾವಿಸಿದ್ದಾರೆ. ಅದರೆ ಅದು ಸರಿಯಲ್ಲ. ಎಂಎಸ್‌ಎಂಗಳು ಮಾತ್ರ ಎಂಎಸ್‌ಎಂಗಳ ಕಷ್ಟ ಮತ್ತು ನೋವನ್ನು ಅರ್ಥ ಮಾಡಿಕೊಳ್ಳಬಲ್ಲರು**

# ನಿಮ್ಮ ಪುಟ

## ಪೋಸ್ಟರ್ ಕಾಂಪಿಟೀಶನ್





ಜಾಗತಿಕ ಮಟ್ಟದ ಪೋಸ್ಟರ್ ಸ್ಪರ್ಧೆಗೆ ಏಳು ವರ್ಷ ವಯಸ್ಸಿನ ವಿಭಾಗದಲ್ಲಿ ಬಾಬು ಬರೆದ ಪೋಸ್ಟರ್ ಆಯ್ಕೆಯಾಗಿದೆ.

**ಪುಟಾಣಿ ಬಾಬುವಿಗೆ ವಿಚಾರದ ಅಭಿನಂದನೆಗಳು**